


ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 14 ಶನಿವಾರ 2026



ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

46

ಸಂಪುಟ: 46 | ಸಂಚಿಕೆ: 296 | ಪುಟಗಳು: 12
ಜಾಹೀರಾತು: ad@mysurumithra.com, website: www.mysurumithra.com
ಸುದ್ದಿ, ಫೋಟೋಗೆ: news@mysurumithra.com

₹4

ಶಿವರಾತ್ರಿ ನಂತರ ಶುಭವಾಗಲಿದೆ

ತಿಪಟೂರು: ಶಿವರಾತ್ರಿ ಹಬ್ಬದ ನಂತರ ಶುಭವಾಗಲಿದೆ. ಎಲ್ಲರಿಗೂ ಒಳ್ಳೆಯದಾಗಲಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ತಾಲೂಕಿನ ಕಾಡಸಿದ್ದೇಶ್ವರ ಮಠಕ್ಕೆ ಶುಕ್ರವಾರ ಭೇಟಿ ನೀಡಿದ ಸಮಯದಲ್ಲಿ ಸುದ್ದಿಗಾರರೊಂದಿಗೆ ಅವರು ಮಾತ ನಾಡಿದರು. ಅಧಿಕಾರ ಹಂಚಿಕೆ ವಿಚಾರಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಹೈಕಮಾಂಡ್ ಜತೆಗೆ ಏನೆಲ್ಲ ಮಾತುಕತೆ ನಡೆಯಿತು ಎಂಬ ಪ್ರಶ್ನೆಗೆ ಚುಟುಕಾಗಿ ಪ್ರತಿಕ್ರಿಯಿಸಿದರು. ಮುಂದೆ ಏನಾಗುತ್ತದೆ ಎಂಬ ಬಗ್ಗೆ ಚರ್ಚಿಸುವುದಿಲ್ಲ. ಏನು ಮಾಡಬೇಕು ಎಂದು ಚಿಂತಿಸುತ್ತೇನೆ ಎಂದರು. ಅಜ್ಜಯ್ಯ ಅವರೊಂದಿಗೆ ವಿಶೇಷ ಸಂಬಂಧವಿದೆ. ಈ ಕ್ಷೇತ್ರದ ಶಕ್ತಿ ಎಲ್ಲರಿಗೂ ಗೊತ್ತಿದೆ. ಇದೇ ಶಕ್ತಿ, ಅಜ್ಜಯನ ಆಶೀರ್ವಾದದಿಂದ ನಮ್ಮ ಸರ್ಕಾರ ಸ್ಥಾಪನೆಯಾಗಿ, ಮುಂದು ವರಿದಿದೆ ಎಂದು ತಿಳಿಸಿದರು.

ಇತ್ತ ಕೇಂದ್ರ ಬಜೆಟ್ ಅಧಿವೇಶನದ ಮೊದಲ ಹಂತ ಇಂದಿಗೆ ಮುಕ್ತಾಯವಾಗಿದೆ. ಮಾ.9ರಿಂದ 2ನೇ ಹಂತದ ಅಧಿವೇಶನ ಆರಂಭವಾಗಲಿದೆ. ಇತ್ತ ರಾಜ್ಯ ಬಜೆಟ್ ಅಧಿವೇಶನ ಮಾ.6ರಿಂದ ಶುರುವಾಗಲಿದೆ. ಹಾಗಾಗಿ ಈ ತಿಂಗಳಲ್ಲಿ ಇಬ್ಬರು ನಾಯಕರ ದೆಹಲಿಗೆ ಕರೆಸಿಕೊಂಡು ವರಿಷ್ಠರು ಚರ್ಚೆ ನಡೆಸಿ ಬಿಕ್ಕಟ್ಟು ಬಗೆಹರಿಸಬಹುದು ಎಂಬ ವಿಶ್ವಾಸವನ್ನು ಡಿಸಿಎಂ ಡಿ.ಕೆ.ಶಿವಕುಮಾರ್ ಬಣ ವ್ಯಕ್ತಪಡಿಸಿದೆ.

ಮಾತಿಲ್ಲ–ಕತೆಯಿಲ್ಲ: ಈ ಮಧ್ಯೆ ಇಂದು ಬೆಂಗಳೂರಿನಲ್ಲಿ ನಡೆದ ಅಣೆಕಟ್ಟುಗಳ ಸುರಕ್ಷತಾ ಸಮ್ಮೇಳನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಒಂದೇ ವೇದಿಕೆಯಲ್ಲಿ ಅಕ್ಕ–ಪಕ್ಕ ಕುಳಿತಿದ್ದರೂ ಮಾತಿರಲಿ... ಒಬ್ಬರಿಗೊಬ್ಬರು ಮುಖ ಕೂಡ ನೋಡಲಿಲ್ಲ.

ಸಿದ್ದರಾಮಯ್ಯ ಸಿಎಂ ಸ್ಥಾನದಿಂದ ಕೆಳಗಿಳಿಯುವ ಪ್ರಶ್ನೆಯೇ ಇಲ್ಲ: ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಸ್ಥಾನ ತೊರೆಯುವ ಪ್ರಶ್ನೆಯೇ ಇಲ್ಲ ಎಂದು ಹೇಳಿ, ನಾಯಕತ್ವದ ವಿಚಾರದಲ್ಲಿ ಈ ಕ್ಷಣ ಯಾವುದೇ ಚರ್ಚೆಗೆ ಅವ ಕಾಶವಿಲ್ಲ ಎಂದು ಸಮಾಜ ಕಲ್ಯಾಣ ಸಚಿವ ಹೆಚ್.ಸಿ.ಮಹದೇವಪ್ಪ ಹೇಳಿದ್ದಾರೆ.



ಈ ಕ್ಷಣಕ್ಕೆ ಯಾವುದೇ ವಿಷಯ ಚರ್ಚೆಗೆ ಒಳಪಟ್ಟಿಲ್ಲ ಎಂದು ಮಹದೇವಪ್ಪ ಅವರು ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡುತ್ತಾ ಹೇಳಿದರು. ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ. ಶಿವಕುಮಾರ್ ನಡುವೆ ಅಧಿಕಾರ ಹಂಚಿಕೆ ಬಗ್ಗೆ ಕೇಳಿದಾಗ, ಅಂತಹ ಯಾವುದೇ ಚರ್ಚೆಯಿಲ್ಲ. ಎಲ್ಲವೂ ಹೈಕ ಮಾಂಡ್ ತೀರ್ಮಾನಕ್ಕೆ ಬಿಟ್ಟಿದೆ ಎಂದು ಹೇಳಿದರು. ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಸ್ಥಾನ ತ್ಯಜಿಸಬೇಕಾಗಬಹುದು ಎಂಬ ಊಹಾಪೋಹಗಳ ಕುರಿತು ಪ್ರತಿಕ್ರಿಯಿಸಿದ ಮಹದೇವಪ್ಪ, ಆ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದು ಹೇಳಿದರು. ಹೈಕಮಾಂಡ್ ಏನು ತೀರ್ಮಾನಿಸಿದರೂ ಅದನ್ನು ಅನುಸರಿಸುವುದಾಗಿ ಸಿದ್ದರಾಮಯ್ಯ ಈಗಾಗಲೇ ಒಪ್ಪಿಕೊಂಡಿದ್ದಾರೆ ಎಂಬುದನ್ನೂ ಮಹದೇವಪ್ಪ ಹೇಳಿದರು.

ಸಿಇಟಿ: ಅರ್ಜಿ ಸಲ್ಲಿಕೆಗೆ ಫೆ.22ರವರೆಗೆ ಅವಕಾಶ

ಬೆಂಗಳೂರು: ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆಗೆ (ಸಿಇಟಿ) ಅರ್ಜಿ ಸಲ್ಲಿಸುವ ದಿನಾಂಕವನ್ನು ಫೆ.22ರವರೆಗೆ ವಿಸ್ತರಿಸಲಾಗಿದೆ. ಇದುವರೆಗೂ 2.9 ಲಕ್ಷ ವಿದ್ಯಾರ್ಥಿಗಳು ಆಧಾರ್ ಸಂಖ್ಯೆ ಮೂಲಕ ನೋಂದಣಿ ಮಾಡಿಕೊಂಡಿದ್ದಾರೆ. 2.5 ಲಕ್ಷ ಅಭ್ಯರ್ಥಿಗಳು ಶುಲ್ಕ ಪಾವತಿಸಿದ್ದಾರೆ. ಅರ್ಜಿ ಸಲ್ಲಿಕೆಗೆ ಫೆ.17 ಕೊನೆಯ ದಿನಾಂಕವಾಗಿತ್ತು. ಮತ್ತೆ ಐದು ದಿನಗಳು ವಿಸ್ತರಿಸಲಾಗಿದೆ. ಶುಲ್ಕ ಪಾವತಿಗೆ ಫೆ.24 ಕೊನೆಯ ದಿನ ಎಂದು ಪ್ರಾಧಿಕಾರದ ಆಡಳಿತಾಧಿಕಾರಿ ಇಸ್ಲಾವುದ್ದೀನ್ ಗದ್ಯಾಳ ಹೇಳಿದ್ದಾರೆ.

ಕಾವೇರಿ ಜಲಾನಯನ ಯೋಜನೆಗೆ ಮಾರ್ಗಸೂಚಿ

ನವದೆಹಲಿ: ಮೇಕೆದಾಟು ಸೇರಿದಂತೆ ಕಾವೇರಿ ಜಲಾನಯನ ಪ್ರದೇಶದ ವ್ಯಾಪ್ತಿಯ ನೀರಾವರಿ ಯೋಜನೆಗಳ ಅನುಮೋದನೆ ಪ್ರಕ್ರಿಯೆಯನ್ನು ಸುಗಮಗೊಳಿಸುವ ನಿಟ್ಟಿನಲ್ಲಿ ಕೇಂದ್ರ ಜಲ ಆಯೋಗವು ಮಾರ್ಗಸೂಚಿ ಹೊರಡಿಸಿದೆ.

ಮೇಕೆದಾಟು ಯೋಜನೆಗೆ ಕೇಂದ್ರ ಸರ್ಕಾರ ಅನುಮತಿ ನೀಡಿದೆಯೇ ಎಂದು ತಮಿಳುನಾಡು ಸಂಸದೆ ಸುಧಾ ಆರ್. ಕೇಳಿರುವ ಪ್ರಶ್ನೆಗೆ ಲೋಕಸಭೆಯಲ್ಲಿ ಉತ್ತರ ನೀಡಿರುವ ಜಲಶಕ್ತಿ ಖಾತೆ ರಾಜ್ಯ ಸಚಿವ ರಾಜ್ ಭೂಷಣ್ ಚೌಧರಿ, 'ಕರ್ನಾಟಕ, ತಮಿಳುನಾಡು, ಕೇರಳ ಹಾಗೂ ಪುದುಚೇರಿ ■ 6ನೇ ಪುಟಕ್ಕೆ

ಚಾಮುಂಡಿಬೆಟ್ಟ ತಪ್ಪಲಿನ ವಿಶೇಷ ವ್ಯವಸಾಯ ವಲಯ ವಸತಿ ವಲಯವಾಗಿ ಭೂ ಪರಿವರ್ತನೆ

ಮೂರ್‍ನಾಲ್ಕು ದಿನಗಳಲ್ಲಿ ಲೋಕಾಯುಕ್ತಕ್ಕೆ ದೂರು

ಕೃಷ್ಣರಾಜ ಶಾಸಕ ಶ್ರೀವತ್ಸ ಘೋಷಣೆ

ಕಾನೂನು ಬಾಹಿರ ನಿರ್ಣಯ ಕೈಗೊಂಡವರ ವಿರುದ್ಧ ಕ್ರಿಮಿನಲ್ ಕೇಸ್‌ಗೆ ಆಗ್ರಹ

ಮೈಸೂರು, ಫೆ.13– ಚಾಮುಂಡಿಬೆಟ್ಟ ತಪ್ಪಲಿನ ವಿಶೇಷ ವ್ಯವಸಾಯ ವಲಯವನ್ನು ಕಾನೂನು ಬಾಹಿರವಾಗಿ ವಸತಿ ವಲಯವಾಗಿ ಮಾರ್ಪಾಡು ಮಾಡಲು ಮೈಸೂರು ಅಭಿವೃದ್ಧಿ ಪ್ರಾಧಿಕಾರ(ಎಂಡಿಎ)ದ ಸಭೆಯಲ್ಲಿ ನಿರ್ಣಯಿಸಿ, ಸರ್ಕಾರದ ಅನುಮತಿಗೆ ಶಿಫಾರಸು ಮಾಡಿರುವ ಬಗ್ಗೆ ಮೂರ್‍ನಾಲ್ಕು ದಿನಗಳಲ್ಲಿ ಲೋಕಾಯುಕ್ತಕ್ಕೆ ದೂರು ನೀಡುವುದಾಗಿ ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ತಿಳಿಸಿದ್ದಾರೆ.


ಟಿ.ಎಸ್.ಶ್ರೀವತ್ಸ

ಎಂಡಿಎ ಕಾನೂನು ಬಾಹಿರ ನಿರ್ಣಯ ಕೈಗೊಂಡಿರುವ ವಿಚಾರವಾಗಿ 15 ದಿನಗಳ ಹಿಂದೆಯೇ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಹಾಗೂ ನಗರಾಭಿವೃದ್ಧಿ ಕಾರ್ಯದರ್ಶಿಗೆ ದೂರು ನೀಡಿದ್ದು, ಈವರೆಗೂ ಅವರಿಂದ ಪ್ರತಿಕ್ರಿಯೆ ಬಂದಿಲ್ಲ. ಇನ್ನು ನಾಲ್ಕೈದು ದಿನಗಳಲ್ಲಿ ಬೆಂಗಳೂರಿಗೆ ತೆರಳಿ ಉಪಲೋಕಾಯುಕ್ತರಿಗೆ ದೂರು ಸಲ್ಲಿಸುತ್ತೇನೆ. ಭೂಮಿ ತಾಯಿಗೆ ಮೋಸ ಮಾಡಿ, ಆ ಮೂಲಕ ಹಣ ಮಾಡಲು ಹೊರಟಿರುವುದು ಅಕ್ಷಮ್ಯ. ಇದನ್ನು ಇಷ್ಟಕ್ಕೆ ಬಿಡುವುದಿಲ್ಲ. ವಸತಿ ವಲಯವಾಗಿ ಮಾರ್ಪಾಡು ಮಾಡಲು ಸರ್ಕಾರ ಅನುಮತಿಸುವುದಿಲ್ಲ ಎಂಬ ವಿಶ್ವಾಸವಿದೆ. ಒಂದು ವೇಳೆ ಅನುಮತಿ ನೀಡಿದರೆ, ಅದರ ವಿರುದ್ಧವೂ ಕಾನೂನು ಹೋರಾಟ ನಡೆಸುತ್ತೇವೆ ಎಂದು ಎಚ್ಚರಿಸಿದ್ದಾರೆ.

ಇಷ್ಟಾದರೂ ಭಯವಿಲ್ಲ: ಹೆಸರು ಬದಲಾಗಿದೆಯೇ ಹೊರತು ಭ್ರಷ್ಟಾಚಾರದಲ್ಲಿ ಹಿಂದಿನ ಮುಡಾ ಹಾಗೂ ■ 6ನೇ ಪುಟಕ್ಕೆ

ಮುಡಾ ನಿವೇಶನ ಅಕ್ರಮ ಮಂಜೂರಾತಿ ಆರೋಪ ಎದುರಿಸುತ್ತಿದ್ದ

ಡಾ.ಡಿ.ಬಿ.ನಟೇಶ ಸೇರಿದಂತೆ 20 ಕೆಎಎಸ್ ಅಧಿಕಾರಿಗಳಿಗೆ ಬಡ್ತಿ

ಮೈಸೂರು, ಫೆ.13(ಆರ್‌ಕೆ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಈಗಿನ ಎಂಡಿಎ)ದ ಶೇಕಡಾ 50:50 ರ ಅನುಪಾತದಡಿ ನಿವೇಶನಗಳ ಅಕ್ರಮ ಮಂಜೂರಾತಿ ಆರೋಪ ಎದುರಿಸುತ್ತಿದ್ದ ಹಿಂದಿನ ಮುಡಾ ಆಯುಕ್ತ ಡಾ.ಡಿ.ಬಿ.ನಟೇಶ್ ಸೇರಿದಂತೆ ರಾಜ್ಯದ 20 ಹಿರಿಯ ಶ್ರೇಣಿ ಕೆಎಎಸ್ ಅಧಿಕಾರಿಗಳಿಗೆ ಸರ್ಕಾರ ಮುಂಬಡ್ತಿ ನೀಡಿದೆ.


ಡಾ.ಡಿ.ಬಿ.ನಟೇಶ್

1998ನೇ ಸಾಲಿನ ಕೆಎಎಸ್ ಅಧಿಕಾರಿಗಳನ್ನು ಆಯ್ಕೆ ಶ್ರೇಣಿ ಹುದ್ದೆಗೆ ಬಡ್ತಿ ನೀಡಿ, ಆಡಳಿತಾತ್ಮಕ ಹಿತದೃಷ್ಟಿಯಿಂದ ಪ್ರಸ್ತುತ ಹುದ್ದೆಗಳಲ್ಲೇ ಮುಂದುವರೆಯುವಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಅಧೀನ ಕಾರ್ಯದರ್ಶಿ ಕೆ.ಹೆಚ್.ಕೇಶವ ಪ್ರಸಾದ್ ಇಂದು ಅಧಿಸೂಚನೆ ಹೊರಡಿಸಿದ್ದಾರೆ.

ಮುಂಬಡ್ತಿ ಪಡೆದ ಅಧಿಕಾರಿಗಳು: ಬೆಂಗಳೂರಿನ ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಡಿ.ಬಿ.ನಟೇಶ್, ಮಂಡ್ಯ ಅಪರ ಜಿಲ್ಲಾಧಿಕಾರಿ ಬಿ.ಸಿ.ಶಿವಾನಂದ ಮೂರ್ತಿ, ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವೆ ಎಂ.ಕೆ.ಸವಿತಾ, ಮೈಸೂರಿನ ಆಡಳಿತ ತರಬೇತಿ ಸಂಸ್ಥೆ(ಎಟಿಐ) ಜಂಟಿ ನಿರ್ದೇಶಕಿ ಬಿ.ಎನ್.ವೀಣಾ, ಕಾಡಾ ಉಪ ಆಡಳಿತಾಧಿಕಾರಿ ■ 6ನೇ ಪುಟಕ್ಕೆ

ಆರೋಗ್ಯಾಧಿಕಾರಿ ಅಬಕಾರಿ ಅಧಿಕಾರಿಯಾಗಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯರ ನಕಲಿ ಟಿಪ್ಪಣಿ!

ಬೆಂಗಳೂರು: ಮಂಡ್ಯದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಯನ್ನು ಮೈಸೂರಿನಲ್ಲಿ ಅಬಕಾರಿ ಉಪ ಆಯುಕ್ತರನ್ನಾಗಿ ನಿಯೋಜಿಸಲು ಸಿಎಂ ಬರೆದಿದ್ದಾರೆ ಎನ್ನಲಾದ ಪತ್ರವೊಂದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿದೆ.


ಸಿದ್ದರಾಮಯ್ಯ

ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕಚೇರಿ ದೂರು ನೀಡಿದ ಹಿನ್ನೆಲೆಯಲ್ಲಿ ಪೊಲೀಸರು ಶುಕ್ರವಾರ ಅಪರಿಚಿತ ವ್ಯಕ್ತಿಯ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ಸರಕಾರಕ್ಕೆ ಕಳಂಕ ತರುವ ದುರುದ್ದೇಶದಿಂದ ಈ ಕೃತ್ಯವೆಸಗಲಾಗಿದೆ. ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೋರಿ ವಿಧಾನಸೌಧ ಪೊಲೀಸ್ ಠಾಣೆಗೆ ದೂರು ಸಲ್ಲಿಸಲಾಗಿದೆ. ದೂರಿನ ಆಧಾರದ ಮೇಲೆ ಭಾರತೀಯ ನ್ಯಾಯ ಸಂಹಿತೆಯ (ಬಿಎನ್‌ಎಸ್) ಕಲಂ 336(3) ಮತ್ತು 336(4) ಮತ್ತು ಫೋರ್ಜರಿ ■ 6ನೇ ಪುಟಕ್ಕೆ



ಇದು ನಕಲಿ ಟಿಪ್ಪಣಿ

ಯಾರೋ ಕೆಲವು ಕಿಡಿಗೇಡಿಗಳು ನನ್ನ ಕಚೇರಿಯ ನಕಲಿ ಟಿಪ್ಪಣಿಯೊಂದನ್ನು ಸೃಷ್ಟಿಸಿ, ಮಂಡ್ಯ ಜಿಲ್ಲೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯಾದ ಡಾ|ಕೆ.ಮೋಹನ್ ಇವರನ್ನು ಮೈಸೂರು ಗ್ರಾಮಾಂತರದ ಅಬಕಾರಿ ಉಪ ಆಯುಕ್ತರಾಗಿ ವರ್ಗಾವಣೆ ಮಾಡಲಾಗಿದೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟು, ಅಪಪ್ರಚಾರದಲ್ಲಿ ತೊಡಗಿರುವುದು ಖಂಡನೀಯ ಮತ್ತು ಅತ್ಯಂತ ಗಂಭೀರ ಸ್ವರೂಪದ ಅಪರಾಧವಾಗಿದೆ. ಈ ಬಗ್ಗೆ ನನ್ನ ಸಚಿವಾಲಯದ ಅಧಿಕಾರಿಗಳು ದೂರು ದಾಖಲಿಸಿದ್ದು, ಪೊಲೀಸ್ ಇಲಾಖೆ ಇದರ ಹಿಂದಿರುವ ದುಷ್ಟರನ್ನು ಪತ್ತೆ ಮಾಡಿ, ಕಾನೂನು ಕ್ರಮ ಕೈಗೊಳ್ಳಲಿದೆ. ಇಂತಹ ನಕಲಿ ಸುದ್ದಿಗಳನ್ನು ನಂಬಿ ಶೇರ್ ಮಾಡುವ ಮುನ್ನ ಜಾಲತಾಣ ಬಳಕೆದಾರರು ಎಚ್ಚರಿಕೆ ವಹಿಸಬೇಕು. ಈಗಿನ ಫೋಟೋಶಾಪ್/ಎಐ ಯುಗದಲ್ಲಿ ವಾಟ್ಸಾಪ್ ಮಾಹಿತಿಗಳ ಸತ್ಯಾಸತ್ಯತೆಯನ್ನು ಪರಾಮರ್ಶಿಸದೆ ಇತರರ ಜೊತೆ ಹಂಚಿಕೊಳ್ಳುವುದು ಕೂಡ ಅಪರಾಧವೇ ಆಗಿದೆ. ಸಕಾರಾತ್ಮಕ ಟೀಕೆಗೆ ನಾವು ಮುಕ್ತರಿದ್ದೇವೆ, ಸುಳ್ಳು ಸುದ್ದಿಗಳ ಅಪಪ್ರಚಾರವನ್ನು ಸಹಿಸುವುದಿಲ್ಲ. **–ಮುಖ್ಯಮಂತ್ರಿ ಸಿದ್ದರಾಮಯ್ಯ**


ದ್ವಿತೀಯ ಪಿಯುಸಿ ಪರೀಕ್ಷಾ ವಿದ್ಯಾರ್ಥಿಗಳಿಗೆ ಉಚಿತ ಪ್ರಯಾಣ

ಮೈಸೂರು, ಫೆ.13(ಬಿಎಲ್‌ಯು)– ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ಕೆಎಸ್‌ಆರ್ ಟಿಸಿ ಬಸ್‌ಗಳಲ್ಲಿ ಉಚಿತ ಪ್ರಯಾಣದ ವ್ಯವಸ್ಥೆ ಮಾಡಲಾಗಿದೆ. ಫೆಬ್ರವರಿ 28ರಿಂದ ಮಾರ್ಚ್ 17ರವರೆಗೆ ಪಿಯುಸಿ ವಾರ್ಷಿಕ ಪರೀಕ್ಷೆ ನಡೆಯಲಿದ್ದು, ಆ ವೇಳೆ ಪರೀಕ್ಷಾ ಕೇಂದ್ರಗಳಿಗೆ ಹೋಗಲು ವಿದ್ಯಾರ್ಥಿಗಳಿಗೆ ಉಚಿತವಾಗಿ ಪ್ರಯಾಣಿಸಲು ಅವಕಾಶ ಕಲ್ಪಿಸಲಾಗಿದೆ. ಈ ವೇಳೆ ವಿದ್ಯಾರ್ಥಿಗಳು ತಮ್ಮ ಪರೀಕ್ಷಾ ಪ್ರವೇಶ ಪತ್ರವನ್ನು ತೋರಿಸುವುದು ಕಡ್ಡಾಯವಾಗಿದೆ.



ಪರೀಕ್ಷಾ ಕೇಂದ್ರಕ್ಕೆ ಹೋಗಿ ಮತ್ತೆ ಮನೆಗೆ ವಾಪಾಸ್ಸಾಗಲು ಉಚಿತ ಪ್ರಯಾಣದ ಸೌಲಭ್ಯ ನೀಡಲಾಗಿದೆ. ಪರೀಕ್ಷಾ ಪ್ರವೇಶ ಪತ್ರವನ್ನೆ ಪಾಸ್ ಎಂದು ಪರಿಗಣಿಸಿ, ಪ್ರಯಾಣಕ್ಕೆ ಅವಕಾಶ ನೀಡಬೇಕೆಂದು ಬಸ್ ನಿರ್ವಾಹಕರಿಗೆ ಸೂಚನೆ ನೀಡಲಾಗಿದೆ. ಪರೀಕ್ಷಾ ಕೇಂದ್ರಗಳ ಮಾರ್ಗಕ್ಕೆ ಹೆಚ್ಚಿನ ಬಸ್‌ಗಳ ಸಂಚಾರ ಕಲ್ಪಿಸಲು ಸೂಚಿಸಲಾಗಿದೆ. ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಹಾಜರಾಗಲು ವಿಳಂಬವಾಗಬಾರದು ಹಾಗೂ ಗೈರಾಗಬಾರದು ಎಂಬ ದೃಷ್ಟಿಯಿಂದ ಕೆಎಸ್‌ಆರ್‌ಟಿಸಿ ಈ ನಿರ್ಧಾರ ಕೈಗೊಂಡಿದೆ.

ನಾಲ್ವಡಿ ನೀರಾವರಿಗೆ ಆದ್ಯತೆ ನೀಡಿದ್ದರು



● ಅಣೆಕಟ್ಟುಗಳು, ಇತರೆ ಕಾಮಗಾರಿ ಕೈಗೊಂಡರು: ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಮರಣೆ ● ಬೆಂಗಳೂರಲ್ಲಿ ಅಣೆಕಟ್ಟುಗಳ ಸುರಕ್ಷತಾ ಸಮ್ಮೇಳನಕ್ಕೆ ಚಾಲನೆ ● ಮುಖ್ಯಮಂತ್ರಿ ದೇವರಾಜ ಅರಸರು ಸೇರಿ ಹಲವರು ಪ್ರಾದೇಶಿಕ ಅಭಿವೃದ್ಧಿಗೆ ನೀರಾವರಿ ವಿಸ್ತರಿಸಿದ್ದರು



ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ನಡೆದ ಅಣೆಕಟ್ಟೆಗಳ ಸುರಕ್ಷತಾ ಸಮ್ಮೇಳನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಈ ವೇಳೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇತರರಿದ್ದಾರೆ.

ಬೆಂಗಳೂರು, ಫೆ.13(ಕೆಎಂಶಿ)– ಮೈಸೂರು ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್, ಬರಡು ಪ್ರದೇಶಗಳನ್ನು ಫಲವತ್ತಾದ ಭೂಮಿಗಳಾಗಿ ಪರಿವರ್ತಿಸಲು ಜಲಾಶಯಗಳ ನಿರ್ಮಾಣ ಹಾಗೂ ಹತ್ತು–ಹಲವು ನೀರಾವರಿ ಕಾಮಗಾರಿಗಳಿಗೆ ಉತ್ತೇಜನ ನೀಡಿದ್ದರು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಶ್ಲಾಘಿಸಿದ್ದಾರೆ.

ಮುಖ್ಯಮಂತ್ರಿ ದೇವರಾಜ ಅರಸು ಮೊದಲ್ಗೊಂಡು ಹಲವು ನಾಯಕರ ಆಡಳಿತಗಳು ಸಮಾನ ಪ್ರಾದೇಶಿಕ ಅಭಿವೃದ್ಧಿಗೆ ನೀರಾವರಿ ವ್ಯವಸ್ಥೆ ವಿಸ್ತರಿಸಿದರು. ಅಣೆಕಟ್ಟೆಗಳು ರಾಜ್ಯದ ಜನರ ಸಾಮಾಜಿಕ, ಆರ್ಥಿಕ ಸ್ಥಿತಿ ಅಲ್ಲದೆ ಪರಿಸರವನ್ನೂ ಮಾರ್ಪಡಿಸಿ, ಮುಂಗಾರು ಮಳೆಯ ಅನಿಶ್ಚಿತತೆಯಿಂದ ಲಕ್ಷಾಂತರ ಜನರ ಭರವಸೆಯ ಜೀವಾಳವಾಗಿವೆ.

ಜಲ ವಿದ್ಯುತ್ ಸೇರಿದಂತೆ ಬಹುಪಯೋಗಿ ಜಲಾಶಯಗಳು ಇಂಧನ ಮತ್ತು ನೀರಿನ ಭದ್ರತೆ ಒದಗಿಸುತ್ತಿದ್ದು, ರಾಜ್ಯದ ಸ್ಥಾಪಿತ ಜಲವಿದ್ಯುತ್ ಸಾಮರ್ಥ್ಯ ಸುಮಾರು 4,800 ಮೆಗಾ ವ್ಯಾಟ್‌ಗೆ ಏರಿದೆ. ಅಲ್ಲದೆ, ರಾಜ್ಯದ ಜಲಾಶಯಗಳಲ್ಲಿ ನೂರಾರು ಟಿಎಂಸಿ ಅಡಿ ನೀರು ಸಂಗ್ರಹಿಸಿ ನೀರಾವರಿ ಮತ್ತು ನಗರಗಳ ಕುಡಿಯುವ ನೀರಿನ ಅಗತ್ಯ ಪೂರೈಸುತ್ತಿವೆ ಎಂದರು.


ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಅಂತರರಾಷ್ಟ್ರೀಯ ಅಣೆಕಟ್ಟೆಗಳ ಸುರಕ್ಷತಾ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ಕೃಷ್ಣಾ, ಕಾವೇರಿ ಸೇರಿದಂತೆ ಹಲವು ನದಿಗಳಿಗೆ ಅಡ್ಡಲಾಗಿ ನಿರ್ಮಿಸಲಾದ ಜಲಾಶಯಗಳು ಕೃಷಿ ಮತ್ತು ಕುಡಿಯುವ ನೀರಿನ ಅಗತ್ಯ ಪೂರೈಸಿ ಜನಜೀವನವನ್ನು ಸುಸ್ಥಿರಗೊಳಿಸಿವೆ ಎಂದರು.

ದೇಶದಲ್ಲಿ 6628 ಅಣೆಕಟ್ಟುಗಳಿವೆ: ಭಾರತದಲ್ಲಿ 6,628 ಅಣೆಕಟ್ಟೆಗಳಿದ್ದು, ಜಲಾಶಯಗಳ ಸಂಖ್ಯೆಯಲ್ಲಿ ವಿಶ್ವದಲ್ಲೇ ಮೂರನೇ ಅತಿ ದೊಡ್ಡ ರಾಷ್ಟ್ರವಾಗಿದೆ. ■ 6ನೇ ಪುಟಕ್ಕೆ

ಕೇಂದ್ರ ಅನುಮತಿ ನೀಡಿದರೆ ಮೇಕೆದಾಟು ಯೋಜನೆ ಜಾರಿ

ನೀರಾವರಿ ಸಚಿವರೂ ಆದ ಡಿಸಿಎಂ ಡಿ.ಕೆ.ಶಿವಕುಮಾರ್ ಘೋಷಣೆ

ಬೆಂಗಳೂರು, ಫೆ. 13(ಕೆಎಂಶಿ)–ಕೇಂದ್ರ ಸರ್ಕಾರ ಅನುಮತಿ ನೀಡಿದರೆ ಕರ್ನಾಟಕ ಮೇಕೆದಾಟು ಹಾಗೂ ಕೃಷ್ಣಾ ಮೇಲ್ದಂಡೆ ಬಾಕಿ ಯೋಜನೆ ಜಾರಿ ಮಾಡಲಾಗುವುದು ಎಂದು ಜಲ ಸಂಪನ್ಮೂಲ ಸಚಿವರೂ ಆದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ತಿಳಿಸಿದ್ದಾರೆ. ಅಂತಾರಾಷ್ಟ್ರೀಯ ಅಣೆಕಟ್ಟು ಸುರಕ್ಷತಾ ಸಮ್ಮೇಳನ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಾಜ್ಯದ ಮನವಿಗೆ ಕೇಂದ್ರ ಸಹಕಾರ ನೀಡುವ ಭರವಸೆ ಇದೆ ಎಂದರು.



ಬೆಂಗಳೂರಿನ ಜನಸಂಖ್ಯೆ 1.50 ಕೋಟಿ ತಲುಪಿದೆ. ವಿಶ್ವಾದ್ಯಂತ ಕೈಗಾರಿಕೋದ್ಯಮಿಗಳು ನಗರದ ಕಡೆ ಆಸಕ್ತಿ ಹೊಂದಿದ್ದಾರೆ, ಇಲ್ಲಿನ ಹವಾಮಾನ, ಸಂಸ್ಕೃತಿ ಎಲ್ಲರನ್ನು ಆಕರ್ಷಿಸುತ್ತಿದೆ. ನಗರದ ಜನಸಂಖ್ಯೆಗೆ ಸಮರ್ಪಕ ನೀರು ಪೂರೈಕೆ ಜವಾಬ್ದಾರಿ ನಮ್ಮ ಮೇಲಿದೆ. ಈ ಹಿನ್ನೆಲೆಯಲ್ಲಿ ಮೇಕೆದಾಟು ಬಳಿ ಸಮತೋಲಿತ ಅಣೆಕಟ್ಟು ನಿರ್ಮಾಣಕ್ಕೆ ಮುಂದಾಗಿದ್ದೇವೆ. ಇತ್ತೀಚೆಗೆ ಸುಪ್ರೀಂಕೋರ್ಟ್ ಯೋಜನೆ ಪರ ತೀರ್ಪು ನೀಡಿದೆ. ಕೇಂದ್ರದ ಅನುಮತಿಗೆ ಕಾಯುತ್ತಿದ್ದು, ಯೋಜನೆಯಿಂದ ಬೆಂಗಳೂರು ಸೇರಿದಂತೆ ಹಲವು ಪ್ರದೇಶಗಳಿಗೆ ಕುಡಿಯುವ ನೀರು ಹಾಗೂ ■ 6ನೇ ಪುಟಕ್ಕೆ

ಮೈಸೂರು ಮಿತ್ರ ಶನಿವಾರ 14 ಫೆಬ್ರವರಿ 2026

ಜಾಲಿರೈಡ್‌ಗೆಂದು ಹೋದವರು ಜವರಾಯನ ಪಾದ ಸೇರಿದರು!

ಹೊಸಕೋಟೆ ಬಳಿ ಸರಣಿ ಅಪಘಾತ: ಏಳು ಮಂದಿ ಸಾವು



ಬೆಂಗಳೂರು, ಫೆ.13–ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ಬಳಿ ಶುಕ್ರವಾರ ನಡೆದ ಭೀಕರ ಸರಣಿ ರಸ್ತೆ ಅಪಘಾತದಲ್ಲಿ ಏಳು ಮಂದಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಕ್ಯಾಂಟರ್, ಬೈಕ್ ಮತ್ತು ಎಕ್ಸ್‌ಯುವಿ ಕಾರಿನ ನಡುವೆ ನಡೆದ ಈ ದುರಂತದಲ್ಲಿ ಮೃತಪಟ್ಟವರಲ್ಲಿ ಆರು ವಿದ್ಯಾರ್ಥಿಗಳು ಮತ್ತು ಓರ್ವ ಬೈಕ್ ಸವಾರ ಸೇರಿದ್ದಾರೆ.

ಅಪಘಾತದ ತೀವ್ರತೆಗೆ ಕಾರಿನಲ್ಲಿದ್ದ 6 ಮಂದಿ ಹಾಗೂ ಬೈಕ್ ಸವಾರ ಸ್ಥಳದಲ್ಲೇ ಮೃತಪಟ್ಟಿದ್ದು, ಅಪಘಾತದ ಮಾಹಿತಿ ತಿಳಿದ ಕೂಡಲೇ ಸ್ಥಳೀಯರು ಹಾಗೂ ಪೊಲೀಸರು ಸ್ಥಳಕ್ಕೆ ಧಾವಿಸಿ ರಕ್ಷಣಾ ಕಾರ್ಯಾಚರಣೆ ನಡೆಸಿದರು. ಆದರೆ, ಕಾರಿನಲ್ಲಿದ್ದವರು ಮತ್ತು ಬೈಕ್ ಸವಾರರು ಗಂಭೀರ ಗಾಯಗಳಿಂದಾಗಿ ಸ್ಥಳದಲ್ಲೇ ಪ್ರಾಣಪಕ್ಷಿ ಹಾರಿ ಹೋಗಿತ್ತು. ದುರಂತವೆಂದರೆ ಆರು ಮಂದಿ ವಿದ್ಯಾರ್ಥಿಗಳು ಉತ್ತಮ ಭವಿಷ್ಯ ರೂಪಿಸಿಕೊಂಡು ಕುಟುಂಬಕ್ಕೆ ಆಧಾರಸ್ತಂಭ ವಾಗಬೇಕಿದ್ದವರು ಜವ ರಾಯನ ಪಾದ ಸೇರಿದ್ದಾರೆ. ತಮ್ಮ ಮಕ್ಕಳನ್ನು ಕಳೆದುಕೊಂಡ ಪೋಷಕರು, ಕುಟುಂಬಸ್ಥರ ಆಕ್ರಂದನ ಮುಗಿಲುಮುಟ್ಟಿದೆ.

ಅಶ್ವಿನ್ ನಾಯರ್ (17) – ಆರ್‌ವಿ ಪಿಯು ಕಾಲೇಜ್ ವಿದ್ಯಾರ್ಥಿ, ಕೊತ್ತನೂರು ನಿವಾಸಿ, ಅರ್ಹನ್ ಶರೀಫ್ – ಸಿಎಂಆರ್ ಶಾಲೆ ವಿದ್ಯಾರ್ಥಿ, ಹೆಚ್‌ಬಿಆರ್ ಲೇಔಟ್ ನಿವಾಸಿ, ಅಯನ್ ಅಲಿ (17) – ಸಿಎಂಆರ್ ಶಾಲೆ ವಿದ್ಯಾರ್ಥಿ, ಭರತ್ (18) – ಸಿಎಂಆರ್ ಕಾಲೇಜ್ ವಿದ್ಯಾರ್ಥಿ, ಫ್ರೇಜರ್ ಟೌನ್ ನಿವಾಸಿ, ಈತನ್ ಜಾರ್ಜ್ (17) – ಆರ್‌ವಿ ಪ್ರಥಮ ಪಿಯು ಕಾಲೇಜ್ ವಿದ್ಯಾರ್ಥಿ, ಹುಳಿಮಾವು ನಿವಾಸಿ, ಫರ್ಹಾನ್ (17) ಮೃತಪಟ್ಟ ಮತ್ತೊಬ್ಬ ಯುವಕ, ಗಗನ್ (26) – ಮೃತ ಬೈಕ್ ಸವಾರ, ಸಫಲ್ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದರು. ಜಾಲಿರೈಡ್ ಗೆಂದು ಹೋದವರು ಜವರಾಯನ ಪಾದ ಸೇರಿದರು.

ಆರು ಮಂದಿ ವಿದ್ಯಾರ್ಥಿಗಳು ಕಾರಿನಲ್ಲಿ ಹೊಸಕೋಟೆ–ದಾಬಸ್‌ಪೇಟೆ ನೂತನ ರಾಷ್ಟ್ರೀಯ ಹೆದ್ದಾರಿಯಲ್ಲಿ ಬೆಳ್ಳಂಬೆಳಗ್ಗೆ ಜಾಲಿರೈಡ್ ಮಾಡೋಣ ವೆಂದು ಸ್ನೇಹಿತರೆಲ್ಲಾ ಸೇರಿ ಕಾರಿನಲ್ಲಿ ಹೋಗುತ್ತಿದ್ದರು. ಅತಿಯಾದ ವೇಗದ ಚಾಲನೆಯಿಂದಲೇ ಅಪಘಾತ ಸಂಭವಿಸಿದೆ ಎಂದು ಪೊಲೀಸರು ಪ್ರಾಥಮಿಕ ತನಿಖೆ ನಂತರ ಹೇಳಿದ್ದಾರೆ. ಅಪಘಾತಕ್ಕೀಡಾದ ಎಕ್ಸ್‌ಯುವಿ ಕಾರು ಅಯನ್ ಅಲಿ ಎಂಬ ಯುವಕನಿಗೆ ಸೇರಿದೆ ಎಂಬುದು ತನಿಖೆಯಿಂದ ತಿಳಿದುಬಂದಿದೆ.

ಮಕ್ಕಳನ್ನು ಕಳೆದುಕೊಂಡ ಪೋಷಕರ ಕಣ್ಣೀರು: ಅಪಘಾತ ನಡೆದ ಸ್ಥಳಕ್ಕೆ ತಕ್ಷಣವೇ ದೌಡಾಯಿಸಿದ ಬೆಂಗಳೂರು ಗ್ರಾಮಾಂತರ ಎಸ್‌ಪಿ ಚಂದ್ರಕಾಂತ್ ಹಾಗೂ ಪೊಲೀಸರ ತಂಡ, ಪರಿಶೀಲನೆ ನಡೆಸಿದ್ದಾರೆ. ವಿದ್ಯಾರ್ಥಿಗಳ ಪೋಷಕರಿಗೆ ಬೆಳ್ಳಂಬೆಳಗ್ಗೆ ಈ ಸಾವಿನ ಸುದ್ದಿ ತಲುಪಿದ್ದು, ಮಕ್ಕಳನ್ನು ಕಳೆದು ಕೊಂಡ ಪೋಷಕರು ರೋಧಿಸಿದ್ದಾರೆ. ಇತ್ತ ಏನೂ ತಪ್ಪು ಮಾಡದೆ ತನ್ನ ಪಾಡಿಗೆ ತಾನು ಕೆಲಸಕ್ಕೆ ಹೊರಟಿದ್ದ ಉದ್ಯೋಗಿ ಗಗನ್ ಕೂಡ ಇದೀಗ ತನ್ನ ಜೀವವನ್ನೇ ಕಳೆದುಕೊಂಡಿದ್ದಾರೆ.

ಬಾಂಗ್ಲಾದಲ್ಲಿ ಬಿಎನ್‌ಪಿ ಕ್ಲೀನ್ ಸ್ವೀಪ್ 20 ವರ್ಷದ ಬಳಿಕ ಅಧಿಕಾರಕ್ಕೆ

ಪ್ರಧಾನಿಯಾಗಲಿದ್ದಾರೆ ಖಲೀದಾ ಜಿಯಾ ಪುತ್ರ

ಢಾಕಾ: ಬಾಂಗ್ಲಾದೇಶದ 13ನೇ ಲೋಕ ಸಭಾ ಚುನಾವಣೆಯಲ್ಲಿ ಬಾಂಗ್ಲಾದೇಶ್ ನ್ಯಾಷನಲ್ ಪಾರ್ಟಿ ಕ್ಲೀನ್ ಸ್ವೀಪ್ ಮಾಡಿದೆ. 299 ಕ್ಷೇತ್ರಗಳ ಪೈಕಿ ಬಿಎನ್‌ಪಿ 213 ಕ್ಷೇತ್ರಗಳಲ್ಲಿ ಜಯಭೇರಿ ಭಾರಿಸಿದೆ. ಇಸ್ಲಾಮಿಸ್ಟ್ ಜಮಾತ್–ಇ–ಇಸ್ಲಾಮಿ ನೇತೃತ್ವದ 11 ಪಕ್ಷಗಳ ಮೈತ್ರಿಕೂಟ 77 ಸ್ಥಾನಗಳಲ್ಲಿ ಮಾತ್ರ ಜಯಗಳಿಸಿದೆ.



ಮಾಜಿ ಪ್ರಧಾನಿ ದಿವಂಗತ ಖಲೀದಾ ಜಿಯಾ ಪುತ್ರ ತಾರೀಕ್ ರೆಹಮಾನ್ ಬಾಂಗ್ಲಾದ ನೂತನ ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ. ಈ ಮೂಲಕ 2006 ರಲ್ಲಿ ಖಲೀದಾ ಜಿಯಾ ಅವರ ಅಧಿಕಾರಾವಧಿ ಕೊನೆಯಾದ 20 ವರ್ಷಗಳ ನಂತರ ಮತ್ತೆ ಅಧಿಕಾರಕ್ಕೆ ಬಂದಿದೆ.

ಶೇಖ್ ಹಸೀನಾ ಪದಚ್ಯುತಿ ಬಳಿಕ ಬಿಎನ್‌ಪಿ ಮೇಲಿದ್ದ ನಿರ್ಬಂಧಗಳು ತೆರವುಗೊಂಡ ಕಾರಣ 17 ವರ್ಷಗಳ ಬಳಿಕ ತಾರೀಖ್ ರೆಹಮಾನ್ ಬಾಂಗ್ಲಾ ದೇಶಕ್ಕೆ ಮೊದಲ ಭೇಟಿ ನೀಡಿ ಚುನಾವಣಾ ಅಖಾಡದಲ್ಲಿ ಬಿಎನ್‌ಪಿ ಪಕ್ಷವನ್ನ ಇಳಿಸಿದ್ದರು.

ಸದ್ಯ ಪ್ರಚಂಡ ಬಹುಮತ ಪಡೆದಿರುವ ಬಿಎನ್‌ಪಿ ಗೆಲುವನ್ನು ಭಾರತ ತುಂಬಾ ತೀಕ್ಷ್ಣಗಣ್ಣಿನಿಂದ ನೋಡುತ್ತಿದೆ. ಬಾಂಗ್ಲಾ ಫಸ್ಟ್ ಎಂಬ ನೀತಿಯೊಂದಿಗೆ ಚುನಾವಣಾ ಅಖಾಡಕ್ಕೆ ಇಳಿದಿದ್ದ ತಾರೀಖ್ ದಿಲ್ಲಿಯೂ ಇಲ್ಲ, ಪಿಂಡಿಯೂ ಇಲ್ಲ. ಬಾಂಗ್ಲಾ ವಿಕಾಸ ಮೊದಲು ಅಂತ ಹೇಳುವ ಮೂಲಕ ಭಾರತ ಮತ್ತು ಪಾಕಿಸ್ತಾನದೊಂದಿಗಿನ ಸಂಬಂಧಕ್ಕಿಂತ ಬಾಂಗ್ಲಾದೇಶದ ವಿಕಾಸ ಮೊದಲು ಎಂದು ಹೇಳಿದ್ದೂ

ಸದ್ಯ ರೆಹಮಾನ್ ಗೆಲುವಿಗೆ ಪ್ರಧಾನಿ ಮೋದಿ ಶುಭಾಶಯ ಕೋರಿದ್ದಾರೆ. ಇದಕ್ಕೂ ಮೊದಲು ತಾರೀಖ್ ತಾಯಿ ಖಲೀದಾ ಜಿಯಾ ಮೃತಪಟ್ಟಾಗ ಖುದ್ದು ವಿದೇಶಾಂಗ ಸಚಿವ ಜೈಶಂಕರ್ ಬಾಂಗ್ಲಾಗೆ ಹೋಗಿ ತಾರೀಖ್ ಭೇಟಿ ಮಾಡಿ ಬಂದಿದ್ದರು. ಇವು ಢಾಕಾ ಮತ್ತು ದೆಹಲಿ ಬಾಂಧವ್ಯ ಗಟ್ಟಿಯಾಗುವ ಸೂಚನೆ ನೀಡಿದ್ದವು.

ಜುಲೈ 2024 ರ ದಂಗೆಯ ನಂತರದ ಮೊದಲ ಚುನಾವಣೆ ಗುರುವಾರ ನಡೆದಿತ್ತು 17 ಕೋಟಿ ಜನಸಂಖ್ಯೆ ಹೊಂದಿರುವ ಬಾಂಗ್ಲಾದಲ್ಲಿ 12.7 ಕೋಟಿ ಜನರು ಮತದಾನದಲ್ಲಿ ಭಾಗವಹಿಸಿದ್ದರು. 299 ಲೋಕಸಭಾ ಕ್ಷೇತ್ರಗಳಿಗೆ 1,981 ಅಭ್ಯರ್ಥಿಗಳು ಸ್ಪರ್ಧಿಸಿದ್ದರು. ಅಭ್ಯರ್ಥಿಯೊಬ್ಬರ ಮರಣದಿಂದಾಗಿ ಒಂದು ಕ್ಷೇತ್ರದ ಮತದಾನವನ್ನು ರದ್ದುಪಡಿಸಲಾಯಿತು.

ಪ್ರೇಮ ನಿಧನ



ಕಿತ್ತೂರು, ಫೆ. 13– ಕಿತ್ತೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಗುರುವಯ್ಯನಕೊಪ್ಪಲು ಗ್ರಾಮದ ಲೇಟ್ ಕೊಂಡಪ್ಪ ತಿಮ್ಮಶೆಟ್ಟಿ ಅವರ ಪತ್ನಿ ಗ್ರಾ.ಪಂ. ಮಾಜಿ ಸದಸ್ಯೆ ಪ್ರೇಮ (70) ಶುಕ್ರವಾರ ನಿಧನರಾದರು. ಮೃತರು ಮೂವರು ಹೆಣ್ಣು ಮಕ್ಕಳು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆಯು ಗುರುವಯ್ಯನಕೊಪ್ಪಲು ಗ್ರಾಮದ ಜಮೀನಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಇವರ ನಿಧನಕ್ಕೆ ಮಹಾರಾಜ ಕಾಲೇಜಿನ ಕನ್ನಡ ಸಹಾಯಕ ಪ್ರಾಧ್ಯಾಪಕ ಡಾ.ಕೃಷ್ಣಪ್ಪ, ಟಿ.ಮರಿಯಪ್ಪ ಶಾಲೆಯ ಮುಖ್ಯೋಪಾಧ್ಯಾಯ ಕೆ.ಸಿ.ಪ್ರಕಾಶ್, ಹಿರಿಯ ಪತ್ರಕರ್ತ ಭೇರ್ಯ ಮಹೇಶ್, ಕಿತ್ತೂರು ಶ್ರೀನಿವಾಸ್, ಟಿ.ಗುರುವಯ್ಯನಕೊಪ್ಪಲು ಗ್ರಾ.ಪಂ.ಸದಸ್ಯ ಜಗದೀಶ್, ಕೃಷ್ಣ ಬಿಗ್ ಪ್ರಿಂಟ್ಸ್ ಮಾಲೀಕ ಜಿ.ಮುರುಳಿ, ಬಣಜಿಗ ಸಮಾಜದ ಮುಖಂಡರು, ಗ್ರಾಮಸ್ಥರು ಸಂತಾಪ ಸೂಚಿಸಿದ್ದಾರೆ.

ಸಣ್ಣಮ್ಮ



ಮೈಸೂರು, ಫೆ. 13– ಮೈಸೂರು ತಾಲೂಕು ಇಲವಾಲ ಹೋಬಳಿ, ಮೈದನಹಳ್ಳಿ ಗ್ರಾಮದ ನಿವಾಸಿ ಸಣ್ಣಮ್ಮ (85) ಶುಕ್ರವಾರ ಬೆಳಗ್ಗೆ ನಿಧನರಾದರು. ಮೃತರು ಎಪಿಎಂಸಿ ಮಾಜಿ ಅಧ್ಯಕ್ಷ ಕೆ. ಶಿವಣ್ಣ ಸೇರಿದಂತೆ ಮೂವರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಡಾ.ಎಂ.ಸೋಮಶೇಖರಯ್ಯ



ಮೈಸೂರು, ಫೆ.13– ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಚೆಲುವಾಂಬ ಆಸ್ಪತ್ರೆಯ ನಿವೃತ್ತ ಸಿವಿಲ್ ಸರ್ಜನ್ ಡಾ.ಎಂ.ಸೋಮಶೇಖರಯ್ಯ(92) ಅವರು ಶುಕ್ರವಾರ ನಿಧನರಾದರು. ಇವರು ಪತ್ನಿ ಶ್ರೀಮತಿ ಕೆ.ಎನ್.ಶಾರದಾ, ಪುತ್ರರಾದ ಸಿವಿಲ್ ಇಂಜಿನಿಯರ್ ಎಸ್.ಪ್ರಕಾಶ್, ವಕೀಲ ಎಸ್.ಪ್ರಸಾದ್ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ವಿದ್ಯಾರಣ್ಯಪುರಂನ ವೀರಶೈವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೆಚ್ಚೆಟ್ಟಿರ ಅಪ್ಪಯ್ಯ (ಅಜ್ಜು)



ಮೈಸೂರು, ಫೆ.13– ಮೈಸೂರಿನ ಸಾತಗಳ್ಳಿ ನಂ.5086, ಗಣಪತಿ ನಿಲಯ, 2ನೇ ಹಂತದ ನಿವಾಸಿ ದಿವಂಗತ ನಂಜಪ್ಪ ಅವರ ಪುತ್ರ ಕೆಚ್ಚೆಟ್ಟಿರ ಅಪ್ಪಯ್ಯ (ಅಜ್ಜು) ಶುಕ್ರವಾರ ಸಂಜೆ ನಿಧನರಾದರು. ಮೂಲತಃ ಬೇಗೂರಿನವರಾದ ಇವರಿಗೆ 81 ವರ್ಷ ವಯಸ್ಸಾಗಿತ್ತು. ಮೃತರು ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅವರ ಅಂತ್ಯಕ್ರಿಯೆ ಫೆ.14ರ ಶನಿವಾರ ಚಾಮುಂಡಿಬೆಟ್ಟದ ತಪ್ಪಲಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ ನೇತೃತ್ವದಲ್ಲಿ ಇಂದು ಮೈಸೂರಲ್ಲಿ ಶ್ರೀ ಹನುಮಾನ್ ಚಾಲೀಸಾ ಪಾರಾಯಣ

ಮೈಸೂರು,ಫೆ.13(ಜಿಎ)–ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ವತಿಯಿಂದ ಫೆ.14ರಂದು ಆಯೋಜಿಸಿರುವ ಶ್ರೀ ಹನುಮಾನ್ ಚಾಲೀಸ್ ಪಾರಾಯಣ ಮಹಾ ಯಜ್ಞದಲ್ಲಿ ಒಂದು ಲಕ್ಷ ಭಕ್ತಾದಿಗಳು ಸೇರುವ ನಿರೀಕ್ಷೆ ಇದೆ ಎಂದು ಶಾಸಕ ಟಿ.ಎಸ್.ಶ್ರೀವತ್ಸ ತಿಳಿಸಿದರು.

ಮಹಾರಾಜ ಕಾಲೇಜು ಮೈದಾನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಹಿರಿಯ ಶ್ರೀಗಳ ನೇತೃತ್ವದಲ್ಲಿ ಮೈಸೂರು ನಗರದಲ್ಲಿ ಶ್ರೀ ಹನುಮಾನ್ ಚಾಲೀಸ್ ಪಾರಾಯಣ ಮಹಾಯಜ್ಞದ ಐತಿಹಾಸಿಕ ಕಾರ್ಯಕ್ರಮ ನಡೆಯುತ್ತಿದ್ದು, ರೈತರು, ಸೈನಿಕರು, ಸಾರ್ವಜನಿಕರಿಗೆ ಒಳಿತಾಗಲಿ ಎಂಬ ಲೋಕ ಕಲ್ಯಾಣಕ್ಕೆ ಶ್ರೀಗಳು ಆಯೋಜಿಸಿದ್ದಾರೆ ಎಂದರು.



ಮಹಾರಾಜ ಕಾಲೇಜು ಮೈದಾನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಶ್ರೀ ಹನುಮಾನ್ ಚಾಲೀಸ್ ಪಾರಾಯಣ ಮಹಾಯಜ್ಞದ ಪೋಸ್ಟರ್ ಅನ್ನು ಬಿಡುಗಡೆಗೊಳಿಸಲಾಯಿತು.

ಶ್ರೀ ಹನುಮಾನ್ ಚಾಲೀಸ್ ಪಾರಾಯಣ ಮಹಾಯಜ್ಞದಲ್ಲಿ 75 ಸಾವಿರ ಮಂದಿ ಪಾಲ್ಗೊಳ್ಳಲಿದ್ದಾರೆ. ಗಣಪತಿ ಆಶ್ರಮಕ್ಕೆ ಶಿವರಾತ್ರಿಗೆ ಬರುವವರು ಒಂದು ದಿನ ಮುಂಚಿತವಾಗಿ ಬಂದು ಮಹಾಯಜ್ಞದಲ್ಲಿ ಪಾಲ್ಗೊಳ್ಳಲಿದ್ದಾರೆ. ಆದರೆ, ಜನರ ಆಸಕ್ತಿ ನೋಡುತ್ತಿದ್ದರೆ, 1 ಲಕ್ಷ ಭಕ್ತಾದಿಗಳು ಪಾಲ್ಗೊಳ್ಳುವ ನಿರೀಕ್ಷೆ ಇದ್ದು, ಅದಕ್ಕೆ ತಕ್ಕಂತೆ ಎಲ್ಲಾ ಸಿದ್ಧತೆ ಮಾಡಿಕೊಳ್ಳಲಾಗಿದೆ. ಎಲ್ಲಾ ಧರ್ಮ ಜನಾಂಗದವರು ಭಾಗವಹಿಸಲಿದ್ದಾರೆ. ಕರಪತ್ರ ನೀಡಲಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಭಕ್ತಾದಿಗಳಿಗೆ ಪ್ರಸಾದವನ್ನು ಅವರು ಕುಳಿತಿರುವ ಸ್ಥಳಕ್ಕೆ ತಲುಪಿಸುವ ವ್ಯವಸ್ಥೆ ಮಾಡಲಾಗಿದೆ. ಉತ್ತಮ ಆಸನದ ವ್ಯವಸ್ಥೆ, ಪಾರ್ಕಿಂಗ್, ಶೌಚಾಲಯ, ಕುಡಿಯುವ ನೀರು ಹಾಗೂ ಆರೋಗ್ಯಕ್ಕೂ ಆದ್ಯತೆ ನೀಡಿ ಆರೋಗ್ಯ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಎಂದರು.

ಶಾಸಕ ಕೆ.ಹರೀಶ್‌ಗೌಡ ಮಾತನಾಡಿ, ಶ್ರೀ ಹನುಮಾನ್ ಚಾಲೀಸ್ ಪಾರಾಯಣ ಮಹಾಯಜ್ಞದಲ್ಲಿ ಸಂಜೆ ಶಿವ ಪಾರ್ವತಿ ಕಲ್ಯಾಣ ಸಹ ಆಯೋಜಿಸಿರುವುದು ಮತ್ತೊಂದು ವಿಶೇಷವಾಗಿದ್ದು, ಮಹಾ ಶಿವರಾತ್ರಿ ಹಬ್ಬಕ್ಕೂ ಮುನ್ನ ಭಕ್ತಾದಿಗಳಿಗೆ ಶಿವ ಪಾರ್ವತಿಯ ದರ್ಶನ ಸಿಗಲಿದೆ. ಎಲ್ಲರೂ ಭಾಗವಹಿಸಿ, ದೇವರ ಕೃಪೆಗೆ ಪಾತ್ರರಾಗಿ ಎಂದು ಮನವಿ ಮಾಡಿದರು.

ಪಾರಾಯಣಕ್ಕೆ ಬರುವ ಭಕ್ತರಿಗೆ ಎಲ್ಲಾ ರೀತಿಯ ವ್ಯವಸ್ಥೆ ಮಾಡಲಾಗುತ್ತಿದ್ದು, ಯಾವುದೇ ಅಹಿತಕರ ಘಟನೆ ಸಂಭವಿಸದಂತೆ ಮುನ್ನೆಚ್ಚರಿಕೆ ಕ್ರಮವಾಗಿ ಬಿಗಿ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿದೆ ಯಾವುದೇ ಗೊಂದಲ, ಆಂತಕವಿಲ್ಲದೆ ಭಕ್ತಾದಿಗಳು ಪಾಲ್ಗೊಳ್ಳಿ ಎಂದರು.

ಈ ವೇಳೆ ಕಾರ್ಯಕ್ರಮದ ಪೋಸ್ಟರ್ ಅನ್ನು ಶಾಸಕರಾದ ಟಿ.ಎಸ್.ಶ್ರೀವತ್ಸ, ಕೆ.ಹರೀಶ್‌ಗೌಡ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಮಾಜಿ ಮೇಯರ್ ನಾರಾಯಣ್, ಕಾಂಗ್ರೆಸ್ ಮುಖಂಡ ನವೀನ್ ಕುಮಾರ್, ಬಿಜೆಪಿ ಮುಖಂಡ ರಾಜೇಂದ್ರ, ಗಣಪತಿ ಆಶ್ರಮದ ಪ್ರಸಾದ್ ಸ್ವಾಮೀಜಿ, ಶ್ರೀಕಂಠ ಕುಮಾರ್, ವಿಕ್ರಂ ಅಯ್ಯಂಗಾರ್ ಸೇರಿದಂತೆ ಮತ್ತಿತರರು ಬಿಡುಗಡೆ ಗೊಳಿಸಿದರು.

ಸರೋಜಿನಿ ಮಹಿಷಿ ಪ್ರಶಸ್ತಿ ಪ್ರದಾನ



ಇತ್ತೀಚಿಗೆ ದೆಹಲಿಯಲ್ಲಿ ನಡೆದ ದೆಹಲಿ ಕರ್ನಾಟಕ ಸಂಘದ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಡಾ. ಲತಾ ರಾಜಶೇಖರ್ ಅವರಿಗೆ ಪ್ರತಿಷ್ಠಿತ ಸರೋಜಿನಿ ಮಹಿಷಿ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಕರ್ನಾಟಕ ಸಂಘದ ಅಧ್ಯಕ್ಷ ಸಿ.ಎಮ್. ನಾಗರಾಜ್, ಪ್ರಸಿದ್ಧ ಸಾಹಿತಿಗಳಾದ ಡಾ.ಹಂಪನಾ, ಕವಿ ಬಿ.ಆರ್. ಲಕ್ಷ್ಮಣ್ ರಾವ್, ಡಾ.ಪ್ರಧಾನ ಗುರುದತ್, ಹಿರಿಯ ಪತ್ರಕರ್ತ ವಿಶ್ವೇಶ್ವರ ಭಟ್, ಚಲನಚಿತ್ರ ನಿರ್ದೇಶಕ ನಾಗಾಭರಣ, ನಾಯಕ ನಟ ಚರಣ್ ರಾಜ್ ಮತ್ತಿತರರು ಪಾಲ್ಗೊಂಡಿದ್ದರು.

ಉಚಿತ ಕಣ್ಣಿನ ಶಸ್ತ್ರ ಚಿಕಿತ್ಸಾ ಶಿಬಿರ

ಮೈಸೂರು, ಫೆ 13– ಎನ್.ಜೆ.ಎಸ್. ಚಾರಿಟೆಬಲ್ ಟ್ರಸ್ಟ್, ಮೈಸೂರು ವೀರಶೈವ ಸಜ್ಜನ ಸಂಘ ಹಾಗೂ ಅರವಿಂದ ಕಣ್ಣಿನ ಆಸ್ಪತ್ರೆ, ಕೊಯಮತ್ತೂರು ಸಂಯುಕ್ತ ಆಶ್ರಯದಲ್ಲಿ ಫೆ. 22 ರಂದು ಬೆಳಗ್ಗೆ 8 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಮಂಡಿ ಮೊಹಲ್ಲಾ, ಕಬೀರ್ ರಸ್ತೆ, ಮಂಡಿ ಪೊಲೀಸ್ ಸ್ಟೇಷನ್ ಹತ್ತಿರವಿರುವ ಕಂಠಿ ಮಲ್ಲಣ್ಣನವರ ಕಲ್ಯಾಣ ಮಂದಿರದಲ್ಲಿ ಉಚಿತ ಕಣ್ಣಿನ ಶಸ್ತ್ರ ಚಿಕಿತ್ಸಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ಬಸವರಾಜ್, ಮೊ. 94487 53597 ಸಂಪರ್ಕಿಸಬಹುದು.

ವಿದ್ಯಾರ್ಥಿಗಳಿಗೆ ಪರಿಣಾಮಕಾರಿ ಬೋಧನೆ ಮಾಡುವ ಸಂಬಂಧ ಪ್ರಾಧ್ಯಾಪಕರಿಗೆ ಸಾಮರ್ಥ್ಯಾಭಿವೃದ್ಧಿ ತರಬೇತಿ ಕಾರ್ಯಾಗಾರ

ಮೈಸೂರು, ಫೆ.13(ಎಂಟಿವೈ)– ವಿದ್ಯಾರ್ಥಿಗಳಿಗೆ ಪರಿಣಾಮಕಾರಿಯಾಗಿ ಬೋಧನೆ ಮಾಡಲು ಕೈಗೊಳ್ಳಬೇಕಾದ ಕ್ರಮಗಳ ಕುರಿತು ತಿಳುವಳಿಕೆ ನೀಡುವ ಸಲುವಾಗಿ ಪ್ರಾಧ್ಯಾಪಕರಿಗೆ ಸಾಮರ್ಥ್ಯಾಭಿವೃದ್ಧಿ ತರಬೇತಿ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ ಎಂದು ಕಾಲೇಜು ಶಿಕ್ಷಣ ಇಲಾಖೆಯ ಪ್ರಾದೇಶಿಕ ಜಂಟಿ ನಿರ್ದೇಶಕರಾದ ಡಾ. ಡಿ.ಎಸ್.ಪ್ರತಿಮಾ ಅಭಿಪ್ರಾಯಪಟ್ಟಿದ್ದಾರೆ.



ಮಹಾರಾಣಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನಲ್ಲಿ ಕರ್ನಾಟಕ ಉನ್ನತ ಶಿಕ್ಷಣ ಪರಿಷತ್ತು, ಕಾಲೇಜು ಶಿಕ್ಷಣ ಇಲಾಖೆ ವತಿಯಿಂದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಧ್ಯಾಪಕರಿಗೆ ಆಯೋಜಿಸಿದ್ದ ಕಾರ್ಯಾಗಾರಕ್ಕೆ ಕಾಲೇಜು ಶಿಕ್ಷಣ ಇಲಾಖೆಯ ಪ್ರಾದೇಶಿಕ ಜಂಟಿ ನಿರ್ದೇಶಕರಾದ ಡಾ. ಡಿ.ಎಸ್.ಪ್ರತಿಮಾ ಚಾಲನೆ ನೀಡಿದರು.

ಕರ್ನಾಟಕ ಉನ್ನತ ಶಿಕ್ಷಣ ಪರಿಷತ್ತು, ಕಾಲೇಜು ಶಿಕ್ಷಣ ಇಲಾಖೆ ವತಿಯಿಂದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಧ್ಯಾಪಕರಿಗೆ ರೂಸಾ ಪ್ರಾಯೋಜಿತ 'ಸಾಮರ್ಥ್ಯಾಭಿವೃದ್ಧಿ ತರಬೇತಿ' ಕಾರ್ಯಾಗಾರದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪ್ರಥಮ ದರ್ಜೆ ಕಾಲೇಜುಗಳಲ್ಲಿ ಗುಣಮಟ್ಟದ ಬೋಧನೆ ಹಾಗೂ ನೂತನ ಶೈಲಿಯ ಬೋಧನಾ ಕ್ರಮಗಳ ಕುರಿತು ಅಧ್ಯಾಪಕರಿಗೆ ಸಾಮರ್ಥ್ಯಾಭಿವೃದ್ಧಿ ಕಾರ್ಯಾಗಾರ ಆಯೋಜಿಸುವ ಮೂಲಕ ತರಬೇತಿ ನೀಡಲಾಗುತ್ತಿದೆ. ಈ ತರಬೇತಿಯಲ್ಲಿ ಕಲಿತ ವಿಚಾರ ಹಾಗೂ ಸಂಪಾದಿಸಿದ ಜ್ಞಾನವನ್ನು ವಿದ್ಯಾರ್ಥಿಗಳಿಗೆ ಪರಿಣಾಮಕಾರಿಯಾಗಿ ಬೋಧನೆ ಮಾಡುವುದಕ್ಕೆ ವಿನಿಯೋಗಿಸಬೇಕು ಎಂದರು.

ಮೈಸೂರು ವಿಭಾಗದ ನಾಲ್ಕು ಜಿಲ್ಲೆಗಳ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕರಿಗೆ ಈ ಕಾರ್ಯಕ್ರಮದ ಉದ್ದೇಶ ತಲುಪಬೇಕು ಎಂಬುದು ನಮ್ಮ ಆಶಯ. ಕಾರ್ಯಾಗಾರವು ಒಂದು ಸಾವಿರ ಪ್ರಾಧ್ಯಾಪಕರನ್ನು ತಲುಪುತ್ತಿದೆ. ಪ್ರಾಧ್ಯಾಪಕರು ತರಗತಿಯಲ್ಲಿ ಕಲಿಕೆಯಲ್ಲಿ ಹಿಂದುಳಿದಿರುವ ಮಕ್ಕಳನ್ನು ಗುರುತಿಸಿ ಅವರನ್ನು ಮುನ್ನೆಲೆಗೆ ತರುವ ಪ್ರಯತ್ನ ಮಾಡಬೇಕು ಎಂದು ಸಲಹೆ ನೀಡಿದರು.

ಮಹಾರಾಣಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ ಪ್ರಾಂಶುಪಾಲ ಡಾ.ಸಿ. ನಟರಾಜ್ ಮಾತನಾಡಿ, ಪ್ರಾಧ್ಯಾಪಕರು ವಿದ್ಯಾರ್ಥಿಗಳ ಕೀಳರಿಮೆಯನ್ನು ಗುರುತಿಸಿ ಅವರಲ್ಲಿ ಆತ್ಮವಿಶ್ವಾಸ ತುಂಬುವ ಕೆಲಸ ಮಾಡಬೇಕು ಎಂದರು.

ಮೈಸೂರು ವಿಶ್ವವಿದ್ಯಾಲಯದ ಪರೀಕ್ಷಾಂಗ ಕುಲ ಸಚಿವ ಪ್ರೊ.ಎನ್.ನಾಗರಾಜ್ ಮತ್ತು ಮೈಸೂರು ವಿಶ್ವವಿದ್ಯಾಲಯದ ಜೆನೆಟಿಕ್ಸ್ ವಿಭಾಗದ ಮುಖ್ಯಸ್ಥರಾದ ಪ್ರೊ.ಸುತ್ತೂರು ಮಾಲಿನಿ ಪ್ರಾಧ್ಯಾಪಕರಿಗೆ ತರಬೇತಿ ಸಾಮರ್ಥ್ಯಾಭಿವೃದ್ಧಿ ಕುರಿತು ತರಬೇತಿ ನೀಡಿದರು.

ಕಾರ್ಯಕ್ರಮದ ಸಂಯೋಜಕರಾದ ಮಹಾರಾಣಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ ಐಕ್ಯೂಎಸಿ ಸಂಯೋಜಕ ಡಾ.ಮುತ್ತುರಾಜ್ ತರಬೇತಿಯ ಪ್ರಾಮುಖ್ಯತೆಯನ್ನು ಕುರಿತು ಮಾತನಾಡಿದರು. ಕಾಲೇಜು ಶಿಕ್ಷಣ ಇಲಾಖೆಯ ಮೈಸೂರು ಪ್ರಾದೇಶಿಕ ವಲಯದ ಪತ್ರಾಂಕಿತ ವ್ಯವಸ್ಥಾಪಕ ಅರವಿಂದ್, ಮಹಾರಾಣಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ ಪತ್ರಾಂಕಿತ ವ್ಯವಸ್ಥಾಪಕರಾದ ಲಲಿತಾ ಕೆ.ಕುಮಾರಿ ಉಪಸ್ಥಿತರಿದ್ದರು.

ಮತದಾರರ ಪರಿಷ್ಕರಣೆ ವಿರುದ್ಧ ನಿರ್ಣಯ ಕೈಗೊಳ್ಳುವಂತೆ ಸರ್ಕಾರಕ್ಕೆ ಎಸ್‌ಡಿಪಿಐ ಆಗ್ರಹ

ಮೈಸೂರು,ಫೆ.13(ಜಿಎ)–ಚುನಾವಣಾ ಆಯೋಗದಿಂದ ನಡೆಯುತ್ತಿರುವ ಮತದಾರರ ತೀವ್ರ ಪರಿಷ್ಕರಣೆ ಪ್ರಕ್ರಿಯೆ ದೇಶದ 100 ಕೋಟಿ ಜನರ ಮೇಲೆ ಮಾಡಿರುವ ಪ್ರಹಾರವಾಗಿದೆ. ಹೀಗಾಗಿ ರಾಜ್ಯ ಸರ್ಕಾರ ಸಹ ಕೇರಳ ಹಾಗೂ ಪಶ್ಚಿಮ ಬಂಗಾಳ ಸರ್ಕಾರಗಳ ರೀತಿ ಅದರ ವಿರುದ್ಧ ನಿರ್ಣಯ ಅಂಗೀಕರಿಸಬೇಕು ಎಂದು ಎಸ್‌ಡಿಪಿಐ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ಆಗ್ರಹಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರದ ಈ ಕ್ರಮ ಜನರನ್ನು ಸಂಕಷ್ಟಕ್ಕೆಡು ಮಾಡಿದ್ದು, ಆತಂಕ, ತಳಮಳ ಸೃಷ್ಟಿಸಿದೆ. ಏಕೆಂದರೆ ಇದು ಚುನಾವಣಾ ವೇಳೆಯ ಮತದಾರರ ಪಟ್ಟಿ ಪರಿಷ್ಕರಣೆಯಲ್ಲ. ಬದಲಾಗಿ ಯಾರು ಬೇಕಾದರೂ ಯಾರ ಬಗ್ಗೆಯಾದರೂ ಅರ್ಜಿ ನೀಡಿ ಮತದಾರರ ಪಟ್ಟಿಯಿಂದ ಹೆಸರು ಕೈಬಿಡುವಂತೆ ಮಾಡಬಹುದಾಗಿದೆ. ಇದೇ ರೀತಿ ಈಗ ಪಶ್ಚಿಮ ಬಂಗಾಳದಲ್ಲಿ ಸುಮಾರು 250 ಬಿಜೆಪಿ ಕಾರ್ಯಕರ್ತರು ಸುಮಾರು 15 ಸಾವಿರ ಮುಸ್ಲಿಮರ ಹೆಸರು ಪಟ್ಟಿಯಿಂದ ಕೈಬಿಡುವಂತೆ ಅರ್ಜಿ ಸಲ್ಲಿಸಿದ್ದಾರೆ. ಹೀಗಾಗಿ ಮೂರನೇ ವ್ಯಕ್ತಿಗೆ ಈ ಅಧಿಕಾರ ಚುನಾವಣಾ ಆಯೋಗ ಏಕೆ ನೀಡಿತು ಎಂದು ಪ್ರಶ್ನಿಸಿದರು.

ನೂತನ ಪ್ರಕ್ರಿಯೆಯಿಂದಾಗಿ ಆದಿವಾಸಿಗಳು, ವಲಸೆ ಕಾರ್ಮಿಕರು ಮೊದಲಾದವರಿಗೆ ಸಮಸ್ಯೆ ಯುಂಟಾಗಲಿದೆ. ಇದು ದೇಶದ ಜನರ ಮೇಲೆ ಮೋದಿ ಸರ್ಕಾರ ಮಾಡಿರುವ ಪ್ರಹಾರವಾಗಿದೆ. ಈ ಪ್ರಕ್ರಿಯೆ ಅಡಿಯಲ್ಲಿ ಈ ರೀತಿ ಈಗಾಗಲೇ ಸುಮಾರು 1.3 ಕೋಟಿ ಜನರಿಗೆ ನೋಟಿಸ್ ನೀಡಲಾಗಿದೆ. 6 ಕ್ಕಿಂತಲೂ ಹೆಚ್ಚು ಮಕ್ಕಳಿರುವವರು, ಪೋಷಕರು ಮತ್ತು ಮಕ್ಕಳ ನಡುವಿನ ವಯಸ್ಸಿನ 15 ವರ್ಷಕ್ಕಿಂತ ಹೆಚ್ಚು ವ್ಯತ್ಯಾಸ, ಅಜ್ಜ, ಅಜ್ಜಿ ಮೊಮ್ಮಕ್ಕಳ ನಡುವೆ 40 ವರ್ಷ ವ್ಯತ್ಯಾಸವೆಂಬ ರೀತಿಯ ಅತಾರ್ಕಿಕ ಮಾನದಂಡದ ಅಡಿಯಲ್ಲಿ ನೋಟಿಸ್ ಜಾರಿ ಮಾಡಲಾಗುತ್ತಿದೆ. ಈ ಹಿಂದೆಲ್ಲ ಅತಿ ಕಡಿಮೆ ವಯಸ್ಸಿಗೇ ವಿವಾಹವಾಗುತ್ತಿದ್ದರು. ಇದರಿಂದ ಈ ರೀತಿ ವಯಸ್ಸಿನ ಅಂತರವಿದೆ. ಆದರೆ ಈ ನಿಯಮ ಅಂತಹವರಿಗೆಲ್ಲ ಸಮಸ್ಯೆಯುಂಟು ಮಾಡುತ್ತಿದೆ ಎಂದರು.

ಪರಿಶೀಲಿಸುವ ಬಿಎಲ್‌ಓಗಳಿಗೆ ಸೂಕ್ತ ತರಬೇತಿಯಿಲ್ಲ ಇವರಿಗೆ ಸೂಕ್ತ ಮಾಹಿತಿಯೂ ಇಲ್ಲ. ಹೀಗಾಗಿ ಈ ಪ್ರಕ್ರಿಯೆ ಗೊಂದಲಕಾರಿಯಾಗಿದೆ. ಈ ರೀತಿ ಚುನಾವಣಾ ಆಯೋಗ ತನ್ನ ಕೆಲಸ ಮಾಡುವುದರ ಬದಲು ಈ ರೀತಿ ದೇಶದ ಜನರ ಮೇಲೆ ಪ್ರಹಾರ ಮಾಡುವ ಕೆಲಸ ಮಾಡುತ್ತಿದೆ ಎಂದು ಕಿಡಿಕಾರಿದರು. ಸುದ್ದಿಗೋಷ್ಠಿಯಲ್ಲಿ ಅಮ್ಜದ್ ಖಾನ್, ರಫತ್‌ಖಾನ್, ಶಫಿ, ಎಸ್. ಸ್ವಾಮಿ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

14.2.2026 ಶನಿವಾರ, ಮಳೆ ನಕ್ಷತ್ರ: ಧನಿಷ್ಠ 6.02.2026 ರಿಂದ 18.02.2026
ವಿಶ್ವಾವಸು ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಕೃಷ್ಣ ಪಕ್ಷ,
ತಿಥಿ: ದ್ವಾದಶಿ, ನಕ್ಷತ್ರ: ಪೂರ್ವಾಷಾಢ, ರಾಹುಕಾಲ: ಬೆಳಗ್ಗೆ 9ರಿಂದ 10.30ರವರೆಗೆ

■ **ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯ:** ಸಂಸ್ಥೆಯ 90ನೇ ವಾರ್ಷಿಕೋತ್ಸವ ಹಾಗೂ ಮಹಾಶಿವರಾತ್ರಿ ಪ್ರಯುಕ್ತ ಗುಜರಾತಿನ ಸುಪ್ರಸಿದ್ದ ಶ್ರೀ ಸೋಮನಾಥ ದಿವ್ಯ ದರ್ಶನ, ಸಂಜೆ 6.15 ರಿಂದ ಸಂಚಾಲಕರಾದ ಬಿ.ಕೆ. ಯತ್ನ ಅವರಿಂದ ಅಷ್ಟ ಶಕ್ತಿಗಳು ಕುರಿತು ಪ್ರವಚನ, ಸಂಜೆ 7 ರಿಂದ ಡಾ. ವಿ. ಕೇಶವಮೂರ್ತಿ ಅವರಿಂದ ಹೃದಯದ ಆರೋಗ್ಯ ಕುರಿತು ಉಪನ್ಯಾಸ, ರಾತ್ರಿ 8 ರಿಂದ ಗೋಣಿಕೊಪ್ಪ ಅನ್ವಿತ್ ಕುಮಾರ್ ಮತ್ತು ಯೋಗಶ್ರೀ ಅವರಿಂದ ಭಕ್ತಿಗೀತೆ, ಸ್ಥಳ: ಹುಣಸೂರು ರಸ್ತೆ, ಐಶ್ವರ್ಯ ಪೆಟ್ರೋಲ್ ಬಂಕ್ ಎದುರು, ಬೆಳಗ್ಗೆ 8 ರಿಂದ.

■ **ಲಯನ್ಸ್ ಇಂಟರ್‌ನ್ಯಾಷನಲ್ :** ದಿ ನೆಸ್ಟ್ ಪ್ರಾದೇಶಿಕ ಸಮ್ಮೇಳನ, ಮುಖ್ಯ ಅತಿಥಿಗಳು : ಮಲ್ಟಿಪಲ್ ಕೌನ್ಸಿಲ್ ಛೇರ್ಮನ್ ಲಯನ್ ಎನ್. ಮೋಹನ್ ಕುಮಾರ್, ಗೌರವ ಅತಿಥಿಗಳು : ಲಯನ್ ಡಾ. ಎನ್. ಕೃಷ್ಣೇಗೌಡ, ಡಾ. ಆರ್. ಸುಮಾ, ಅಧ್ಯಕ್ಷತೆ : ರೀಜನ್ ಛೇರ್ಮನ್ ಲಯನ್ ಸತೀಶ್ ದಿ ನೆಸ್ಟ್, ಸ್ಥಳ: ಬಿಲ್ಡರ್ಸ್ ಅಸೋಸಿಯೇಷನ್ ಸಭಾಂಗಣ, ಅಕ್ಕಮಹಾದೇವಿ ರಸ್ತೆ, ವಿಶ್ವೇಶ್ವರನಗರ, ಬೆಳಗ್ಗೆ 8ಕ್ಕೆ.

■ **ಐಕ್ಯಾನ್, ಟಿಟಿಎಲ್ ಕಾಲೇಜು :** ವೀರ ಯೋಧರಿಗೆ ನುಡಿ ನಮನದ ಅಂಗವಾಗಿ ರಕ್ತದಾನ ಶಿಬಿರ, ಉದ್ಘಾಟನೆ : ಲೆಫ್ಟಿನೆಂಟ್ ಕರ್ನಲ್ ವೈ.ಕೆ. ಸಂಜೀವ್, ಮುಖ್ಯ ಅತಿಥಿಗಳು : ಶಾಸಕ ಕೆ. ಹರೀಶ್‌ಗೌಡ, ವೈದ್ಯಕೀಯ ಅಧೀಕ್ಷಕ ಡಾ. ಕೆ.ಎಸ್. ಸದಾನಂದ, ಶ್ರೀಮತಿ ಡಾ. ಗೀತಾ, ಟಿ.ಟಿ.ಎಲ್. ಕಾಲೇಜು ಪ್ರಿನ್ಸಿಪಾಲ್ ಬಿ.ವಿ. ಪ್ರಶಾಂತ್, ಕೆ.ಪಿ. ದಿವಾಕರ್, ನೀಲಕಂಠ ಕುಮಾರ ಶೆಟ್ಟಿ, ಹೆಚ್.ಎಸ್. ನಂಜುಂಡಸ್ವಾಮಿ, ಎಸ್. ನಟರಾಜು, ಸಿ.ಕೆ. ಬಸಪ್ಪ, ಸ್ಥಳ: ಟಿಟಿಎಲ್ ಕಾಲೇಜು ಆವರಣ, ಬೆಳಗ್ಗೆ 8.30 ರಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಕೊಲೆಸ್ಟ್ರಾಲ್ ಚಿಕಿತ್ಸಾ ಶಿಬಿರ, ಪಾರ್ಕಿನ್‌ಸನ್ಸ್ ಕಾಯಿಲೆ, ಮೈಗ್ರೇನ್ ಹಾಗೂ ಕಣ್ಣು–ಮೂಗಿನ ಅಲರ್ಜಿಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಮಂಡಿ ನೋವು, ಮೂಲವ್ಯಾಧಿ ಕುರಿತು ತಪಾಸಣೆ, ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ರಿಂದ.

■ **ಶ್ರೀ ಅವಧೂತ ದತ್ತ ಪೀಠ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಮಹಾಶಿವರಾತ್ರಿ ಕಾರ್ಯಕ್ರಮ, ಬೆಳಗ್ಗೆ 9.00 ಸಾಮೂಹಿಕ ಹನುಮಾನ್ ಚಾಲೀಸಾ ಪಾರಾಯಣ, ಸಂಜೆ 6.00 ಗಿರಿಜಾ ಕಲ್ಯಾಣ ಮತ್ತು ದಿವ್ಯನಾಮ ಸಂಕೀರ್ತನ, ಸ್ಥಳ: ಮಹಾರಾಜ ಕಾಲೇಜು ಮೈದಾನ, ಮೈಸೂರು

■ **ಚೈತ್ರ ಫೌಂಡೇಷನ್ :** ಡಾ. ಎಸ್. ಸುಧಾ ಅವರ ಕೃತಿಗಳ ಲೋಕಾರ್ಪಣೆ ಕಾರ್ಯಕ್ರಮ, ಪರಿಸರ ಹಬ್ಬ, ಪ್ರಕೃತಿ ತಜ್ಞ ಮನು ಕೃಷ್ಣಮೂರ್ತಿ, ಹಿರಿಯ ಲೇಖಕಿ ಸೌಗಂಧಿಕಾ ಜೋಯ್ಸ್, ಮೋಹನ್ ವರ್ಣೇಕರ್, ಪುಟಾಣಿ ಸೃಷ್ಟಿ, ರಮೇಶ್ ಅವರಿಂದ ಕೃತಿಗಳ ಲೋಕಾರ್ಪಣೆ, ಅಧ್ಯಕ್ಷತೆ : ಹಿರಿಯ ಲೇಖಕಿ ಕೆರೋಡಿ ಎಂ. ಲೋಲಾಕ್ಷಿ, ಸ್ಥಳ: ಉತ್ತರ ಕನ್ನಡ ಜಿಲ್ಲಾ ಸಾಂಸ್ಕೃತಿಕ ಸಂಘ, ಬೆಳಗ್ಗೆ 10.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಪತ್ರಿಕಾಧ್ವನಿ– ಮೈಸೂರು ಸೀಮೆಯ ಪತ್ರಕರ್ತರ ಪರಿಚಯಾತ್ಮಕ ಕಾರ್ಯಕ್ರಮ, ಪ್ರಸ್ತುತಿ : ಹಿರಿಯ ಪತ್ರಕರ್ತರಾದ ಡಾ. ಕೂಡ್ಲಿ ಗುರುರಾಜ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ– ಸದಾಶಿವ ಪಾಟೀಲ್ ಹಾಗೂ ಪಿ.ಎಸ್. ರಂಜನಿ, ವ್ಯಾಖ್ಯಾನ–ಪ್ರೊ.ನಾಗಣ್ಣ, 6.50 ರೈತರಿಗೆ ಸಲಹೆ, 7.15 ಭಾವಗೀತೆ, 8.30 ಯುವವಾಣಿ – ಪರೀಕ್ಷೆಗೆ ಸಿದ್ಧರಾಗೋಣ ಬನ್ನಿ ದ್ವಿತೀಯ ಪಿ.ಯು.ಸಿ. ಪರೀಕ್ಷಾ ಸಿದ್ಧತಾ ಸರಣಿ ಕಾರ್ಯಕ್ರಮ, ಪ್ರಸ್ತುತಿ–ದಿಗ್ವಿಜಯ್ .ಬಿ, 9.15 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಅಭಿಷೇಕ್ ರಘುರಾಂ– ಹಾಡುಗಾರಿಕೆ, 10.30 ಹಿಂದಿ ಚಿತ್ರಗೀತೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ನಮ್ಮೂರ್ ಹೆಸರು, ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ–ಎಂ.ಎಸ್. ಕೀರ್ತನಾ, 12.45 ಜನಪದ ಸಂಗೀತ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಜನಪದ ಸಂಗೀತ, 3.30 ಮಕ್ಕಳ ಮಂಟಪ – ಮೈಸೂರಿನ ಆದಿಚುಂಚನಗಿರಿ ಸೆಂಟ್ರಲ್ ಸ್ಕೂಲ್ ಮಕ್ಕಳಿಂದ ಶಿವರಾತ್ರಿ ಹಬ್ಬದ ಪ್ರಯುಕ್ತ ವಿಶೇಷ ಕಾರ್ಯಕ್ರಮ, 4.00 ನಾಟಕ–ಅಂತರಾತ್ಮ ನೀಡಿದ ಕಣ್ ಬೆಳಕು, 4.30 ನೆನಪಿನಂಗಳ (ಧ್ವನಿ ಮುದ್ರಣ ಭಂಡಾರದಿಂದ), 6.50 ಕೃಷಿರಂಗ :ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಸಾವಯವ ಉತ್ಪನ್ನಗಳ ನೇರ ಮರಾಟ ಈ ಕುರಿತು ಮೈಸೂರಿನ ಸಹಜ ಸೀಡ್ಸ್ ಸಂಸ್ಥೆಯ ನಿರ್ದೇಶಕರಾದ ಜಿ. ಕೃಷ್ಣಪ್ರಸಾದ್ ಅವರೊಂದಿಗೆ ಸಂದರ್ಶನ, ಸಂದರ್ಶಕರು–ಎನ್. ಕೇಶವಮೂರ್ತಿ, 8.00 ಸವಿನೆನಪು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ

■ **ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ :** ನೆನಪಿನಂಗಳ ಸಂವಾದ ಕಾರ್ಯಕ್ರಮ, ಅತಿಥಿಗಳು : ಹಿರಿಯ ರಂಗಕರ್ಮಿ ಹರಿಪ್ರಸಾದ್, ಸ್ಥಳ: ಶ್ರೀರಂಗ ಚಾವಡಿ, ರಂಗಾಯಣ, ಸಂಜೆ 5ಕ್ಕೆ.


■ **ಮೈಸೂರು ಕನ್ನಡ ವೇದಿಕೆ :** ಸ್ವಾಮಿ ವಿವೇಕಾನಂದ ಮತ್ತು ಸಾವಿತ್ರಿಬಾಯಿ ಫುಲೆ ಜಯಂತ್ಯೋತ್ಸವ, ಉದ್ಘಾಟನೆ : ಉಪ ವಿಭಾಗಾಧಿಕಾರಿ ವೆಂಕಟೇಶ್, ಪ್ರಧಾನ ಭಾಷಣ : ಹಿರಿಯ ಪತ್ರಕರ್ತ ಅಂಶಿಪ್ರಸನ್ನ ಕುಮಾರ್, ಸನ್ಮಾನಿಸುವವರು : ಮಾಜಿ ಸಿಂಡಿಕೇಟ್ ಸದಸ್ಯ ಡಾ. ಈ.ಸಿ. ನಿಂಗರಾಜೇಗೌಡ, ಮುಖ್ಯ ಅತಿಥಿಗಳು : ಚೆಲುವರಾಜ್, ಕ್ಯಾತನಹಳ್ಳಿ ಪ್ರಕಾಶ್, ಸಾ.ಸಿ. ದೊರೆಸ್ವಾಮಿ, ಅಧ್ಯಕ್ಷತೆ : ವೇದಿಕೆ ಅಧ್ಯಕ್ಷ ಎಸ್. ಬಾಲಕೃಷ್ಣ, ಸ್ಥಳ: ನಮನ ಕಲಾ ಮಂಟಪ, ಕೃಷ್ಣಮೂರ್ತಿಪುರಂ, ಬೆಳಗ್ಗೆ 11.30ಕ್ಕೆ.

■ **ಮೈಸೂರು ವಿವಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ :** ಸ್ಪಾಟ್‌ಲೈಟ್ ಉಪನ್ಯಾಸ–1, ಕರಾಮುವಿವಿ ಪ್ರಾಧ್ಯಾಪಕರಾದ ಡಾ. ಜ್ಯೋತಿಶಂಕರ್ ಅವರು ಗ್ರಂಥಾಲಯಗಳಿಗಾಗಿ ಕನ್ನಡ ಪುಸ್ತಕಗಳು : ಶಾಸ್ತ್ರೀಯ, ಪ್ರಭಾವಶೀಲ ಹಾಗೂ ಅಗತ್ಯ ಕೃತಿಗಳು ಕುರಿತು ಉಪನ್ಯಾಸ, ಸ್ಥಳ: ಗ್ರಂಥಾಲಯ ವಿಭಾಗ, ಮಧ್ಯಾಹ್ನ 3ಕ್ಕೆ.

■ **ಸುರುಚಿ ರಂಗಮನೆ :** ಸೈನ್ಸ್ ಸಂಜೆ ಕಾರ್ಯಕ್ರಮ, ನ್ಯಾಷನಲ್ ಸೆಂಟರ್ ಫಾರ್ ಬಯೋಲಾಜಿಕಲ್ ಸೈನ್ಸ್ ನಿರ್ದೇಶಕ ಪ್ರೊ. ಎಲ್.ಎಸ್. ಶಶಿಧರ ಅವರಿಂದ ಸ್ವತಂತ್ರ ಭಾರತದಲ್ಲಿ ವಿಜ್ಞಾನ ಕೇಳದ ಕಥೆಗಳು, ಅನೂಹ್ಯ ಪ್ರಭಾವ ಕುರಿತು ಉಪನ್ಯಾಸ, ಸ್ಥಳ: ಸುರುಚಿ ರಂಗಮನೆ, ಕುವೆಂಪುನಗರ, ಸಂಜೆ 6.30 ರಿಂದ.

■ **ಅರ್ಕಧಾಮ :** ಅರ್ಕಧಾಮದಲ್ಲಿ ಆದಿ ಪೂಜಿತನ ಆರಾಧನೋತ್ಸವ, ಶ್ರೀ ಅರ್ಕ ಮಹಾಗಣಪತಿ ಪ್ರಾಣ ಪ್ರತಿಷ್ಠಾಪನೆಯ ದ್ವಿತೀಯ ವಾರ್ಷಿಕೋತ್ಸವದ ಸುದಿನ, ಸಂಜೆ 7 ರಿಂದ ಪ್ರಧಾನ ಅರ್ಕ ಮಹಾಗಣಪತಿ ಪ್ರಾಣಪ್ರತಿಷ್ಠಾಪನೆಯ ದ್ವಿತೀಯ ವಾರ್ಷಿಕೋತ್ಸವದ ಪೂಜಾ ಕಾರ್ಯಕ್ರಮ, ಗಣಪತಿ ಪೂಜೆ, ಪುಣ್ಯಾರ್ಜನೆ, ಗೋಪೂಜೆ, ಅಭಿಷೇಕ, ಗಣಪತಿ ಹೋಮ, ಹವನ, ಮಹಾಪೂರ್ಣಾಹುತಿ, ಮಹಾಮಂಗಳಾರತಿ, ಆಶೀರ್ವಚನ, ತೀರ್ಥಪ್ರಸಾದ ವಿನಿಯೋಗ (ಸಾತ್ವಿಕ ಆಹಾರ), ಸ್ಥಳ:ಅರ್ಕಧಾಮ, ಬೋಗಾದಿ ಗದ್ದಿಗೆ ರಸ್ತೆ.





ವೈಕುಂಠ ಸಮಾರಾಧನೆ ಆಹ್ವಾನ ಪತ್ರಿಕೆ



ಶ್ರೀಮತಿ ಎನ್. ಪ್ರಭಾವತಿ

ಇವರು ದಿನಾಂಕ: 04-02-2026 ಬುಧವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾಗಿ ವೈಕುಂಠ ಸಮಾರಾಧನೆ ಕಾರ್ಯವನ್ನು ದಿನಾಂಕ: 14-02-2026 ಶನಿವಾರ ಮಧ್ಯಾಹ್ನ 1:00 ಗಂಟೆಗೆ ಶ್ರೀ ಮೈಸೂರು ಗುಜರಾತಿ ಸಮಾಜ್ (ಪಿ/2, 2ನೇ ಮೇನ್, ವೈಷ್ಣವಿ ಸರೋವರ್ ಅಪಾರ್ಟ್‌ಮೆಂಟ್ ಎದುರು, ಯಾದವಗಿರಿ, ಮೈಸೂರು). ಇಲ್ಲಿ ಏರ್ಪಡಿಸಲಾಗಿದೆ. ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ತಿಳಿದು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು:

ಪತಿ: ಡಿ. ನಾಗರಾಜು ಬಗರೆ, ಮೃತರ ಪುತ್ರ: ಶ್ರೀ ಆದಿತ್ಯ ವಿಕ್ರಮ್ ಬಗರೆ ಮತ್ತು ಕುಟುಂಬವರ್ಗದವರು ಹಾಗೂ ಬಂಧು ಮಿತ್ರರು

ಭೋಜನ: ಮಧ್ಯಾಹ್ನ 1:00 ಗಂಟೆಗೆ

ಮೈಸೂರು ಮಿತ್ರ

ನಕ್ಕರೆ ಅದೇ ಸ್ವರ್ಗ

ಆಗಿನ ಕಾಲದಲ್ಲಿ ಹುಡುಗ-ಹುಡುಗಿಯರು ಲವ್ ಫೇಲ್ ಆದರೆ
ಕೆರೆಗೋ ಬಾವಿಗೋ ಹಾರಿ ಸಾಯ್ತಾ ಇದ್ರು!
ಆದರೆ ಈಗ ಲವ್ ಫೇಲ್ ಆದರೆ 100 ವಾಟ್ಸಾಪ್
ಸ್ಟೇಟಸ್ ಹಾಕಿ ಬೇರೆಯವರ ಸಾಯಿಸ್ತಾರೆ!!

ಮೈಸೂರು ಮಿತ್ರ

ಶನಿವಾರ, ಫೆಬ್ರವರಿ 14, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ನಿಮಗೆ ಒತ್ತಡ, ಸಂಕಟ, ಹಾನಿ, ಅವಮಾನಗಳನ್ನು ತಡೆದುಕೊಳ್ಳುವ ಶಕ್ತಿ ಇಲ್ಲದಿದ್ದರೆ, ಯಶಸ್ಸನ್ನು ಸಹ ತಡೆದುಕೊಳ್ಳುವ ಶಕ್ತಿ ಇಲ್ಲ ಎಂದರ್ಥ.

ವೇದ ಸುಳ್ಳಾದರೂ { ಕಾರ್ಯಾವಾಸಿ
ಗಾದೆ ಸುಳ್ಳಾಗದು { ಕತ್ತೆ ಕಾಲು ಹಿಡಿ

ನಿಮ್ಮ ಪತ್ರಗಳು

ಮರಣವೇ ಇಲ್ಲದ ಮನೆಯಿಲ್ಲ; ಸಮಸ್ಯೆಯೇ ಇಲ್ಲದ ಮಾನವರಿಲ್ಲಾ ಜಗದೊಳು!

ಮಾನ್ಯರೆ,

ನಮ್ಮ ಈ ಭೂಮಿಯಲ್ಲಿ ಜನಿಸಿದ ಪ್ರತಿಯೊಬ್ಬ ಮಾನವರಿಗೂ ಸಮಸ್ಯೆ ತಪ್ಪಿದ್ದಲ್ಲ. ಯಾರೊಬ್ಬರೂ ಸಮಸ್ಯೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ. ಅವರು ಬಡವರಾಗಿರಲೀ, ಶ್ರೀಮಂತರಾಗಿರಲೀ ಒಂದಿಲ್ಲೊಂದು ಸಮಸ್ಯೆಯ ಸುಳಿಯಲ್ಲಿ ಸಿಲುಕಿರುತ್ತಾರೆ. ಈ ಭೂಲೋಕದಲ್ಲಿ ಹೇಗೆ ಸಾವಿಲ್ಲದ ಮನೆಯಿಲ್ಲವೋ ಹಾಗೆ ಸಮಸ್ಯೆಯೇ ಇಲ್ಲದ ಮಾನವರನ್ನು ಕಾಣಲು ಸಾಧ್ಯವೇ ಇಲ್ಲ ಅಲ್ಲವೇ?.

ಮಾನವರಿಗೆ ಸಮಸ್ಯೆಯನ್ನು ಪರಿಹರಿಸಬೇಕೆಂದಾಗ ಚಿಂತೆಯು ಸಮಸ್ಯೆ ಹಿಂದೆಯೇ ಬರುತ್ತದೆ. ಒಂದು ಸಮಸ್ಯೆ ಮುಗಿದು ನಿರಾಳವಾಗಿ ನಿಟ್ಟುಸಿರುಬಿಟ್ಟು ಅಬ್ಬಾ! ಮುಗಿಯಿತು ಎನ್ನುವಷ್ಟರಲ್ಲಿ ಮತ್ತೊಂದು ಸಮಸ್ಯೆಯು ನಮ್ಮ ಕಣ್ಣೆದುರಿಗೇ ಬಂದು ನಿಂತಿರುತ್ತದೆ. ಮಾನವರು ಸಮಸ್ಯೆ-ಕಾರಣ-ಚಿಂತೆ-ಪರಿಹಾರ- ಆತ್ಮವಿಶ್ವಾಸ ಹೀಗೆ ಒಂದು ಕೊಂಡಿಯ ರೀತಿಯಲ್ಲಿ ತಮ್ಮ ಜೀವನವನ್ನು ಸಾಗಿಸುತ್ತಿರುತ್ತಾರೆ.

ಮಾನವರಿಗೆ ಈ ಸಮಸ್ಯೆಯು ಮನೆಯಲ್ಲಿ, ಕೆಲಸ ನಿರ್ವಹಿಸುವ ತಾಣಗಳಲ್ಲಿ ಅಥವಾ ಇನ್ನಿತರ ಸ್ಥಳಗಳಲ್ಲಿ ಉದ್ಭವಿಸಬಹುದು. ಆದರೆ ಮಾನವರು ಆತ್ಮವಿಶ್ವಾಸವೆಂಬ ಆಯುಧದಿಂದ ಅದನ್ನು ಭೇದಿಸಿಕೊಂಡು ಮುನ್ನುಗ್ಗಬೇಕಾಗುತ್ತದೆ. ಇದಕ್ಕೆ ಸಕಾಲಕ್ಕೆ ಸರಿಯಾಗಿ ಮಾರ್ಗದರ್ಶಕರು, ಹಿತೈಷಿಗಳು, ಆತ್ಮೀಯರು ಇಲ್ಲವೇ ಸಲಹೆಗಾರರು ತಮ್ಮ ಬೆಂಬಲಕ್ಕೆ ನಿಂತು ತಮ್ಮ ಆತ್ಮಬಲವನ್ನು ಇಮ್ಮಡಿಗೊಳಿಸಿದಾಗ ಅಪಜಯ ಎಂದಿಗೂ ಆಗುವುದಿಲ್ಲ. ಇಂತಹವರು ಆ ದೇವರ ರೂಪದಲ್ಲಿ ನಮ್ಮ ಕೈಹಿಡಿಯುತ್ತಾರೆ ಎಂಬುದು ನನ್ನ ಬಲವಾದ ನಂಬಿಕೆ. ಜನನದಿಂದ ಮರಣದವರೆಗೂ ಸಮಸ್ಯೆಗೆ ಅಂತ್ಯವೇ ಇಲ್ಲ ಅಲ್ಲವೇ? ಸಮಸ್ಯೆ ಬಂದಾಗ ಕುಗ್ಗಬಾರದು ಸಮಸ್ಯೆಯೇ ಇಲ್ಲವೆಂದು ಹಿಗ್ಗಬಾರದು ಎಂದು ಹಿರಿಯರು ನಮಗೆ ಹೇಳಿರುವ ಕಿವಿಮಾತನ್ನು ಎಂದಿಗೂ ಮರೆಯಬಾರದು. ಮಾನವರಾದ ನಾವು ಸಂಘಜೀವಿ ಒಬ್ಬರಿಗೊಬ್ಬರು ತಮ್ಮೊಳಗಿನ ಸಮಸ್ಯೆಗಳನ್ನು ಹಂಚಿಕೊಂಡು ಅದಕ್ಕೆ ಸೂಕ್ತ ಪರಿಹಾರ ಹುಡುಕಿ ಎಲ್ಲರೂ ಒಟ್ಟಿಗೆ ಬಾಳೋಣ?!

–ಅನಿಲ್ ರಾಜ, ಸಹ ಶಿಕ್ಷಕರು, ಮೈಸೂರು

ಜೀವರಕ್ಷಕರ ಮೇಲಿನ ಹಲ್ಲೆ ಖಂಡನೀಯ

ಮಾನ್ಯರೆ,

ವೈದ್ಯನು ಸಾಕ್ಷಾತ್ ನಾರಾಯಣನೆಂದೂ, ರಕ್ಷಕನೆಂದೂ, ದೇವರ ಸಮಾನ ಎಂಬುದನ್ನು ಸಾರುವುದಕ್ಕೆ, ವೈದ್ಯನನ್ನು 'ವೈದ್ಯೋ ನಾರಾಯಣೋ ಹರಿ' ಎಂದು ಕರೆಯುತ್ತಾರೆ ಹಾಗೂ ವೈದ್ಯನು ರೋಗಿಯ ಮಾನಸಿಕ, ಶಾರೀರಿಕ ಖಾಯಿಲೆಗಳಿಂದ ಕಾಪಾಡುವುದರಿಂದ ಅವರಿಗೆ ದೇವರ ಸ್ಥಾನ ಕೊಡಲಾಗಿದೆ. ಆದರೆ ಕಾಲ ಬದಲಾದಂತೆ ವೈದ್ಯೋ ನಾರಾಯಣೋ ಹರಿ ಎಂಬ ವಾಕ್ಯಕ್ಕೆ ಬದಲಾಗಿ ವೈದ್ಯನನ್ನು ಹರಿ (ಕಿತ್ತು) ಎಂಬಂತೆ ಗೋಚರವಾಗುತ್ತಿದೆ. ಏಕೆಂದರೆ ಮೈಸೂರಿನಲ್ಲಿ ಕಳೆದೆರಡು ತಿಂಗಳ ಹಿಂದೆ ನಡೆದ ಎರಡು ಘಟನೆಗಳು. ಇಂದು ಒಬ್ಬ ವ್ಯಕ್ತಿ ವೈದ್ಯನಾಗುವುದು ಸುಲಭವಲ್ಲ. ಕನಿಷ್ಟ 20 ವರ್ಷಗಳ ಕಠಿಣ ಪರಿಶ್ರಮದ ನಂತರ ಆತ ತನ್ನ ಬಹುತೇಕ ಸಮಯವನ್ನೆಲ್ಲ ರೋಗಿಗಳಿಗಾಗಿ ಮೀಸಲಿಡುತ್ತಾನೆ. ಹಾಗೆಯೇ ವೈದ್ಯ ರೋಗಿಗಳ ಕಾಯಿಲೆಯನ್ನು ವಾಸಿಮಾಡಬಹುದೇ ಹೊರತು ಸಾವನ್ನು ತಡೆಯಲಾರ ಮತ್ತು ಭಗವಂತನ ಇಚ್ಛೆಯಂತೆ ಮನುಷ್ಯ ಅವನ ಆಯಸ್ಸು ಮುಗಿದ ಮೇಲೆ ಹೋಗಲೇ ಬೇಕು. ಯಾವ ವೈದ್ಯನು ರೋಗಿಯ ಸಾವನ್ನು ಬಯಸುವವನಲ್ಲ ಹಾಗೂ ಬೇಕಂತಲೇ ಸಾಯಿಸುವುದಿಲ್ಲ. ಆದರೆ, ರೋಗಿಯ ಸಾವಿಗೆ ವೈದ್ಯನೇ ಕಾರಣನೆಂದು ದೂರುವುದು ಅಸಮಂಜಸ ಹಾಗೂ ಅದೇ ಕಾರಣಕ್ಕೆ ಅವನ ಮೇಲೆ ಹಲ್ಲೆಗಳನ್ನು ಮಾಡುವುದು ಎಷ್ಟು ಸರಿ? ಚಿಕಿತ್ಸೆಯಲ್ಲಿ ಅನುಮಾನ ಇದ್ದಲ್ಲಿ ರೋಗಿಯ ಸಂಬಂಧಿಕರು ಸೂಕ್ತ ವೇದಿಕೆಯಲ್ಲಿ ಪ್ರಶ್ನೆ ಮಾಡುವ ಅಧಿಕಾರ ಇದ್ದರೂ, ಕೆಲ ವ್ಯಕ್ತಿಗಳು, ಸಂಘಟನೆಗಳ ಹೆಸರಿನಲ್ಲಿ ಯಾವುದಾದರೂ ಸಾವು ಸಂಭವಿಸಿದ ಆಸ್ಪತ್ರೆಗಳಿಗೆ ನುಗ್ಗಿ ದಾಂಧಲೆ ನಡೆಸುವುದು, ವೈದ್ಯರ ಮತ್ತು ಸಿಬ್ಬಂದಿಯ ಮೇಲೆ ಹಲ್ಲೆ ಮಾಡಿ ಅವರ ಬಳಿ ಹಣ ಕೀಳುವ ಚಾಳಿ ಬೆಳೆಸಿಕೊಂಡಿದ್ದಾರೆ. ಇದನ್ನು ಕಂಡು ಕೂಡ ಪೊಲೀಸ್ ಇಲಾಖೆ ಇಂತಹವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳದೆ ಸುಮ್ಮನಿರುವುದು ಆಶ್ಚರ್ಯ. ಹಾಗೆಯೇ ವೈದ್ಯ ಸಂಘಟನೆಗಳು ಕೂಡ ವೈಯಕ್ತಿಕವಾಗಿ ನಮಗೇನು ಆಗಿಲ್ಲವೆಂದು ಕಣ್ಣುಮುಚ್ಚಿ ಕುಳಿತರೆ ಹಚ್ಚಿರುವ ಕೆಂಡ ಒಂದಲ್ಲ ಒಂದು ರೀತಿ ಅವರನ್ನು ಸುಡುವುದಂತೂ ಖಂಡಿತ. ಇದೇ ರೀತಿ ದೌರ್ಜನ್ಯ ಮುಂದುವರೆದಲ್ಲಿ ವೈದ್ಯರು ರೋಗಿಯನ್ನು ಅನುಮಾನಾಸ್ಪದವಾಗಿ ನೋಡಿ, ಗಂಭೀರ ಆರೋಗ್ಯ ಸಮಸ್ಯೆ ಇರುವ ರೋಗಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋದಲ್ಲಿ, ಆಸ್ಪತ್ರೆಗಳು ಚಿಕಿತ್ಸೆ ನೀಡಲು ನಿರಾಕರಿಸಿ ರೋಗಿಯು ಚಿಕಿತ್ಸಾ ವಂಚಿತನಾಗಿ ಪ್ರಾಣ ಕಳೆದುಕೊಳ್ಳಬಹುದು ಹುಷಾರ್!

– ವಿನೋದ್ ಶಂಕರ್, ಅವಿಯಾನ ಫೌಂಡೇಶನ್, ಮೈಸೂರು.

ಶಿಕ್ಷಣ ಇಲಾಖೆಯ ಅವೈಜ್ಞಾನಿಕ ನೀತಿಯೋ, ವಿದ್ಯಾರ್ಥಿಗಳಿಗೆ ಒತ್ತಡವೋ

ಮಾನ್ಯರೆ,

ಶಿಕ್ಷಣ ಇಲಾಖೆಯು ಇತ್ತೀಚಿಗೆ ಬಿಡುಗಡೆ ಮಾಡಿರುವ ವರದಿಯ ಪ್ರಕಾರ ದ್ವಿತೀಯ ಪಿಯುಸಿಗೆ ನಡೆಸಿದ ಪೂರ್ವ ಸಿದ್ದತಾ ಪರೀಕ್ಷೆಯಲ್ಲಿ ಶೇಕಡ 50 ರಷ್ಟು ವಿದ್ಯಾರ್ಥಿಗಳು ಮಾತ್ರ ಉತ್ತೀರ್ಣರಾಗಿದ್ದು ಉಳಿದವರು ಅನುತ್ತೀರ್ಣರಾಗಿದ್ದಾರೆ. ಇದಕ್ಕೆ ಏನು ಕಾರಣ ಎಂಬುದನ್ನು ಶಿಕ್ಷಣ ಇಲಾಖೆಯು ಕಂಡು ಹಿಡಿಯಬೇಕಿದೆ. ಸಾಮಾನ್ಯವಾಗಿ ಗಮನಿಸಿದಾಗ ದ್ವಿತೀಯ ಪಿಯುಸಿಗೆ ಎರಡು ಬಾರಿ ಪೂರ್ವ ಸಿದ್ದತಾ ಪರೀಕ್ಷೆ ನಡೆಸಲಾಯಿತು. ಆದರೆ, ನಡೆಸಿದ ಕ್ರಮ ಸರಿ ಕಾಣಲಿಲ್ಲ ಅನ್ನಿಸುತ್ತದೆ. ಏಕೆಂದರೆ ಒಂದು ದಿನವು ಬಿಡುವಿಲ್ಲದಂತೆ ವಿದ್ಯಾರ್ಥಿಗಳು ಪರೀಕ್ಷೆ ಎದುರಿಸಿದ್ದು. ಒಂದು ಪೂರ್ವ ಸಿದ್ದತಾ ಪರೀಕ್ಷೆ ನಡೆದ ನಂತರ ಅದರ ಉತ್ತರ ಪತ್ರಿಕೆಯನ್ನು ವಿದ್ಯಾರ್ಥಿಗಳಿಗೆ ನೀಡಬೇಕು. ಆಗ ಆ ವಿದ್ಯಾರ್ಥಿಯು ತಾನು ಮಾಡಿರುವ ತಪ್ಪುಗಳು ತಿಳಿಯುತ್ತವೆ ಮತ್ತು ಗೊಂದಲ ಇದ್ದರೆ ಉಪನ್ಯಾಸಕರಿಂದ ಪರಿಹಾರ ಕಂಡುಕೊಳ್ಳಲು ಸಹಕಾರಿಯಾಗುತ್ತದೆ. ಅದನ್ನು ಬಿಟ್ಟು ಒಂದರ ಹಿಂದೆ ಮತ್ತೊಂದು ಪರೀಕ್ಷೆ ನಡೆಸಿದರೆ ಇದು ಅವೈಜ್ಞಾನಿಕ ಕ್ರಮವಲ್ಲವೇ? ಅಲ್ಲದೆ ವಿದ್ಯಾರ್ಥಿಗಳನ್ನು ಒತ್ತಡಕ್ಕೂ ಸಿಲುಕಿಸುತ್ತವೆ. ಇನ್ನೇನು ಪರೀಕ್ಷೆ ಹತ್ತಿರವಾಗುತ್ತಿದೆ ಇಲಾಖೆಯು ಯಾವರೀತಿ ಮಕ್ಕಳನ್ನು ಪರೀಕ್ಷೆಗೆ ಸಜ್ಜುಗೊಳಿಸುತ್ತದೆಯೋ ಕಾದುನೋಡಬೇಕಿದೆ. ಅದರಲ್ಲಿ ಮೈಸೂರು ಜಿಲ್ಲೆಯಲ್ಲಿ ಹೆಚ್ಚು ಅನುತ್ತೀರ್ಣರಾಗಿರುವುದು ಆತಂಕಕ್ಕೆ ಕಾರಣವಾಗಿದೆ ಶಿಕ್ಷಣ ತಜ್ಞರು ಸರಿಯಾದ ಮಾರ್ಗದರ್ಶನ ನೀಡಬೇಕು ಆ ಮೂಲಕ ಉತ್ತಮ ಫಲಿತಾಂಶಗಳು ಬರುವಂತೆ ನೋಡಿಕೊಳ್ಳಬೇಕಿದೆ.

–ದಡದಹಳ್ಳಿ ರಮೇಶ್, ಚಂದಕವಾಡಿ ಹೋಬಳಿ, ಚಾಮರಾಜನಗರ ಜಿಲ್ಲೆ

ಮನುಜಮತದ ನನ್ನ ಬೀದಿಯ ಗೆಳೆಯರು



"ನನ್ನ ಮುಸ್ಲಿಂ ಗೆಳೆಯರೊಡನೆ ಬೆರೆಯುವುದಕ್ಕೆ, ಅವರ ಮನೆಗೆ ಹೋಗಲು, ಅವರು ನಮ್ಮ ಮನೆಗೆ ಬರುವುದಕ್ಕೆ ಕಟ್ಟುಪಾಡುಗಳು ಇರಲಿಲ್ಲ, ಹಬ್ಬಗಳಂದು ಖರ್ಜೂರ, ಬಾದಾಮಿ ಕಲ್ಲುಸಕ್ಕರೆ ತಂದುಕೊಡುತ್ತಿದ್ದ ಮಿತ್ರರು, ನಮ್ಮ ಹಬ್ಬದ ಒಬ್ಬಟ್ಟು, ಪಿತೃಪಕ್ಷದ ವಡೆ-ಚಕ್ಕುಲಿ-ಕೋಡುಬಳೆ-ಚಿಕ್ಕಿನುಂಡೆ ಅವರಿಗೆ ಕೊಡುತ್ತಿರುವಾಗ ನಮಗೆ ಜಾತಿ-ಧರ್ಮಗಳ ಸಂಕೋಲೆಗಳು ಇರಲಿಲ್ಲ, ಶಿವರಾತ್ರಿ ಹಬ್ಬದಂದು ಮಧ್ಯ ರಾತ್ರಿವರೆಗೂ ನಮ್ಮೊಂದಿಗೆ ಜಾಗರಣೆ ಮಾಡುತ್ತಿದ್ದರು. ಪ್ರತೀ ಶಿವರಾತ್ರಿ ಹಬ್ಬದಂದು ಇವರೆಲ್ಲಾ ಕಾಡುತ್ತಾರೆ.



ಮಿರ್ಲೆ ಚಂದ್ರಶೇಖರ
ಲೇಖಕರು,
ಮೊ:9916129654.

ಬಾಲ್ಯದ ಜೀವನ ಬಡತನವಿದ್ದರೂ ಹಾಲುಂಡು ಸಂತೃಪ್ತವಾಗಿದ್ದ ತಣ್ಣನೆಯ ಬದುಕಾಗಿತ್ತು, ವೃದ್ಧರಾದ ಕಾಲಕ್ಕೆ ಆ ಹಾಲುಂಡ ಬದುಕನ್ನು ನೆನೆಯುತ್ತಿದ್ದರೆ ಅದೇ ಹಾಲು ಮೊಸರಾಗಿ ಕಡೆದು ಬೆಣ್ಣೆಯ ರೂಪ ಪಡೆದು ತುಪ್ಪವಾದಂತಹ ಅನುಭವ ಪಡೆಯುತ್ತದೆ. ಅಂತ ಹದ್ದೇ ಒಂದು ನೆನಪು ನಿಮಗಾಗಿ, ಕಡೆಯಲ್ಲಿ ನಿಮ್ಮನ್ನೂ ನಿಮ್ಮ ಹಾಲುಂಡ ಬದುಕಿಗೆ ಕರೆದುಕೊಂಡು ಹೋಗುತ್ತದೆ ಎಂಬ ಗ್ಯಾರಂಟಿ ನಿಮಗೆ ಕೊಡುತ್ತೇನೆ. ನನ್ನೂರು ಕಂದಾಯ ದಾಖಲೆಯಲ್ಲಿ ಟೌನ್ ಅಲ್ಲದಿದ್ದರೂ ಟೌನ್ ಎಂದು ಕರೆಸಿಕೊಳ್ಳುತ್ತದೆ, ವ್ಯವಸಾಯವೇ ಮುಖ್ಯ ಕಸುಬಾಗಿರುವ ಅದೊಂದು ಹೋಬಳಿ ಗ್ರಾಮ. ಸೀತಾರಾಮಲಕ್ಷ್ಮಣರು ಪಿತೃವಾಕ್ಯ ಪರಿಪಾಲನೆಗಾಗಿ ವನವಾಸಕ್ಕೆ ಬಂದ ಸಂದರ್ಭದ ಪುರಾಣ ಕಥೆಗಳು ಇಲ್ಲಿ ಜನಜನಿತವಾಗಿವೆ, ಮಿಥಿಲೆಯ ಸೀತೆ ಈ ಊರಿನ ಮಾರ್ಗ ಪ್ರಯಾಣಿಸಿದ್ದರ ಫಲವಾಗಿ ಮಿಥಿಲಾ ಗ್ರಾಮವೆಂದು ಕರೆಯಲಾಗುತ್ತದೆ. ಊರಿನಲ್ಲಿ ಹತ್ತಕ್ಕೂ ಹೆಚ್ಚು ಹಳೆಯ ದೇವಸ್ಥಾನಗಳಿವೆ, ಗುಡಿಗಳಲ್ಲಿರುವ ದಾಖಲೆಗಳು 12ನೇ ಶತಮಾನದ ಮಾಹಿತಿಯನ್ನು ನೀಡುತ್ತವೆ, ದೇವಾಲಯಗಳೇ ಇರುವ ಪುರ ಎನ್ನಬಹುದು.

ಹಿಂದು, ಕ್ರಿಶ್ಚಿಯನ್ ಮತ್ತು ಮುಸ್ಲಿಂ ಧರ್ಮಗಳ ಜನಾಂಗ ಇರುವ ಸಾಮರಸ್ಯದ ಊರು, ಬೆರಳೆಣಿಕೆಯಷ್ಟು ಕುಟುಂಬಗಳು ಅನ್ಯಧರ್ಮಿಯರು, ಉಳಿದವರೆಲ್ಲಾ ಹಿಂದುಗಳೇ ಇರುವ ಟೌನ್. 1975ರ ನೆನಪಿನ ಲಕೋಟೆಯನ್ನು ತೆರೆದು ಸುಂದರ ಬಾಲ್ಯದ ಬದುಕು ಹೇಗಿತ್ತು ಎಂಬುದರ ಜೀವನಚಿತ್ರ. ಆಗಿನ್ನೂ ಮನೆಯ ನಾಡಂಚಿನ ಮೇಲೆ ಏರಿಯಲ್/ಆಂಟೇನಾ ಕಟ್ಟಿ ದೊಡ್ಡ ಗಾತ್ರದ ರೇಡಿಯೋ ಕೇಳುವ ಕಾಲವಾಗಿತ್ತು. ದೂರದರ್ಶನವು ಇನ್ನೂ ಹುಟ್ಟಿರಲಿಲ್ಲ, ತಂತ್ರಜ್ಞಾನ ಈಗಿನಂತೆ ಬೆಳೆದಿರಲಿಲ್ಲ, ರಾತ್ರಿ ಮಿಣುಗುಟ್ಟುವ ವಿದ್ಯುತ್ ದೀಪಗಳು ಬೆಳಗುತ್ತಿದ್ದರೂ ಕಡಿಮೆ ವೋಲ್ಟೇಜ್ ಕಾರಣ ರಸ್ತೆಗಳು ಮಬ್ಬಾಗಿ ಕಾಣುತ್ತಿದ್ದವು. ಇದರ ಹೊರತಾಗಿ ಯಾವೊಂದು ಮೂಲಸೌಲಭ್ಯಗಳು ಇರಲಿಲ್ಲ, ಕಾವೇರಿ ನದಿ ಕೇವಲ ಎರಡೂವರೆ ಕಿಮೀ, ಆದರೂ ಕುಡಿಯುವ ನೀರಿಗೆ ತೆರೆದ ಬಾವಿಗಳು ಹಾಗೂ ಕೆಂದಾವರೆಗಳು ತುಂಬಿದ್ದ ಊರಮುಂದಿನ ಕೆರೆಯೇ ಆಶ್ರಯವಾಗಿತ್ತು.

ನಾವು ವಾಸ ಇದ್ದದ್ದು ಐದು ಕುಟುಂಬಗಳಿರುವ ಒಂದು ನಾಡಂಚಿನ ತೊಟ್ಟಿ ಮನೆ, ಇಪ್ಪತ್ತೈದಕ್ಕಿಂತಲೂ ಹೆಚ್ಚು ಜನರಿದ್ದ ಮನೆ. ಆ ಮನೆಗೆ ವಿದ್ಯುತ್ ದೀಪಗಳಿಲ್ಲ, ಶೌಚಾಲಯಗಳಿರಲಿಲ್ಲ, ಸಗಣಿಯಿಂದ ಸಾರಿಸುತ್ತಿದ್ದ ನೆಲ, ಕನಿಷ್ಟ ಅನುಕೂಲತೆಗಳೂ ಇಲ್ಲದ ಬಡಕುಟುಂಬಗಳೇ ಇದ್ದ ಮನೆ, ಊರು ತುಂಬಾ ಇಂತಹ ಮನೆಗಳೇ ಇದ್ದವು. ಓದುಬರಹ ಏನೆಂದು ಯಾರಿಗೂ ಗೊತ್ತಿರಲಿಲ್ಲ. ವಠಾರದ ಮಕ್ಕಳಲ್ಲಿ ನಾನೊಬ್ಬನೇ ಸರ್ಕಾರಿ ಕನ್ನಡ ಶಾಲೆಗೆ ಹೋಗುತ್ತಿದ್ದವನು, ಆಗ ಎಲ್ಲಿದ್ದವು ಇಂಗ್ಲೀಷ್ ಕಾನ್ವೆಂಟ್‌ಗಳು.

ಇನ್ನು ನಮ್ಮ ಬೀದಿಗೆ ಬಂದರೆ ಅದಕ್ಕೊಂದು ವಿಶೇಷ ವಿದೆ, ಊರಿನ ಎಲ್ಲಾ ಬೀದಿಗಳಿಗೆ ಒಂದೊಂದೇ ಹೆಸರಿದ್ದರೆ ನಾವಿದ್ದ ಬೀದಿಗೆ ಆರು ಹೆಸರುಗಳಿದ್ದವು!, ಯಾವಂತೀರಾ?, ಝಾನ್ಸಿ ಲಕ್ಷ್ಮೀಬಾಯಿ ರಸ್ತೆ, ಬಣಜಿಗರ ಬೀದಿ, ಕರಿ ಕಲ್ ಬೀದಿ, ಒಂದೂವರೆ ಆಣಿ ಗಲ್ಲಿ, ಮಸೀದಿ ಬೀದಿ ಮತ್ತು ಸಾಬ್ರು ಬೀದಿ. ಇವುಗಳಲ್ಲಿ ಯಾವ ಹೆಸರಿಂದ ಬೇಕಾದರೂ ನಮ್ಮ ರಸ್ತೆಯನ್ನು ಕರೆಯಬಹುದಿತ್ತು.

ಮೊದಲ ಹೆಸರು ಗ್ರಾಮ ಪಂಚಾಯಿತಿಯ ದಾಖಲೆಯ ಪ್ರಕಾರ ಇಟ್ಟಿರುವ ಹೆಸರು, ಎರಡನೆಯದು ಆ ಬೀದಿಯಲ್ಲಿ ಹೆಚ್ಚು ಬಣಜಿಗರೇ ವಾಸ ಇರುವುದರಿಂದ ಕರೆಯುವ ಹೆಸರು, ಮೂರನೆಯದು ಹಿಂದೆ ಮಣ್ಣಿನ ರಸ್ತೆಗಳಾಗಿದ್ದು ಬೀದಿ ತುಂಬ ಕಲ್ಲುಗಳೇ ಇದ್ದದ್ದರಿಂದ ಕರೆಯುತ್ತಿದ್ದ ಹೆಸರು, ನಾಲ್ಕನೆಯದು ಕಿರಿದಾದ ರಸ್ತೆ ಆಗಿದ್ದರಿಂದ, ಐದನೆಯದು ಮಸೀದಿ ಇರುವುದರಿಂದ ಹಾಗೂ ಆರನೆಯದು ನಾಲ್ಕು ಮುಸ್ಲಿಂ ಕುಟುಂಬಗಳ ಮನೆಗಳಿದ್ದ ಕಾರಣ. ನಮ್ಮ ಮನೆಯ ಪಕ್ಕದಲ್ಲೇ ಎರಡು ಕುಟುಂಬಗಳಿದ್ದವು.

ಅಲ್ಲಿದ್ದ ಎಲ್ಲಾ ಮುಸ್ಲಿಂ ಬಾಂಧವರು ಮನೆಯಲ್ಲಿ ತಮ್ಮ ಭಾಷೆ ಉರ್ದು ಮಾತನಾಡುತ್ತಿದ್ದರು, ಹೊರಗೆ ಅಪ್ಪಟ ಕನ್ನಡಿಗರಂತೆಯೇ ಕನ್ನಡವನ್ನು ಸ್ವಚ್ಛವಾಗಿ ನಮ್ಮೊಂದಿಗೆ ಮಾತನಾಡುತ್ತಿದ್ದರು ಹಾಗೂ ಉಡುಗೆ-ತೊಡುಗೆಗಳಲ್ಲೂ ವ್ಯತ್ಯಾಸ ಇರಲಿಲ್ಲ. ಪಕ್ಕದ ಬಾಬು ಸಾಬ್‌ರವರು ವ್ಯವಸಾಯದ ಜೊತೆಗೆ ಬಟ್ಟೆ ಅಂಗಡಿ ಇಟ್ಟುಕೊಂಡಿದ್ದರು. ಹೈಸ್ಕೂಲ್‌ವರೆಗೂ ನಾನು ಹಾಕಿಕೊಂಡಿರುವ ಬಟ್ಟೆಗಳೆಲ್ಲವೂ ಇವರ ಅಂಗಡಿಯಿಂದಲೇ ಕೊಂಡದ್ದು. ಹಬ್ಬ ಹರಿದಿನಗಳಲ್ಲಿ ರಾಶಿ-ರಾಶಿ ಬಟ್ಟೆ ತರಿಸುತ್ತಿದ್ದರು ಪಟ್ಟಣದ ಅಂಗಡಿಗಳಲ್ಲಿ ಇರುವಂತೆ ಗ್ರಾಹಕರು ತುಂಬಿರುತ್ತಿದ್ದರು, ಇವರ ಪರೋಪಕಾರಿ ಗುಣವೆಂದರೆ ಬಟ್ಟೆಗಳನ್ನು ಸಾಲ ಕೊಡುವುದು, ಸಾಲದ ಲೆಕ್ಕವನ್ನು ದಪ್ಪನೆಯ ಉದ್ದದ ಅಕೌಂಟ್ ಪುಸ್ತಕದಲ್ಲಿ ಬರೆದುಕೊಳ್ಳುತ್ತಿದ್ದರು, ಸಾಲ ಪಡೆದವರು ಕಂತುಗಳಲ್ಲಿ ಕಟ್ಟುತ್ತಿದ್ದಂತೆ ಕಳೆದುಕೊಳ್ಳುತ್ತಿದ್ದರು.

ಸಾಬ್ರು ಬೀದಿಯಲ್ಲಿ ಇರುವಾಗ ಅವರ ಹೈಕಳು ನಮ್ಮ ಗೆಳೆಯರು ಆಗಿರಲೇಬೇಕಲ್ಲವೇ?, ಬರೋಬರಿ ನಾಲ್ಕು ಜನ ನನ್ನ ವಾರಿಗೆಯವರು ಮತ್ತು ಒಂದೇ ತರಗತಿಯಲ್ಲಿ ಓದುತ್ತಿದ್ದವರು. ಸುಳ್ಳೆನಿಸಬಹುದು, ಖಂಡಿತ ನಿಜ ಅಯೂಬ್‌ಖಾನ್, ಚಾಂದ್ ಪಾಷಾ, ಮಹಮ್ಮದ್ ಪಾಷಾ, ಷರೀಫ್ ಅವರುಗಳೇ ನನ್ನ ಗೆಳೆಯರು. ನೆರೆಹೊರೆ ಮತ್ತು ಕ್ಲಾಸ್‌ಮೇಟ್ಸ್ ಆಗಿದ್ದರಿಂದ ದಿನದ ಹೆಚ್ಚು ಸಮಯ ಇವರೊಂದಿಗೆ ಕಳೆಯುತ್ತಿದ್ದೆ. ಚಿನ್ನಿ ದಾಂಡು, ಗೋಲಿ, ಸೂರ್‌ಚೆಂಡು, ಕಳ್ಳಪೊಲೀಸ್ ಮುಂತಾದ ಆಟಗಳನ್ನು ಆಡುತ್ತಿದ್ದೆವು. ಅವರುಗಳಲ್ಲಿ ಆತ್ಮೀಯನಾಗಿದ್ದವನು ಬಾಬುಸಾಹೇಬರ ಮಗ ಅಯೂಬ್‌ಖಾನ್, ಎಳೆಸುತನದ ಬುದ್ದಿಯಿಂದಾಗಿ ಇವನಿಗೆ ರಕ್ತ ಚಿಮ್ಮುವಂತೆ ಕಲ್ಲಲ್ಲಿ ಹೊಡೆದು ಬಚ್ಚಿಟ್ಟುಕೊಂಡ ಪ್ರಸಂಗವೂ ಇದೆಯಾದರೂ ಮತ್ತೇ ಒಂದಾಗಿ ಜೀವಿಸಿದ್ದೇವೆ. ವಿಧಿಯಾಟ ನಾಲ್ವರಲ್ಲಿ ಇಬ್ಬರು ತಮ್ಮ ಆಟ ಮುಗಿಸಿ ಇಹಲೋಕ ತ್ಯಜಿಸಿದ್ದಾರೆ.

ಪ್ರಾಥಮಿಕ ಶಾಲೆಯಲ್ಲಿ ಇರುವಾಗಲೇ ಕಥೆ-ಕವನಗಳನ್ನು ಬರೆಯುವ ಆಸಕ್ತಿ ನನಗೆ, ಬರೆಯುವುದಕ್ಕೆ ಖಾಲಿ ಕಾಗದ ಬೇಕಲ್ಲ, ಕೊಳ್ಳಲು ಹಣ.., ನನ್ನ ಗೆಳೆಯ ಅಯೂಬ್ ಇದ್ದನಲ್ಲ, ಅವರ ಬಟ್ಟೆ ಅಂಗಡಿಯ ದೊಡ್ಡ ಲೆಕ್ಕದ ಪುಸ್ತಕದ ಹಾಳೆಗಳನ್ನು ಕೇಳಿದಾಗಲೆಲ್ಲಾ ಅಪ್ಪನಿಗೆ ಕಾಣದಂತೆ ಹರಿದು ತಂದು ಕೊಡುತ್ತಿದ್ದ, ಮನಸ್ಸಿಗೆ ಬಂದಿದ್ದನ್ನು ಬರೆದು ಮುಗಿಸಿ ಮತ್ತೇ ಕೇಳುವುದು, ಮತ್ತೇ ತಂದುಕೊಡುವುದು ನಡೆಯುತ್ತಲಿತ್ತು. ಒಮ್ಮೆ ಅವರಪ್ಪನಿಗೆ ಗೊತ್ತಾಗಿ ಇಬ್ಬರಿಗೂ ಶಿಕ್ಷೆ ಆಯಿತು. ಅಲ್ಲಿಗೆ ನನ್ನ ಬರವಣಿಗೆ ಬಹಳ ವರ್ಷ ಗಳವರೆಗೂ ನಿಂತಿತು. ಓದಿ ನೌಕರಿಗೆ ಸೇರಿದ ನಂತರ ಹವ್ಯಾಸ ಮತ್ತೇ ಪ್ರಾರಂಭವಾಯಿತು.

ನನ್ನ ಅಜ್ಜಿ ಮನೆಯ ಮಣ್ಣಿನ ಗೋಡೆಗೆ ಹೊಂದಿಕೊಂಡಂತೆ ಮಸೀದಿ, ಅಲ್ಲಿಯೇ ಉರ್ದು ಶಾಲೆ ನಡೆಯುತ್ತಿತ್ತು ಅದಕ್ಕೊಬ್ಬರು ಟೀಚರ್ ಮೈಸೂರಿನಿಂದ ಬಂದಿದ್ದರು. ಕನ್ನಡವನ್ನು ಸ್ವಚ್ಛವಾಗಿ ಮಾತನಾಡಲು ಬರದಿದ್ದ, ವಯಸ್ಸು ಮುವತ್ತು ದಾಟಿರದ ಮೇಡಂ, ಊರಿನಲ್ಲೇ ವಾಸವಿದ್ದರು. ಎಂದೂ ಮರೆಯಲಾಗದ ನಮ್ಮ ಮೇಡಂ, ಎಲ್ಲಿ, ಹೇಗೆ ಇದ್ದಾರೆ ಅಥವಾ ಇಲ್ಲವೋ ತಿಳಿಯದು, ಇವರು ನನಗೆ ಮತ್ತು ಅಯೂಬ್‌ಖಾನ್ ಇಬ್ಬರಿಗೂ ಹಣ ಪಡೆಯದೆ ಇಂಗ್ಲೀಷ್ ಹೇಳಿಕೊಡುತ್ತಿದ್ದರು. ಅವರು ಬಳಸುತ್ತಿದ್ದ ಕನ್ನಡ ಪದಗಳು ನಮಗೋ ಕೆಟ್ಟ ಪದಗಳಾಗಿ ಕೇಳಿಸಿ ತಡೆಯಲಾರದೆ ನಗುತ್ತಿದ್ದೆವು. ಎಬಿಸಿಡಿ ಕಲಿಸಿದ ಗುರು ತುಂಬಾ ಒಳ್ಳೆಯವರು. ಮತ್ತೇ ಸಿಗಲೇ ಇಲ್ಲ, ಅವರ ನೆನಪು ಮಾತ್ರ ಅಂದಿನ ಯುವತಿಯ ರೂಪದಲ್ಲಿಯೇ ಮನಸ್ಸಿನೊಳಗೆ ಕುಳಿತಿದೆ!.

ರಂಜಾನ್ ಬಂತೆಂದರೆ ಕೋಳಿ ಕೂಗುವ ಮೊದಲೇ ಅಲ್ಲಾನಿಗಾಗಿ ಧ್ವನಿವರ್ಧಕಗಳ ಮೂಲಕ ಏರು ಧ್ವನಿಯಲ್ಲಿ ಇಡೀ ಊರಿಗೇ ಕೇಳಿಸುವಂತೆ ನಮಾಜ್ ಕೂಗುತ್ತಿದ್ದರು. ಆ ಒಂದು ತಿಂಗಳು ಹಾಗೂ ಪ್ರತೀ ಶುಕ್ರವಾರ ನಮ್ಮೂರಿನ ರೈತಾಪಿ ಜನರಿಗೆ ಅಲಾರಾಂ ಆಗಿತ್ತು. ನಮಾಜ್ ಕೂಗ್ತಾವರೆ ಎದ್ದೇಳಿ ದನಕರುಗಳನ್ನು ಆಚೆಗೆ ಕಟ್ಟಿ, ಸಗಣಿ ಬಾಚಿ, ಹುಲ್ಲು ತಂದು ಹಾಕಿ ಎಂದು ಮಲಗಿದ್ದ ಮಕ್ಕಳನ್ನು ಏಳಿಸುತ್ತಿದ್ದರು, ಧ್ವನಿವರ್ಧಕದ ಶಬ್ದ ನಮಗೆ ಕಿರಿಕಿರಿ ಅನಿಸಲೇ ಇಲ್ಲ.

ನನ್ನ ಗೆಳೆಯರೊಡನೆ ಬೆರೆಯುವುದಕ್ಕೆ, ಅವರ ಮನೆಗೆ ಹೋಗಲು, ಅವರು ನಮ್ಮ ಮನೆಗೆ ಬರುವುದಕ್ಕೆ ಕಟ್ಟುಪಾಡುಗಳು ಇರಲಿಲ್ಲ. ಹಬ್ಬಗಳಂದು ಖರ್ಜೂರ, ಬಾದಾಮಿ ಕಲ್ಲುಸಕ್ಕರೆ ತಂದುಕೊಡುತ್ತಿದ್ದ ಮಿತ್ರರು, ನಮ್ಮ ಹಬ್ಬದ ಒಬ್ಬಟ್ಟು, ಪಿತೃಪಕ್ಷದ ವಡೆ-ಚಕ್ಕುಲಿ-ಕೋಡುಬಳೆ-ಚಿಕ್ಕಿನುಂಡೆ ಅವರಿಗೆ ಕೊಡುತ್ತಿರುವಾಗ ನಮಗೆ ಜಾತಿಧರ್ಮಗಳ ಸಂಕೋಲೆಗಳು ಇರಲಿಲ್ಲ. ನಮ್ಮೂರಿನ ದೊಡ್ಡವರು ಸಹ ಹಾಗೆಯೇ ಇದ್ದರು. ಶಿವರಾತ್ರಿಯಂದು ಮಧ್ಯರಾತ್ರಿವರೆಗೂ ನಮ್ಮ ಜೊತೆ ಜಾಗರಣೆ ಇರುತ್ತಿದ್ದ ಗೆಳೆಯರು, ಪ್ರತೀ ಶಿವರಾತ್ರಿ ಹಬ್ಬದಂದು ಇವರೆಲ್ಲಾ ಕಾಡುತ್ತಾರೆ.

ಸುಮಾರು ಎಪ್ಪತ್ತೈದು ವರ್ಷಗಳ ಕಾಲ ನಮ್ಮೂರಿನ ಅಂಚೆ ಅಣ್ಣನಾಗಿದ್ದವರು ಸಾಬ್‌ಜಾನ್. ನಂತರ ಮಗ ನನ್ನ ಕ್ಲಾಸ್‌ಮೇಟ್ ಪಾಷಾ. ಕೈಯಲ್ಲಿ ಒಂದಷ್ಟು ಕಾಗದಪತ್ರಗಳು, ಬ್ಯಾಗಿನ ತುಂಬಾ ಪತ್ರಗಳು, ಖಾಕಿ ಡ್ರೆಸ್, ತಲೆಯಲ್ಲಿ ಟೋಪಿ, ಧರಿಸಿ ಸರಿಯಾದ ಸಮಯಕ್ಕೆ ಕಾಲು ನಡಿಗೆಯಲ್ಲೇ ಕಾಗದ ಬಂದಿರುವ ಮನೆಗಳ ಮುಂದೆ ಹಾಜರ್. ಇವರಿಬ್ಬರಿಗೂ ಊರಿನ ಎಲ್ಲಾ ಮನೆಗಳು ಚಿರಪರಿಚಿತ. ಮುಸ್ಲಿಂರಿಗೇ ಮೀಸಲಿರುವ ಕುಲಕಸುಬು ಇರಬಹುದೆಂದು ಬಾಲ್ಯದಲ್ಲಿ ಅಂದುಕೊಂಡಿದ್ದೆ. ದನಗಳಿಗೆ ಲಾಳ ಕಟ್ಟುತ್ತಿದ್ದವರು ಲಾಳ ಸಾಹೇಬರು (ಹೆಸರು ಗೊತ್ತಿಲ್ಲ). ಅಂದು ದಿನಗಳಲ್ಲಿ ಮಟನ್ ಮಾರುತ್ತಿದ್ದವರೂ ಮುಸ್ಲಿಂ ಅಣ್ಣನೆ. ಎಪ್ಪತ್ತೈದು ಪೈಸೆಗೆ ನಾನೇ ಹೋಗಿ ಪಾವು, ಅರಪಾವು (ಗ್ರಾಂಗಳಲ್ಲಿ ಕೇಳಿದ್ದಿಲ್ಲ) ಮಟನ್ ತಂದಿದ್ದೇನೆ. ಅಂದು ಧರ್ಮಗಳು ಬೇರೆಯೇ ಆಗಿದ್ದರೂ ಭೇದ ಇರಲಿಲ್ಲ, ಸಹಬಾಳ್ವೆ ಇತ್ತು. ಸಾಹೇಬ್ರೆ ಎಂದು ಕರೆದರೆ ಅವರು ಶೆಟ್ರೇ.., ಗೌಡ್ರೇ.. ಎಂಬುದಾಗಿ ಕರೆಯುತ್ತಿದ್ದರು. ಸಣ್ಣಪುಟ್ಟ ವ್ಯವಹಾರಿಕ ಜಗಳ ಸಾಮಾನ್ಯ ಆದರೆ ಎಂದಿಗೂ ಜಾತಿ-ಧರ್ಮಗಳನ್ನು ನಿಂದಿಸುವ ಜಗಳಗಳು ನಡೆದ ಉದಾಹರಣೆಗಳಿಲ್ಲ.

ಕುವೆಂಪುರವರು ನೀಡಿದ ಸಂದೇಶ; ಮತ ಮನುಜಮತವಾಗಬೇಕು, ಮನುಷ್ಯ ವಿಶ್ವಮಾನವನಾಗಬೇಕು. ಮತಗಳು ಗುಂಪು ಕಟ್ಟುವ ವಿಷಯ ಆಗಬಾರದು. ಯಾರೂ ಯಾವ ಒಂದು ಮತಕ್ಕೆ ಸೇರದೆ, ತನ್ನದೇ ಮತಕ್ಕೆ ಸೇರಬೇಕು. ಜಗತ್ತಿನಲ್ಲಿ ಇರುವಷ್ಟೂ ವ್ಯಕ್ತಿಗಳಿಗೂ ಅಷ್ಟೂ ಮತಗಳಾಗಬೇಕು. ವಿಶ್ವಪಥ, ಮನುಜಮತ ಎನ್ನುವುದು ಪ್ರಚಲಿತವಲ್ಲದ ಹಾಗೂ ಗೊತ್ತಿಲ್ಲದ ವಯಸ್ಸಿನಲ್ಲೂ ನಾವು ಮತ್ತು ನಮ್ಮೂರಿನ ಜನರು ಪಾಲಿಸಿದ್ದೇವೆ ಹಾಗೂ ಮುಂದುವರಿಸಿಕೊಂಡು ಬಂದಿರುವುದು ನಮ್ಮೂರಿನ ಹೆಮ್ಮೆಯ ಸಂಗತಿ.

ಗಾಂಧೀಜಿ, ಕುವೆಂಪು, ನಿಸಾರ್ ಅಹಮ್ಮದ್, ಅಬ್ದುಲ್ ಕಲಾಂ ಮುಂತಾದವರು ಮನುಜಮತವಾಗಿ ವಿಶ್ವಪಥದಲ್ಲಿ ನಡೆದು ಜಾತಿಧರ್ಮಗಳನ್ನು ಮೀರಿ ಸಮಾಜಕ್ಕೆ ಮಾದರಿಯಾದರು.

ಬ್ರಿಟಿಷ್ ಆಡಳಿತದಲ್ಲಿ Divide and Rule Policy ತಂತ್ರಗಾರಿಕೆಯಿಂದ ಜಾತಿ, ಧರ್ಮಗಳ ನಡುವೆ ವೈಮನಸ್ಸುಗಳಾಗಿ ಬೇರ್ಪಡುವ ಹಾಗೆ ವಿಷಬೀಜಗಳನ್ನು ಬಿತ್ತುವುದು ನಡೆದಿತ್ತು. ರಾಜಕೀಯದಲ್ಲಿ ಅದೇ ತಂತ್ರಗಾರಿಕೆ ಈಗಲೂ ಮುಂದುವರಿದಿದೆ.

ಚುನಾವಣೆಗಳಲ್ಲಿ ಮನುಜಮತವು ಜಾತಿ-ಧರ್ಮಗಳ ಮತವಾಗಿ ಮನುಷ್ಯರನ್ನು ವಿಂಗಡಿಸಿ, ಮೀಸಲಾತಿಯ ಸುಳಿಗೆ ತಳ್ಳಿ ಮತಗಳನ್ನು ಹಾಕಿಸಿಕೊಂಡು ಗೆದ್ದು ಗದ್ದುಗೆ ಏರಿ, ಅದೇ ಜಾತಿ-ಧರ್ಮಗಳ ಹೆಸರಲ್ಲಿ ಸ್ಥಾಪಿತವಾಗುವ ಆಡಳಿತ ವ್ಯವಸ್ಥೆಯು ಮನುಷ್ಯತ್ವದ ದಾರಿಯ ದಿಕ್ಕು ತಪ್ಪಿಸುತ್ತಿದೆ ಎಂದು ನಿಮಗೆ ಅನಿಸುತ್ತಿಲ್ಲವೇ?.

ಸಂತ ತುಳಸೀದಾಸರ ಶ್ರೇಷ್ಠರಚನೆ ಶ್ರೀ ಹನುಮಾನ್ ಚಾಲೀಸಾ



ಇಂದು (ಶನಿವಾರ) ಬೆಳಿಗ್ಗೆ 9 ಗಂಟೆಗೆ ಮೈಸೂರಿನ ಮಹಾರಾಜ ಕಾಲೇಜಿನ ಮೈದಾನದಲ್ಲಿ ದತ್ತಪೀಠದ ಆಶ್ರಯದಲ್ಲಿ ಶ್ರೀ ಹನುಮಾನ್ ಚಾಲೀಸಾ ಸಾಮೂಹಿಕ ಪಾರಾಯಣ, ಸಂಜೆ 5 ಗಂಟೆಗೆ ಗಿರಿಜಾ ಕಲ್ಯಾಣ ಹಾಗೂ ಸ್ವಾಮೀಜಿ ಅವರಿಂದ ನಾಮ ಸಂಕೀರ್ತನೆ ಅಂಗವಾಗಿ ವಿಶೇಷ ಲೇಖನ.



ನಂ ಶ್ರೀಕಂಠ ಕುಮಾರ್
ಮೈಸೂರು
9481067333

ರಾಮನ ಅನನ್ಯಭಕ್ತರಾದ ತುಳಸೀದಾಸರು ಸಂಸ್ಕೃತದ ರಾಮಾಯಣವನ್ನು ಜನಸಾಮಾನ್ಯರ ಭಾಷೆಯಾದ ಅವಧೀ ಭಾಷೆಯಲ್ಲಿ (ಅಯೋಧ್ಯೆಯ ಸುತ್ತಮುತ್ತ ಪ್ರಚಲಿತದಲ್ಲಿರುವ ಹಿಂದಿ ಭಾಷೆಯ ಒಂದು ರೂಪ) ರಚಿಸಿ ರಾಮನಾಮದ ಮಹಿಮೆಯನ್ನು ಪ್ರಚುರಪಡಿಸಿ ಭಕ್ತಿಯ ಮಾರ್ಗವನ್ನು ಸುಗಮಗೊಳಿಸಿದರು. ತಮ್ಮ ರಚನೆಗಳ ಮೂಲಕ ಭಾರತೀಯ ಸಂಸ್ಕೃತಿಯ ಆದರ್ಶವನ್ನು ಜನಸಾಮಾನ್ಯರ ಮುಂದಿಟ್ಟು ಸದಾಚಾರ ಹಾಗೂ ಸಾಮರಸ್ಯದ ಜೀವನ ನಡೆಸುವ ಪ್ರೇರಣೆ ನೀಡಿದರು.

ಹುಟ್ಟುವಾಗಲೇ ರಾಮನಾಮ ಜಪಿಸಿದ ಸಂತ ತುಳಸಿದಾಸರು, ಅತೀವವಾಗಿ ಪ್ರೀತಿಸುವ ಪತ್ನಿಯ ಮುಜುಗರದ ಮಾತಿಗೆ ಬೇಸತ್ತು ಲೌಕಿಕವಾಗಿದ್ದ ಅವರ ಮನಸ್ಸು ಪ್ರಾಪಂಚಿಕತೆಯಿಂದ ವಿಮುಖವಾಗಿ ಭಗವಂತನಡೆಗೆ ತಿರುಗಲು ಕಾರಣವಾಯಿತು. ಹಾಗಾಗಿ ತಮ್ಮ ಉಳಿದ ಜೀವನವನ್ನು ಅವರು ಪೂರ್ಣವಾಗಿ ರಾಮಧ್ಯಾನದಲ್ಲಿ ಕಳೆದರು. ತುಳಸೀದಾಸರಿಗೆ ತಮ್ಮ ಆರಾಧ್ಯದೈವ ಶ್ರೀರಾಮಲಕ್ಷ್ಮಣರ ದರ್ಶನ ಲಭಿಸಿತ್ತು ಎಂದು ಹೇಳಲಾಗುತ್ತದೆ. ತುಳಸೀದಾಸರು ಭಗವತ್ಪ್ರೇರಣೆಯಿಂದ **ಶ್ರೀರಾಮಚರಿತಮಾನಸ**ವನ್ನು ರಚಿಸಿದರು. ವಿನಯ ಪತ್ರಿಕಾ, ದೋಹಾವಳಿ, ರಾಮಲಲಾ ನಹಛೂ, ಪಾರ್ವತಿ ಮಂಗಳ ಮುಂತಾದವುಗಳ ಪ್ರಮುಖ ರಚನೆಗಳು. ಆಧ್ಯಾತ್ಮ, ಭಕ್ತಿ ಹಾಗೂ ನೀತಿಯ ತ್ರಿವೇಣಿ ಸಂಗಮ ಅವರ ರಚನೆಗಳಲ್ಲಿ ಕಂಡು ಬರುತ್ತದೆ. ಅವರ ದ್ವಿಪದಿಗಳು ಬಹಳ ಜನಪ್ರಿಯ. ಹಾಗೆಯೇ ಜನರಿಗೆ ಸನ್ಮಾರ್ಗದಲ್ಲಿ ನಡೆಯುವ, ಸಂಕಷ್ಟದ ಸಮಯದಲ್ಲಿ ಕುಗ್ಗದೇ ಜೀವನವನ್ನು ನಡೆಸುವ ಪ್ರೇರಣೆಯನ್ನು ನೀಡಿದ್ದಾರೆ. ಹೀಗೆ ತುಳಸೀದಾಸರು ತಮ್ಮ ರಚನೆಗಳ ಮೂಲಕ ಭಕ್ತಿಯ ಮಹತ್ವವನ್ನು, ಸದಾಚಾರದ ಶ್ರೇಷ್ಠತೆಯನ್ನು ಎತ್ತಿಹಿಡಿಯುತ್ತಾ ಮಾರ್ಗದರ್ಶನ ಮಾಡಿದ್ದಾರೆ. ಜನಸಾಮಾನ್ಯರಿಗೆ ಸರಳ ಭಾಷೆಯಲ್ಲಿ ರಾಮಾಯಣವನ್ನು ತಿಳಿಯಪಡಿಸಿ ತನ್ಮೂಲಕ ಆದರ್ಶ ಸಮಾಜ ಹಾಗೂ ಸಂಬಂಧಗಳ ಕಲ್ಪನೆಯನ್ನು ಕಟ್ಟಿಕೊಟ್ಟಿದ್ದಾರೆ. ಅವರು ರಚಿಸಿದ ರಾಮಾಯಣವು ಜಗದ್ವಿಖ್ಯಾತವಾಗಿದೆ.

ಶ್ರೀರಾಮಚಂದ್ರ ಪ್ರಭುವಿನ ಅನನ್ಯ ಭಕ್ತರಾದ ಚಿರಂಜೀವಿ ಹನುಮಂತನ ನೇರದರ್ಶನ ಪಡೆದ ಗೋಸ್ವಾಮಿ ತುಳಸೀದಾಸರು ಹನುಮನ ಕುರಿತು ಅಪೂರ್ವ ರೀತಿಯಲ್ಲಿ ವರ್ಣಿಸಿ ಶ್ರೀ ಹನುಮಾನ್ ಚಾಲೀಸಾ ರಚಿಸಿ ಅಪಾರ ಭಕ್ತಿಯನ್ನು ತೋರಿದ್ದಾರೆ. ಹನುಮಂತ ಜ್ಞಾನ ಹಾಗೂ ಗುಣಗಳ ಸಾಗರ. ಆತ ಮೂರು ಲೋಕಗಳಿಗೂ ಬೆಳಕಾದವನು ರಾಮದೂತನಾದ ಹನುಮ ಅನುಪಮ ಬಲಶಾಲಿ. ಅಂಜನೀಪುತ್ರನಾದ ಅವನಿಗೆ ಪವನಸುತನೆಂದು ಹೆಸರು. ಆತ ಮಹಾವೀರ, ಪರಾಕ್ರಮಿ, ಬಜರಂಗಿ, ದುರ್ಮತಿಯನ್ನು ನಿವಾರಿಸಿ ಸುಮತಿಯನ್ನು ನೀಡುವವನು. ಸುವರ್ಣ ವರ್ಣದವನಾದ ಆತ ಸುಂದರವೇಷ. ಆತನ ಕಿವಿಗಳಲ್ಲಿ ಕುಂಡಲಗಳು ಶೋಭಿಸುತ್ತಿವೆ. ಆತನ ಕೇಶ ಗುಂಗುರು ಗುಂಗುರಾಗಿದೆ. ಆತನ ಹಸ್ತದಲ್ಲಿ ವಜ್ರ (ಗದೆ) ಹಾಗೂ ಧ್ವಜ ವಿರಾಜಮಾನವಾಗಿದೆ. ಹೆಗಲಿನಲ್ಲಿ ಮೌಂಜಿಯ ಜನಿವಾರ ಶೋಭಿಸುತ್ತಿದೆ. ಶಂಕರನ ಸುಪುತ್ರನಾದ ಆತ ಕೇಸರೀನಂದನ. ಆತ ತನ್ನ ತೇಜಸ್ಸು ಪ್ರತಾಪಗಳಿಂದ ಜಗದ್ವಂದ್ಯನಾಗಿದ್ದಾನೆ.



ವಿದ್ಯಾವಂತನಾದ ಹನುಮಂತ ಸುಗುಣಿ, ಅತ್ಯಂತ ಚತುರ. ರಾಮ ಕಾರ್ಯವನ್ನು ಮಾಡಲು ಆತ ಸದಾ ತತ್ಪರ. ಶ್ರೀರಾಮಚಂದ್ರ ಪ್ರಭುವಿನ ಕಥೆಯನ್ನು ಕೇಳುವುದು ಆತನಿಗೆ ಅತ್ಯಂತ ಇಷ್ಟ, ಆತ ರಾಮ, ಲಕ್ಷ್ಮಣ ಹಾಗೂ ಸೀತೆಯ ಮನದಲ್ಲಿ ನೆಲೆಸಿರುವವನು. ಸೂಕ್ಷ್ಮರೂಪವನ್ನು ಧರಿಸಿ ಸೀತೆಗೆ ದರ್ಶನ ನೀಡಿದವನು. ವಿಕಟವಾದ ರೂಪವನ್ನು ಧರಿಸಿ ಲಂಕೆಯನ್ನು ಸುಟ್ಟವನು. ಭೀಮರೂಪಧರಿಸಿ ಅಸುರರನ್ನು ಸಂಹರಿಸಿದವನು. ರಾಮಚಂದ್ರ ಪ್ರಭುವಿನ ಕಾರ್ಯವನ್ನು ನೆರವೇರಿಸಿದವನು. ಸಂಜೀವಿನಿಯನ್ನು ತಂದು ಲಕ್ಷ್ಮಣನನ್ನು ಬದುಕಿಸಿದವನು.

ಇದರಿಂದ ಶ್ರೀರಾಮಚಂದ್ರ ಪ್ರಭುಗಳು ಹರ್ಷಿತರಾಗಿ ಆಲಿಂಗಿಸಿಕೊಂಡು ಬಹುವಾಗಿ ಗುಣಗಾನ ಮಾಡಿ, ನೀವು ನನ್ನ ಪ್ರಿಯ ಸಹೋದರನಾದ ಭರತನಿಗೆ ಸಮಾನವೆಂದು ಸಾರಿದರು. ನಿನ್ನ ಯಶೋಗಾನವನ್ನು ಸಹಸ್ರಮುಖಗಳಿಂದ ಮಾಡಬೇಕು ಎಂದು ಶ್ರೀಪತಿ ನಿನ್ನನ್ನು ಆಲಂಗಿಸಿಕೊಂಡರು. ಸನಕಾದಿ (ಸನಕ, ಸನಂದನ, ಸನತ್ಕುಮಾರ) ಬ್ರಹ್ಮಾದಿ ಮುನೀಶರು, ನಾರದ, ಶಾರದ ಸಹಿತನಾಗಿ ಶೇಷ, ಯಮ, ಕುಬೇರ ಮೊದಲಾದ ದಿಕ್ಪಾಲಕರು, ಕವಿಕೋವಿದರೂ ಕೂಡ ಹನುಮನ ಯಶೋಗಾಥೆಯನ್ನು ಬಣ್ಣಿಸಲು ಅಸಮರ್ಥರು. ಹನುಮಂತ ಸುಗ್ರೀವನಿಗೆ ಉಪಕಾರವನ್ನು ಮಾಡಿದ. ರಾಮನನ್ನು ಭೇಟಿ ಮಾಡಿಸಿ ರಾಜ್ಯ ಪದವಿಯನ್ನು ಕೊಡಿಸಿದ. ಹನುಮನ ಮಂತ್ರವನ್ನು ಒಪ್ಪಿದ ವಿಭೀಷಣ ಲಂಕೇಶ್ವರನಾದುದು ಪ್ರಪಂಚಕ್ಕೆ ತಿಳಿದ ವಿಚಾರ. ಯುಗ ಸಹಸ್ರ ಯೋಜನೆಗಳ ದೂರವಿರುವ ಸೂರ್ಯನನ್ನು ಮಧುರವಾದ ಫಲವೆಂದು ಭಾವಿಸಿ ನುಂಗಿದ ಹನುಮಂತ ಪ್ರಭು ರಾಮರ ಮುದ್ರಿಕೆಯನ್ನು ತೆಗೆದುಕೊಂಡು ಜಲಧಿಯನ್ನು ದಾಟಿದ ಆತನ ಸಾಮರ್ಥ್ಯ ಅಂತದ್ದು, ಅದರಲ್ಲಿ ಆಶ್ಚರ್ಯವೇನಿಲ್ಲ. ಜಗತ್ತಿನಲ್ಲಿ ದುರ್ಗಮವಾದ ಕಾರ್ಯಗಳೆಲ್ಲಾ ಹನುಮಂತನ ಅನುಗ್ರಹದಿಂದ ಸುಗಮವಾಗುತ್ತದೆ. ರಾಮದ್ವಾರದ ಕಾವಲುಗಾರ ಆತ, ಸರ್ವಸುಖಗಳು ಆತನ ಚರಣದಲ್ಲಿವೆ. ಹನುಮಂತ ರಕ್ಷಕನಾಗಿರುವಾಗ ಹೆದರಿಕೆಯ ಮಾತೆಲ್ಲಿ? ಹನುಮನ ತೇಜಸ್ಸಿಗೆ ಹನುಮನೇ ಸಾಟಿ. ಮೂರು ಲೋಕಗಳೂ ಆತನ ಗರ್ಜನೆಗೆ ನಡುಗುತ್ತವೆ. ಮಹಾವೀರನೆಂಬ ಹೆಸರು ಕೇಳಿದ ತಕ್ಷಣ ಭೂತಪಿಶಾಚಿಗಳು ಹತ್ತಿರಕೂಡ ಸುಳಿಯಲಾರವು. ಬಲಶಾಲಿಯಾದ ಹನುಮಂತನನ್ನು ನಿರಂತರ ಜಪಿಸುವುದರಿಂದ ಆತ ರೋಗಗಳನ್ನು ನಾಶ ಪಡಿಸಿ ಎಲ್ಲಾ ಬಗೆಯ ತೊಂದರೆಗಳನ್ನು ನಿವಾರಿಸುವನು.

ಯಾರು ಮನಃಪೂರ್ವಕವಾಗಿ ವಚನದಿಂದ ಧ್ಯಾನಿಸುವವರನ್ನು ಸಂಕಟದಿಂದ ಹನುಮಂತ ಬಿಡಿಸುತ್ತಾನೆ. ರಾಜರಾದ ರಾಮರ ಕಾರ್ಯಗಳನ್ನು ನೆರವೇರಿಸಿದವನು ಹನುಮಂತ. ಹನುಮಂತನ ಸ್ಮರಣೆಯಿಂದ ಭಕ್ತರ ಮನೋರಥಗಳು ಪೂರ್ಣವಾಗುವುವು ಅವರು ಅಮಿತವಾದ ಜೀವನ ಫಲಗಳನ್ನು ಹೊಂದುವರು. ನಾಲ್ಕೂ ಯುಗಗಳಲ್ಲಿ ಹನುಮಂತನ ಪ್ರತಾಪ ತುಂಬಿದೆ. ಆತ ಪ್ರಸಿದ್ಧವಾದ ಜಗತ್ತಿನ ಜ್ಯೋತಿ, ಮಾರ್ಗದರ್ಶಕ, ಸಾಧು ಸಂತರ ರಕ್ಷಕ. ಅಸುರನನ್ನು ವಧಿಸಿ ರಾಮನಿಗೆ ಪ್ರಿಯ ಪಾತ್ರನಾದವನು. ಹನುಮನ ಸ್ಮರಣೆ ಮಾಡುವವರು ಕಡೆಗಾಲದಲ್ಲಿ ರಘುವರನ ಪುರದಲ್ಲಿ ಜನಿಸಿ ಹರಿಭಕ್ತರೆನಿಸಿಕೊಳ್ಳುವರು.

ಬೇರೆ ದೇವತೆಗಳನ್ನು ಚಿತ್ತದಲ್ಲಿರಿಸಿಕೊಳ್ಳದೆ ಹನುಮಂತನನ್ನು ಸ್ಮರಿಸಿ ಸರ್ವಸುಖಗಳನ್ನು ಪಡೆಯಬಹುದು. ಬಲಶಾಲಿಯಾದ ಹನುಮಂತನನ್ನು ಸ್ಮರಿಸಿದವರಿಗೆ ಸಂಕಟಗಳು ದೂರವಾಗಿ ಎಲ್ಲಾ ರೀತಿಯ ನೋವುಗಳು ದೂರಾಗುತ್ತವೆ. ನೂರು ಬಾರಿ ಯಾರು ಹನುಮಾನ್ ಚಾಲೀಸಾವನ್ನು ಪಾರಾಯಣ ಮಾಡುತ್ತಾರೋ ಅವರಿಗೆ ಎಲ್ಲಾ ಬಂಧನಗಳು ಕಳಚಿ ಮಹಾಸುಖವುಂಟಾಗುತ್ತದೆ. ಹನುಮಾನ್ ಚಾಲೀಸಾವನ್ನು ಓದಿದವರಿಗೆ ಸಿದ್ಧಿ ಉಂಟಾಗುತ್ತದೆ ಎಂಬುದಕ್ಕೆ ಗೌರೀಶ ಶಿವನೇ ಸಾಕ್ಷಿ. ರಾಮನದಾಸರಾದ ಗೋಸ್ವಾಮಿ ತುಳಸೀದಾಸರು ಹನುಮಂತನನ್ನು ಎಂದೆಂದಿಗೂ ನನ್ನ ಹೃದಯದಲ್ಲಿ ನೆಲಿಸಿ ಎಂಬುದಾಗಿ ಪ್ರಾರ್ಥಿಸುತ್ತಾರೆ.

ಅಂತರರಾಷ್ಟ್ರೀಯ ಆಧ್ಯಾತ್ಮಿಕಗುರು ಶ್ರೀ ದತ್ತ ಪೀಠಾಧಿಪತಿ, ಅವಧೂತ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿರವರ ಲೋಕ ಕಲ್ಯಾಣಾರ್ಥವಾದ ಆಶಯ ಹಾಗೂ ಮಹಾಸಂಕಲ್ಪದಂತೆ ನಡೆಯಲಿರುವ ಮಹಾ ಪಾರಾಯಣದಲ್ಲಿ ಶ್ರೀ ದತ್ತ ವಿಜಯಾನಂದ ಸ್ವಾಮೀಜಿ ನೇತೃತ್ವವಹಿಸಿ ಯಾವುದೆ ಭೇದ-ಭಾವವಿಲ್ಲದೆ ಸಾವಿರಾರು ಆಸ್ತಿಕ ಭಕ್ತವೃಂದದವರಿಂದ ಏಕಕಂಠದಲ್ಲಿ ಶ್ರೀ ಹನುಮಾನ್ ಚಾಲೀಸಾ ಪಾರಾಯಣ ಮಹಾಯಜ್ಞ, ಗಿರಿಜಾಕಲ್ಯಾಣ ಹಾಗೂ ನಾಮ ಸಂಕೀರ್ತನೆಯು ನಡೆಯಲಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ವಿಮುಕ್ತಿ ಅಭಿಯಾನದ ದೂರು ಆಧರಿಸಿ 61 ಲಾಡ್ಜ್, 22 ಪಿಜಿ, 41 ಪಾರ್ಕ್‌ಗಳಲ್ಲಿ ತಪಾಸಣೆ

● ಮಾದಕ ವಸ್ತು ಸೇವಿಸಿದ್ದವರ ವಿರುದ್ಧ ಪ್ರಕರಣ ದಾಖಲು ● ಮೈಸೂರು ನಗರ ಪೊಲೀಸರ ವಿಶೇಷ ಕಾರ್ಯಾಚರಣೆ ● ವಿಮುಕ್ತಿ ಅಭಿಯಾನದಡಿ ವಾಟ್ಸಾಪ್ 8277948080 ದೂರು ಸಲ್ಲಿಕೆಗೆ ಅವಕಾಶ

ಮೈಸೂರು, ಫೆ.13(ಎಂಕೆ)– ಮೈಸೂರು ನಗರವನ್ನು ಮಾದಕ ವಸ್ತು ಮುಕ್ತ ನಗರವನ್ನಾಗಿಸುವ ನಿಟ್ಟಿನಲ್ಲಿ ನಗರ ಪೊಲೀಸ್ ವತಿಯಿಂದ ಹಮ್ಮಿಕೊಂಡಿರುವ 'ವಿಮುಕ್ತಿ' ಅಭಿಯಾನದಲ್ಲಿ ಬಂದ ದೂರುಗಳನ್ವಯ ಒಂದೇ ದಿನ 61 ಲಾಡ್ಜ್, 22 ಪಿಜಿ, 41 ಪಾರ್ಕ್ ಸೇರಿದಂತೆ ಹೊರವಲಯದ ಗೋಡೌನ್, ಒಂಟಿ ಮನೆಗಳಲ್ಲಿ ತಪಾಸಣೆ ನಡೆಸಲಾಯಿತು. ಈ ವೇಳೆ ಸಂಶಯಾಸ್ಪದ 18 ಮಂದಿಯ ತಪಾಸಣೆಯಲ್ಲಿ ಮಾದಕ ವಸ್ತು ಸೇವನೆ ಮಾಡಿರುವ ಇಬ್ಬರ ವಿರುದ್ಧ ನರಸಿಂಹರಾಜ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ವಿಮುಕ್ತಿ ಅಭಿಯಾನದ ಅಂಗವಾಗಿ ಮೈಸೂರು ನಗರದಲ್ಲೆಡೆ ವ್ಯಾಪಕ ತಪಾಸಣೆ ನಡೆಸುತ್ತಿರುವ ಪೊಲೀಸರು, ವಾಟ್ಸ್‌ಅಪ್ ಮೂಲಕ ಸಾರ್ವಜನಿಕರಿಂದ ಮಾಹಿತಿ ಪಡೆದುಕೊಳ್ಳಲು ಹಮ್ಮಿಕೊಂಡಿರುವ 'ವಿಮುಕ್ತಿ' ಅಭಿಯಾನ(8277948080)ದಲ್ಲಿ ಬರುವ ದೂರುಗಳನ್ನಾಧರಿಸಿ ತಪಾಸಣೆ ನಡೆಸಲಾಗುತ್ತಿದೆ. ಹಾಗೆಯೇ ಮಾಹಿತಿ ನೀಡುವವರ ಬಗ್ಗೆ ಗೌಪ್ಯತೆ ಕಾಪಾಡಿಕೊಂಡು ಮೈಸೂರನ್ನು ಮಾದಕ ಮುಕ್ತ ನಗರವನ್ನಾಗಿಸಲು ಕಟ್ಟುನಿಟ್ಟಿನ ಕ್ರಮಕೈಗೊಳ್ಳಲಾಗಿದೆ.



ಮೈಸೂರಿನ ಮಹಾರಾಣಿ ಮಹಿಳಾ ಪದವಿ ಪೂರ್ವ ಕಾಲೇಜಿನಲ್ಲಿ 'ವಿಮುಕ್ತಿ' ಅಭಿಯಾನ ಕುರಿತು ಮಾಹಿತಿ ನೀಡಿ, ಅಭಿಯಾನಕ್ಕೆ ಕೈ ಜೋಡಿಸುವಂತೆ ತಿಳಿಸಲಾಯಿತು.

ಶಾಲಾ–ಕಾಲೇಜುಗಳಲ್ಲಿ ಜಾಗೃತಿ: 'ವಿಮುಕ್ತಿ' ಅಭಿಯಾನದ ಅಂಗವಾಗಿ ಶಾಲಾ–ಕಾಲೇಜುಗಳಲ್ಲಿ ಮಾದಕ ವಸ್ತುಗಳಿಂದಾಗುವ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸುವ ಜೊತೆಗೆ ಶಾಲಾ–ಕಾಲೇಜು ನೋಟಿಸ್ ಬೋರ್ಡ್‌ನಲ್ಲಿ ವಾಟ್ಸ್‌ಅಪ್ ಹಾಗೂ ಸಹಾಯವಾಣಿ ನಂಬರ್ ಇರುವ 'ವಿಮುಕ್ತಿ' ಅಭಿಯಾನದ ಪೋಸ್ಟರ್‌ಗಳನ್ನು ಅಂಟಿಸಲಾಗುತ್ತಿದೆ.

ಅದರಂತೆ ಶುಕ್ರವಾರ ದೇವರಾಜ ಮೊಹಲ್ಲಾದ ಮಹಾರಾಣಿ ಮಹಿಳಾ ಪದವಿ ಪೂರ್ವ ಕಾಲೇಜು, ವಿವೇಕಾನಂದ ಪದವಿ ಕಾಲೇಜು, ಬನ್ನೂರು ರಸ್ತೆಯಲ್ಲಿರುವ ವಿದ್ಯಾವಿಕಾಸ್ ಕಾಲೇಜು ವಿದ್ಯಾರ್ಥಿಗಳ ಹಾಸ್ಟೆಲ್, ಬೃಂದಾವನ ಬಡಾವಣೆಯಲ್ಲಿರುವ ಸರ್ಕಾರಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವೈದ್ಯಕೀಯ ಮಹಾ ವಿದ್ಯಾಲಯ, ನಂದಿನಿ ಲೇಔಟ್‌ನಲ್ಲಿರುವ ದಿ.ದೇವರಾಜ ಅರಸು ಬಾಲಕರ ವಿದ್ಯಾರ್ಥಿ ನಿಲಯ, ಆಲನಹಳ್ಳಿಯಲ್ಲಿರುವ ಎಸ್.ಎನ್.ಎಸ್ ಪದವಿ ಪೂರ್ವ ಕಾಲೇಜು ನೋಟಿಸ್ ಬೋರ್ಡ್‌ನಲ್ಲಿ 'ವಿಮುಕ್ತಿ' ಅಭಿಯಾನ ಪೋಸ್ಟರ್ ಅಂಟಿಸಿ, ನಂತರ ವಿದ್ಯಾರ್ಥಿಗಳಿಗೆ ಅಭಿಯಾನದ ಕುರಿತು ಮಾಹಿತಿ ನೀಡಿ, ಅಭಿಯಾನಕ್ಕೆ ಕೈ ಜೋಡಿಸುವಂತೆ ತಿಳಿಸಲಾಯಿತು.

ಹಾಗೆಯೇ ಶಾಲಾ–ಕಾಲೇಜು, ವಿದ್ಯಾರ್ಥಿ ನಿಲಯಗಳ ಸುತ್ತಮುತ್ತಲಿನ ಪ್ರದೇಶ ಹಾಗೂ ನಗರದ ಪ್ರಮುಖ ಪ್ರವಾಸಿ ತಾಣಗಳು, ಪಾರ್ಕ್‌ಗಳು ಸೇರಿದಂತೆ ಆಯಕಟ್ಟಿನ ಪ್ರದೇಶಗಳಲ್ಲಿ ಸಹಾಯವಾಣಿ ಮೊಬೈಲ್ ಸಂಖ್ಯೆ ಹೊಂದಿರುವ ಭಿತ್ತಿಪತ್ರಗಳನ್ನು ಅಂಟಿಸಲಾಗಿದ್ದು, ಸಾರ್ವಜನಿಕರಲ್ಲಿ ಯಾವುದೇ ರೀತಿಯ ಮಾದಕ ವಸ್ತುಗಳನ್ನು ಉಪಯೋಗಿಸದಂತೆ ಮತ್ತು ಮಾದಕ ವಸ್ತುಗಳ ಮಾರಾಟ, ಸಾಗಣೆ, ಸೇವನೆ ಅಥವಾ ಬಳಕೆ ಮುಂತಾದ ಚಟುವಟಿಕೆ ಕಂಡು ಬಂದರೆ ತಕ್ಷಣ ಮಾಹಿತಿ ನೀಡುವಂತೆ ಮನವಿ ಮಾಡಲಾಯಿತು.

ಶ್ರೀ ಪ್ರಸನ್ನ ಶಿವಲಿಂಗೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ

ಮೈಸೂರು, ಫೆ.13(ಎಸ್‌ಪಿಎನ್)– ಮೈಸೂರಿನ ಕುವೆಂಪುನಗರದ ವಿಶ್ವ ಮಾನವ ಜೋಡಿ ರಸ್ತೆಯಲ್ಲಿರುವ ಶ್ರೀಪ್ರಸನ್ನ ಶಿವಲಿಂಗೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಮಹಾ ಶಿವರಾತ್ರಿ ಪ್ರಯುಕ್ತ ಫೆ.15ರಂದು ವಿವಿಧ ಪೂಜಾ ಕೈಂಕರ್ಯಗಳು ನಡೆಯಲಿವೆ ಎಂದು ನಾಗರಿಕ ವೇದಿಕೆ ಪ್ರಕಟಣೆಯಲ್ಲಿ ತಿಳಿಸಿದೆ.

ಬೆಳಗ್ಗೆ 5.30ಕ್ಕೆ ರುದ್ರಾಭಿಷೇಕ ಬಳಿಕ ಮಹಾ ಮಂಗಳಾರತಿ, ಸಂಜೆ 6.30ಕ್ಕೆ ರುದ್ರಾಭಿಷೇಕ ಬಳಿಕ ಮಂಗಳಾರತಿ, ರಾತ್ರಿ 9.30ಕ್ಕೆ ರುದ್ರಾಭಿಷೇಕ ಬಳಿಕ ಮಂಗಳಾರತಿ, ಮಧ್ಯರಾತ್ರಿ 1ಕ್ಕೆ ರುದ್ರಾಭಿಷೇಕ ಬಳಿಕ ಮಂಗಳಾರತಿ ನಡೆಯಲಿದ್ದು, ಫೆ16 ರಂದು ಮುಂಜಾನೆ 4 ಗಂಟೆಗೆ ರುದ್ರಾಭಿಷೇಕ ಬಳಿಕ ಮಹಾಮಂಗಳಾರತಿ ನಡೆಯಲಿದೆ. ಶಿವರಾತ್ರಿ ಪ್ರಯುಕ್ತ ಫೆ.15 ರಂದು ಬೆಳಗ್ಗೆ 7 ಗಂಟೆಗೆ ದೇವಸ್ಥಾನದ ಆವರಣದಲ್ಲಿ ಗಾಯಕ ಎ.ಡಿ.ಶ್ರೀನಿವಾಸ್ ಮತ್ತು ತಂಡದಿಂದ ಭಕ್ತಿಗೀತೆಗಳ ಗಾಯನ ಏರ್ಪಡಿಸಲಾಗಿದೆ ಎಂದು ನಾಗರಿಕ ವೇದಿಕೆ ಅಧ್ಯಕ್ಷರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶರಣರು ತಳ ಸಮುದಾಯಗಳಿಗೆ ಅಸ್ಮಿತೆ ತಂದು ಕೊಟ್ಟವರು

ರಾಯಚೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಶಿವಾನಂದ ಕೆಳಗಿನಮನಿ ಅಭಿಮತ



ಮೈಸೂರು ವಿಶ್ವವಿದ್ಯಾನಿಲಯದ ರಾಣಿ ಬಹದ್ದೂರ್ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಲೇಖಕ ಮ.ಸಿ.ನಾರಾಯಣ ರಚಿಸಿರುವ 'ಖಂಡಾಯಗಳು' ಮತ್ತು 'ಶ್ರೀ ಮಾದಾರ ಚನ್ನಯ್ಯ ಶರಣರುಗಳು ಕುರುಬನಕಟ್ಟೆ ಶ್ರೀಕ್ಷೇತ್ರ' ಕೃತಿಗಳನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ. ಪದ್ಮಾಶೇಖರ್ ಬಿಡುಗಡೆ ಮಾಡಿದರು.

ಮೈಸೂರು, ಫೆ.13(ಎಂಟಿವೈ)– ಶರಣರು ಪ್ರಭುತ್ವವನ್ನು ವಿರೋಧಿಸಿ ತಳ ಸಮುದಾಯಗಳ ಪರವಾಗಿ ಹೋರಾಡುವ ಮೂಲಕ ಅಸ್ಮಿತೆಯನ್ನು ತಂದುಕೊಟ್ಟರು ಎಂದು ರಾಯಚೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಶಿವಾನಂದ ಕೆಳಗಿನಮನಿ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಡಾ. ಬಾಬೂ ಜಗಜೀವನ ರಾಮ್ ಅಧ್ಯಯನ, ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರವು ಶುಕ್ರವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಲೇಖಕ ಮ.ಸಿ.ನಾರಾಯಣ ರಚಿಸಿರುವ 'ಖಂಡಾಯಗಳು' ಮತ್ತು 'ಶ್ರೀ ಮಾದಾರ ಚನ್ನಯ್ಯ ಶರಣರುಗಳು ಕುರುಬನಕಟ್ಟೆ ಶ್ರೀಕ್ಷೇತ್ರ' ಕೃತಿಗಳನ್ನು ಬಿಡುಗಡೆ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಶರಣರೆಂದರೆ ಕೇವಲ ವಚನಕಾರರಲ್ಲ, ಅವರು ಸಮಾಜ ಸುಧಾರಕರೂ ಆಗಿದ್ದಾರೆ. ಸಿದ್ಧಿ ಪುರುಷರೆನಿಸಿರುವ ಮಂಟೇಸ್ವಾಮಿ, ಮಲೆ ಮಹದೇಶ್ವರರು ಸಾಮಾಜಿಕ, ಸಾಂಸ್ಕೃತಿಕ ಪರಿವರ್ತನೆಯನ್ನು ಮಾಡಿದ ಮಹಾನ್ ಶರಣರೆನಿಸಿದ್ದಾರೆ. ಮಂಟೇಸ್ವಾಮಿ ನನ್ನ ಆದಿಮ ಬೆಳಕು ಮಾದಾರ ಚೆನ್ನಯ್ಯ ಎನ್ನುತ್ತಾರೆ. 12ನೇ ಶತಮಾನದ ಶರಣ ಪರಂಪರೆಯು ಸ್ಥಾವರಗೊಂಡಿದ್ದಾಗ ನಿಜದ ಹಾದಿಗೆ ತಂದವರು ಮಂಟೇಸ್ವಾಮಿ ಎಂದು ತಿಳಿಸಿದರು.

ಶರಣರಲ್ಲಿ ಸಿದ್ಧರು, ತಾಂತ್ರಿಕ ಪಂಥದ ಅವೈದಿಲ ಪರಂಪರೆಯ ಕಾಪಾಲಿಕ, ಕಾಳಮುಖ, ಲಕುಲೀಶ, ಪಾಶುಪಾತ, ಲಾಕುಳ, ಗೌಳ, ಶಾಕ್ತರು ಸೇರಿದಂತೆ ಹಲವು ಪಂಥಗಳಿವೆ. ದಕ್ಕಲಿಗರು, ಮಾದಿಗರು, ಹೊಲೆಯರು, ಚಮ್ಮಾರರು, ಡೊಂಬರು ಸೇರಿದಂತೆ ತಳ ಸಮುದಾಯಗಳು ಈ ಪಂಥದವರಾಗಿದ್ದಾರೆ. ಎಲ್ಲ ಸಿದ್ಧ ಪುರುಷರು ತಳ ಸಮುದಾಯದಿಂದಲೇ ಬಂದವರಾಗಿದ್ದಾರೆ. ತಳ ಸಮುದಾಯಗಳ ಚರಿತ್ರೆಯನ್ನು ನಾವು ಸಂಸ್ಕೃತಿ, ಆಚರಣೆಗಳ ಅಧ್ಯಯನದ ಮೂಲಕ ಕಂಡುಕೊಳ್ಳಬೇಕು. ಕುಲದೈವಗಳು, ಜೀವನ ಸಂಸ್ಕೃತಿಯ ಶೋಧ ನಡೆಸಬೇಕು. ತಳ ಸಮುದಾಯಗಳು ಕುಲದೈವಗಳ ಮೂಲಕ ಸಾಂಸ್ಕೃತಿಕ ಹಿರಿಮೆ ಗರಿಮೆಯನ್ನು ಗುರುತಿಸಿಕೊಳ್ಳಬೇಕು ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ. ಪದ್ಮಾಶೇಖರ್ ಕೃತಿಗಳ ಬಿಡುಗಡೆ ಮಾಡಿದರು. ಖಂಡಾಯ ಕೃತಿ ಕುರಿತು ಮುಕ್ತ ವಿವಿಯ ಸಹ ಪ್ರಾಧ್ಯಾಪಕರಾದ ಡಾ.ಸುಮಿತ್ರ, ಶ್ರೀ ಮದಾರ ಚನ್ನಯ್ಯ ಶರಣರುಗಳು ಕುರುಬನಕಟ್ಟೆ ಕ್ಷೇತ್ರ ಕೃತಿ ಕುರಿತು ಡಾ.ಬಾಬೂ ಜಗಜೀವನರಾವ್ ಅಧ್ಯಯನ ಕೇಂದ್ರದ ಸಂಶೋಧನಾಧಿಕಾರಿ ಡಾ.ಎಂ.ಶ್ರೀನಿವಾಸ ಮೂರ್ತಿ ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ.ಬಾಬೂ ಜಗಜೀವನರಾಮ್ ಅಧ್ಯಯನ ಕೇಂದ್ರದ ನಿರ್ದೇಶಕ ಪ್ರೊ.ಕೆ.ಸದಾಶಿವ ವಹಿಸಿದ್ದರು. ಕೃತಿ ಕರ್ತೃ ಲೇಖಕ ಮ.ಸಿ.ನಾರಾಯಣ, ಲೇಖಕ ಅರಕಲವಾಡಿ ನಾಗೇಂದ್ರ, ಪ್ರೊ.ಸಿ.ರಾಮಸ್ವಾಮಿ, ದೇವರತ್ನ ಫೌಂಡೇಶನ್ ಸ್ಥಾಪಕ ಎಂ.ಶಿವಪ್ರಸಾದ್, ಉದ್ಯಮಿ ಎಚ್.ಕೆ.ಸೋಮಶೇಖರ, ಮುಖಂಡ ಅಂಬಣ್ಣ ಅರೋಲಿಕರ್ ಇನ್ನಿತರರು ಪಾಲ್ಗೊಂಡಿದ್ದರು.

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷೀದಾರರು ಅದರ ಇಂದಿನ ಮಾಲೀಕರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ,

ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಿಗಾದಾರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆ, ಒಪ್ಪಂದ, ನ್ಯಾಯಾಲಯದ ತಡೆ ಇತ್ಯಾದಿಗಳು ಇದ್ದಲ್ಲಿ, ಇಂದಿನಿಂದ ಏಳು (07) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಾಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು.

ನಿರ್ದಿಷ್ಟ ಅವದಿಯಲ್ಲಿ ಯಾವುದೇ ತಕರಾರು ಸಲ್ಲಿಕೆಯಾಗದಲ್ಲಿ ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಖರೀದಿ ಪ್ರಕ್ರಿಯೆಯನ್ನು ಮುಂದುವರಿಸುವರು. ನಂತರ ಬರುವ ಮೇಲ್ಕಂಡ ಯಾವುದೇ ರೀತಿಯ ಆಕ್ಷೇಪಣೆಗಳಿಗೆ ನನ್ನ ಕಕ್ಷೀದಾರರು ಬದ್ಧರಾಗುವುದಿಲ್ಲ.

ಷೆಡ್ಯೂಲ್

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ವರುಣ ಹೋಬಳಿ, ಇನಾಂಉತ್ತನಹಳ್ಳಿ ಗ್ರಾಮದ ಸರ್ವೆ ನಂಬರ್. 27/3 ರಲ್ಲಿನ ಒಂದು ಎಕರೆ ಐದು ಗುಂಟೆ (1.05.00.00) ವಿಸ್ತೀರ್ಣದ ಖುಷ್ಕಿ ಜಮೀನಿಗೆ ಚಕ್ಕುಬಂದಿ:ಪೂರ್ವಕ್ಕೆ:– ಎ.ಂ.ಸಿ. ಹುಂಡಿ ಮುಖ್ಯ ರಸ್ತೆ, ಪಶ್ಚಿಮಕ್ಕೆ:– ವರುಣ ನಾಲ ಮತ್ತು ರಸ್ತೆ, ಉತ್ತರಕ್ಕೆ: – ಸರ್ವೆ ನಂಬರ್ 27/7, ದಕ್ಷಿಣಕ್ಕೆ:– ಸರ್ವೆ ನಂಬರ್ 27/2

Sd/- M.N. Prakash Kalappa
Advocate & Leagal Consultant
#2-3, First Floor, PRI Complex,
67/7A, New Sayyajirao Road,
Fort Mohalla, Mysore-570004.
Mob:93431 12535,
Email: mnprakashkalappa@gmail.com
ಮೈಸೂರು: 13/02/2026

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಪ್ರಕಟಣೆಯ ಮೂಲಕ ತಿಳಿಸುವುದೇನೆಂದರೆ, ನನ್ನ ಕಕ್ಷೀದಾರರಾದ, ಶ್ರೀಮತಿ. ಶಿವರತ್ನ, ಕೋಂ. ಹೆಚ್. ಬಿ. ರಾಜಮುಡಿ, ಮನೆ ನಂ. 559, 9ನೇ ಅಡ್ಡ ರಸ್ತೆ, 1ನೇ ಹಂತ, 3ನೇ ಮುಖ್ಯ ರಸ್ತೆ, ಅರವಿಂದ ನಗರ, ಮೈಸೂರು, ರವರು ಈ ಕೆಳಕಂಡ ಷೆಡ್ಯೂಲ್ ಸ್ವತ್ತನ್ನು ಶ್ರೀ. ಆರ್. ರಮೇಶ್ ಕುಮಾರ್, ಬಿನ್. ಲೇಟ್. ಎನ್. ರೂಪ್ ಚಂದ್‌ರವರಿಂದ ಕ್ರಯಕ್ಕೆ ಕೊಳ್ಳಲು ಇಚ್ಛಿಸಿರುತ್ತಾರೆ. ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿ/ಸಂಘ/ಬ್ಯಾಂಕ್ ಗಳು/ಆರ್ಥಿಕ ಸಂಸ್ಥೆಗಳಿಗೆ, ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ ಮತ್ತು ಭಾದ್ಯತೆಗಳು ಇದ್ದಲ್ಲಿ, ಪೂರಕ ದಾಖಲೆಗಳ ಸಹಿತ ಈ ಕೆಳಗೆ ನಮೂದು ಮಾಡಿರುವ ಕಛೇರಿಯ ವಿಳಾಸಕ್ಕೆ, ಈ ಪತ್ರಿಕಾ ಪ್ರಕಟಣೆಯ ದಿನದಿಂದ ಏಳು ದಿನಗಳ (7) ಒಳಗಾಗಿ ಲಿಖಿತವಾಗಿ ತಿಳಿಸತಕ್ಕದ್ದು. ಇದಕ್ಕೆ ತಪ್ಪಿದಲ್ಲಿ, ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ರೀತಿಯ ಹಿತಾಸಕ್ತಿ ಇಲ್ಲವೆಂದು ಪ–ರಿಗಣಿಸಿ ಕ್ರಯವನ್ನು ಪೂರ್ಣಗೊಳಿಸಲಾಗುವುದು.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ವರುಣಾ ಹೋಬಳಿ, ಆಯರಹಳ್ಳಿ ಗ್ರಾಮದ ಸರ್ವೆ ನಂ. 479/*/3 & 4, ಒಟ್ಟು ವಿಸ್ತೀರ್ಣ 2.20 ಎಕರೆ (ಎರಡು ಎಕರೆ ಇಪ್ಪತ್ತು ಗುಂಟೆ) ಜಮೀನಿಗೆ ಚಕ್ಕುಬಂದಿ– ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ : ಆರ್. ಮಹಾವೀರ್‌ರವರ ಜಮೀನು, ಉತ್ತರಕ್ಕೆ : ರಸ್ತೆ, ಮತ್ತು ದಕ್ಷಿಣಕ್ಕೆ: ಓಣಿ.

ಸಹಿ/– ಬಿ. ಎಂ. ಶಿವಸ್ವಾಮಿ,
ವಕೀಲರು ನಂ. 1127/2A,
1ನೇ ಅಡ್ಡ ರಸ್ತೆ, ವಾಣಿವಿಲಾಸ ರಸ್ತೆ,
(ಆರ್.ಟಿ.ಓ. ಹಿಂಭಾಗ),
ಚಾಮರಾಜಪುರಂ, –570 005
. 94485 05433
Email: bmsswamy@gmail.com
ದಿನಾಂಕ : 13.02.2026

10ನೇ ವರ್ಷದ ಸವಿನೆನಪು



ಎನ್.ವಿಶ್ವನಾಥ್
ಫ್ರೆಂಡ್ಸ್ ಕ್ರಿಕೆಟ್ ಕ್ಲಬ್
ಎಫ್‌ಸಿಸಿ, ದೇವರಾಜ ಮೊಹಲ್ಲಾ, ಮೈಸೂರು

7ನೇ ವರ್ಷದ ಪುಣ್ಯಸ್ಮರಣೆ



ಹೆಚ್.ಎನ್.ದೊಡ್ಡಯ್ಯ
(KSRTC) ಹಾಸನ
ದುಃಖತಪ್ತರು: ಪತ್ನಿ ಜಯಮ್ಮ, ಮಕ್ಕಳು ಹಾಗೂ ಬಂಧು ಮಿತ್ರರು

ಆಸ್ಟ್ರೇಲಿಯಾ ಮಣಿಸಿದ ಜಿಂಬಾಬ್ವೆ!



ಕೊಲಂಬೊ, ಫೆ13(ವಿವಿಹೆಚ್)– ಇಲ್ಲಿನ ಆರ್.ಪ್ರೇಮದಾಸ ಕ್ರೀಡಾಂಗಣದಲ್ಲಿ ನಡೆದ ಐಸಿಸಿ ಪುರುಷರ ಟಿ ಟ್ವೆಂಟಿ ವಿಶ್ವಕಪ್ 2026ರ ಗ್ರೂಪ್ ಹಂತದ 19ನೇ ಪಂದ್ಯದಲ್ಲಿ ಜಿಂಬಾಬ್ವೆ ವಿರುದ್ಧ ಆಸ್ಟ್ರೇಲಿಯಾ 23 ರನ್‌ಗಳಿಂದ ಸೋತು ಭಾರೀ ಮುಖಭಂಗ ಅನುಭವಿಸಿದೆ.

ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಜಿಂಬಾಬ್ವೆ ನಿಗದಿತ 20 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 169 ರನ್ ಕಲೆಹಾಕಿತು. ಈ ಗುರಿಯನ್ನು ಬೆನ್ನಟ್ಟುವಲ್ಲಿ ವಿಫಲವಾದ ಆಸ್ಟ್ರೇಲಿಯಾ 19.3 ಓವರ್‌ಗಳಲ್ಲಿ ತನ್ನೆಲ್ಲಾ ವಿಕೆಟ್ ಕಳೆದುಕೊಂಡು 146 ರನ್ ಗಳಿಸಿ ಸೋಲೊಪ್ಪಿಕೊಂಡಿತು.

ಜಿಂಬಾಬ್ವೆ ಇನ್ನಿಂಗ್ಸ್: ಆರಂಭಿಕರಾಗಿ ಕಣಕ್ಕಿಳಿದ ಬ್ರಿಯಾನ್ ಬೆನೆಟ್ ಹಾಗೂ ತಡಿವಾನಶೆ ಮಾರುಮಾನಿ 61 ರನ್‌ಗಳ ಜತೆಯಾಟವನ್ನಾಡುವ ಮೂಲಕ ಉತ್ತಮ ಆರಂಭ ತಂದುಕೊಟ್ಟರು. ತಡಿವಾನಶೆ ಮಾರುಮಾನಿ 21 ಎಸೆತಗಳಲ್ಲಿ 35 ರನ್ ಕಲೆಹಾಕಿದರೆ, ಕೊನೆಯವರೆಗೂ ಕಣದಲ್ಲಿದ್ದ ಬ್ರಿಯಾನ್ ಬೆನೆಟ್ 56 ಎಸೆತಗಳಲ್ಲಿ ಅಜೇಯ 64 ರನ್ ಗಳಿಸಿದರು. ಉಳಿದಂತೆ ರಯಾನ್ ಬರ್ಲ್ 30 ಎಸೆತಕ್ಕೆ 35 ರನ್ ಹಾಗೂ ನಾಯಕ ಸಿಕಂದರ್ ರಾಜಾ 13 ಎಸೆತಗಳಲ್ಲಿ ಅಜೇಯ 25 ರನ್ ಬಾರಿಸಿದರು.

ಆಸೀಸ್ ಪರ ಮಾರ್ಕಸ್ ಸ್ಟೋಯಿನಿಸ್ ಹಾಗೂ ಕ್ಯಾಮೆರಾನ್ ತಲಾ ಒಂದೊಂದು ವಿಕೆಟ್ ಪಡೆದರು.

ಆಸ್ಟ್ರೇಲಿಯಾ ಇನ್ನಿಂಗ್ಸ್: ಜಿಂಬಾಬ್ವೆ ನೀಡಿದ ಸವಾಲಿನ ಗುರಿ ಬೆನ್ನಟ್ಟಿದ ಆಸ್ಟ್ರೇಲಿಯಾ ಕೇವಲ 29 ರನ್‌ಗೆ ತನ್ನ 4 ವಿಕೆಟ್ ಕಳೆದುಕೊಂಡು ಭಾರೀ ಆಘಾತಕ್ಕೆ ಒಳಗಾಯಿತು. ಜೋಶ್ ಇಂಗ್ಲಿಸ್ 8, ಟ್ರಾವಿಸ್ ಹೆಡ್ 17, ಕೆಮರೂನ್ ಗ್ರೀನ್ ಡಕ್‌ಔಟ್ ಹಾಗೂ ಟಿಮ್ ಡೇವಿಡ್ ಡಕ್‌ಔಟ್ ಆದರು. ಹೀಗೆ ಆರಂಭಿಕ ಆಘಾತ ಅನುಭವಿಸಿದ ಆಸ್ಟ್ರೇಲಿಯಾಗೆ ಐದನೇ ವಿಕೆಟ್‌ಗೆ ಜತೆಯಾದ ಗ್ಲೆನ್ ಮ್ಯಾಕ್ಸ್‌ವೆಲ್ ಹಾಗೂ ಮ್ಯಾಟ್ ರೆನ್ಶಾ 77 ರನ್‌ಗಳ ಜತೆಯಾಟವನ್ನಾಡಿ ತಂಡವನ್ನು ಗೆಲುವಿನ ಕಡೆ ಕರದೊಯ್ದಿದ್ದರು.

ಆದರೆ ಮ್ಯಾಕ್ಸ್‌ವೆಲ್ 31 ರನ್ ಗಳಿಸಿ ನಿರ್ಗಮಿಸಿದರು. ನಂತರ ಕಣಕ್ಕಿಳಿದ ಮಾರ್ಕಸ್ ಸ್ಟೊಯಿನಿಸ್ ಕೇವಲ 6 ರನ್‌ಗೆ ಔಟಾಗುವ ಮೂಲಕ ಆಸೀಸ್ ಸೋಲಿನ ಮಗ್ಗುಲಿಗೆ ಹೊರಳಿತು. ಬೆನ್ ಡ್ವಾರ್ಷಿಯಸ್ ಸಹ 6 ರನ್, ನೆಲಕಚ್ಚಿ ನಿಂತಿದ್ದ ಮ್ಯಾಟ್ ರೆನ್ಶಾ 65 ರನ್‌ಗೆ ವಿಕೆಟ್ ಒಪ್ಪಿಸಿದರು. ಇನ್ನುಳಿದಂತೆ ಆಡಂ ಜಂಪಾ 2, ಮ್ಯಾಥ್ಯು ಕುನ್ನೆಮನ್ ಡಕ್‌ಔಟ್ ಹಾಗೂ ನೇಥನ್ ಎಲ್ಲಿಸ್ ಅಜೇಯ 7 ರನ್ ಕಲೆಹಾಕಿದರು. ಜಿಂಬಾಬ್ವೆ ಪರ ಬ್ಲೆಸಿಂಗ್ ಮುಜರ್‌ಬಾನಿ 4 ವಿಕೆಟ್, ಬ್ರಾಡ್ ಎವನ್ಸ್ 3 ವಿಕೆಟ್, ವೆಲ್ಲಿಂಗ್ಟನ್ ಮಸಕಾಡ್ಜಾ ಹಾಗೂ ರಯಾನ್ ಬರ್ಲ್ ತಲಾ ಒಂದೊಂದು ವಿಕೆಟ್ ಪಡೆದರು.

ಕರಾರುವಕ್ಕಾದ ಬೌಲಿಂಗ್ ದಾಳಿಯಿಂದ ಆಸೀಸ್ ಪಾಳಯದ ಪ್ರಮುಖ ನಾಲ್ಕು ವಿಕೆಟ್ ಉರುಳಿಸಿದ ಬ್ಲೆಸಿಂಗ್ ಮುಜರ್‌ಬಾನಿ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಕೆನಡಾವನ್ನು 5 ವಿಕೆಟ್‌ನಿಂದ ಸೋಲಿಸಿದ ಯುಎಇ

ಡೆಲ್ಲಿ, ಫೆ.13(ವಿವಿಹೆಚ್)– ಅನುಭವಿ ವೇಗಿ ಜುನೈದ್ ಸಿದ್ಧಿಕ್ ಮಾರಕ ದಾಳಿ ಹಾಗೂ ಬ್ಯಾಟರ್ ಆರ್ಯನ್ಶ್ ಶರ್ಮಾ ಅವರ ಅರ್ಧಶತಕದ ನೆರವಿನಿಂದ ಯುಎಇ(ಯುನೈಟೆಡ್ ಅರಬ್ ಎಮಿರೈಟಿಸ್) ತಂಡ, ಕೆನಡಾವನ್ನು 5 ವಿಕೆಟ್‌ಗಳಿಂದ ಮಣಿಸಿತು.

ಇಲ್ಲಿನ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟ್ ಮಾಡಿದ ಕೆನಡಾ ನಿಗದಿತ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 150 ರನ್ ಗಳಿಸಿತು. ಈ ಮೊತ್ತ ಬೆನ್ನತ್ತಿದ ಯುಎಇ 19.4 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು 151 ರನ್ ಗಳಿಸಿ ಗೆಲುವಿನ ನಗೆ ಬೀರಿತು.

ಸಂಕ್ಷಿಪ್ತ ಸ್ಕೋರ್

ಕೆನಡಾ: 105/7 (20 ಓವರ್)– ಹರ್ಷ ಥಾಕರ್ 50(41), ನವ್‌ನೀತ್ ಧಾಲಿವಾಲ್ 34(21), ಶ್ರೇಯಸ್ ಮೋವ್ವಾ 21(21), ಜುನೈದ್ ಸಿದ್ಧಿಕ್ 35ಕ್ಕೆ5, ಮುಹಮ್ಮದ್ ಜವಾದುಲ್ಲಾ 16ಕ್ಕೆ1.

ಯುಎಇ: 151/5 (19.4 ಓವರ್)– ಆರ್ಯನ್ಶ್ ಶರ್ಮಾ 74(53 ಎ, 6 ಬೌ, 3 ಸಿ) ಶೋಯಬ್ ಖಾನ್ 51(29), ಸಾದ್ ಬಿನ್ ಜಫರ್ 14ಕ್ಕೆ3, ಕಲೀಮ್ ಸನಾ 29ಕ್ಕೆ1

ನೆದರ್ಲ್ಯಾಂಡ್ಸ್ ವಿರುದ್ಧ ಯುಎಸ್‌ಎಗೆ ಭರ್ಜರಿ ಜಯ



ಚೆನ್ನೈ, ಫೆ13(ವಿವಿಹೆಚ್)– ಇಲ್ಲಿನ ಎಂ.ಎ.ಚಿದಂಬರಂ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಐಸಿಸಿ ಟಿ20 ವಿಶ್ವಕಪ್‌ನ 21ನೇ ಲೀಗ್ ಪಂದ್ಯದಲ್ಲಿ ನೆದರ್ಲ್ಯಾಂಡ್ಸ್ ವಿರುದ್ಧ ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕಾ (ಯುಎಸ್‌ಎ) 93ರನ್‌ಗಳ ಭಾರೀ ಅಂತರದ ಗೆಲುವು ದಾಖಲಿಸಿತು. ಆ ಮೂಲಕ ಟೂರ್ನಿಯಲ್ಲಿ ಶುಭಾರಂಭ ಮಾಡಿತು. ಈ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಯುಎಸ್‌ಎ ಸಾಯ್‌ತೇಜ್ ಮುಕ್ಕಾಮಲ್ಲಾ 79(51) ಅವರ ಅಮೋಘ ಅರ್ಧಶತಕದ ಬಲದಿಂದ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 196 ರನ್ ಗಳಿಸಿತು. ಈ ಬೃಹತ್ ಮೊತ್ತ ಬೆನ್ನತ್ತುವಲ್ಲಿ ವಿಫಲವಾದ ನೆದರ್ಲ್ಯಾಂಡ್ಸ್ 15.5 ಓವರ್‌ಗಳಲ್ಲಿ ತನ್ನೆಲ್ಲಾ ವಿಕೆಟ್ ಕಳೆದುಕೊಂಡು 130 ರನ್ ಗಳಿಸಿ ಸೋಲನನುಭವಿಸಿತು. ಪರಿಣಾಮಕಾರಿ ಬೌಲಿಂಗ್ ದಾಳಿ ಮಾಡಿದ ಹರ್ಮೀತ್ ಸಿಂಗ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಉಚಿತ ಆಯುರ್ವೇದಿಕ್ ಆರೋಗ್ಯ ತಪಾಸಣೆ

ಮೈಸೂರು, ಫೆ.13– ಕಾವೇರಿ ಆಯುರ್ವೇದಿಕ್ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ ವತಿಯಿಂದ ಇದೇ ಫೆ.16 ರಿಂದ 21 ವರೆಗೆ ಉಚಿತ ಆಯುರ್ವೇದಿಕ್ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿದೆ.

ಕೆಬಿಎಲ್ ಲೇಔಟ್‌ನ ದೇವೇಗೌಡ ಸರ್ಕಲ್ ಬಳಿಯಿರುವ ಕಾವೇರಿ ಆಯುರ್ವೇದಿಕ್ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಉಚಿತ ಶಿಬಿರ ನಡೆಯಲಿದ್ದು, ಇದರೊಂದಿಗೆ ಸೋರಿಯಾಸಿಸ್(ಚರ್ಮ ಕಾಯಿಲೆ), ಶ್ರವಣ ಮತ್ತು ಕಿವಿ ಚಿಕಿತ್ಸಾ ಶಿಬಿರನ್ನೂ ಆಯೋಜಿಸಲಾಗಿದ್ದು, ಹೆಚ್ಚಿನ ಮಾಹಿತಿಗಾಗಿ ದೂ.ಸಂ: 9731799317 ಸಂಪರ್ಕಿಸುವಂತೆ ವೈದ್ಯಕೀಯ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷೀದಾರರು ಅದರ ಮಾಲೀಕರಾದ, ತಮಿಳು ನಾಡು ರಾಜ್ಯ, ಸೇಲಂ, ಸುರಮಂಗಲಂ, ಹೈವೇಸ್ ಕಾಲೋನಿ, ನಂಬರ್ ಎ–37 ರ ವಾಸಿಯಾದ ಶ್ರೀಮತಿ. ರೇಖಾ ಕೋಂ. ಆರ್. ಶಂಕರ್ ಮತ್ತು ಇವರ ಕುಟುಂಬದ ಸದಸ್ಯರುಗಳಿಂದ ಖರೀದಿಸಲು ಉದ್ದೇಶಿಸಿರುತ್ತಾರೆ,

ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಿಗಾದಾರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆ, ಒಪ್ಪಂದ, ನ್ಯಾಯಾಲಯದ ತಡೆ ಇತ್ಯಾದಿಗಳು ಇದ್ದಲ್ಲಿ, ಇಂದಿನಿಂದ ಏಳು (07) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಾಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು.

ನಿರ್ದಿಷ್ಟ ಅವಧಿಯಲ್ಲಿ ಯಾವುದೇ ತಕರಾರು ಸಲ್ಲಿಕೆಯಾಗದಲ್ಲಿ ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಖರೀದಿ ಪ್ರಕ್ರಿಯೆಯನ್ನು ಮುಂದುವರಿಸುವರು. ನಂತರ ಬರುವ ಮೇಲ್ಕಂಡ ಯಾವುದೇ ರೀತಿಯ ಆಕ್ಷೇಪಣೆಗಳಿಗೆ ನನ್ನ ಕಕ್ಷೀದಾರರು ಬದ್ಧರಾಗುವುದಿಲ್ಲ.

ಷೆಡ್ಯೂಲ್

ಐಟಂ–1
ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ವರುಣ ಹೋಬಳಿ, ಚಟ್ನಹಳ್ಳಿ ಗ್ರಾಮದ ಸರ್ವೆ ನಂಬರ್. 192/1 ರಲ್ಲಿನ ಮೂರು ಗುಂಟೆ (0.03.00.00) ವಿಸ್ತೀರ್ಣದ ಖುಷ್ಕಿ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ:– ಸರ್ವೆ ನಂಬರ್ 192/6, ಪಶ್ಚಿಮಕ್ಕೆ:– ಸರ್ವೆ ನಂಬರ್ 192/5, ಉತ್ತರಕ್ಕೆ: – ಸರ್ಕಾರಿ ಜಮೀನು ಮತ್ತು ರಸ್ತೆ, ದಕ್ಷಿಣಕ್ಕೆ:– ಸರ್ವೆ ನಂಬರ್ 193/3

ಐಟಂ–2
ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ವರುಣ ಹೋಬಳಿ, ಚಟ್ನಹಳ್ಳಿ ಗ್ರಾಮದ ಸರ್ವೆ ನಂಬರ್. 192/5 ರಲ್ಲಿನ ನಾಲ್ಕು ಗುಂಟೆ (0.04.00.00) ವಿಸ್ತೀರ್ಣದ ಖುಷ್ಕಿ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ:– ಸರ್ವೆ ನಂಬರ್ 192/1, ಪಶ್ಚಿಮಕ್ಕೆ:– ಸರ್ವೆ ನಂಬರ್ 192/2, ಉತ್ತರಕ್ಕೆ: – ಸರ್ಕಾರಿ ಜಮೀನು ಮತ್ತು ರಸ್ತೆ, ದಕ್ಷಿಣಕ್ಕೆ:– ಸರ್ವೆ ನಂಬರ್ 193/12

ಐಟಂ–3
ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ವರುಣ ಹೋಬಳಿ, ಚಟ್ನಹಳ್ಳಿ ಗ್ರಾಮದ ಸರ್ವೆ ನಂಬರ್. 193/3 ರಲ್ಲಿನ ಹದಿನೈದು ಗುಂಟೆ (0.15.00.00) ವಿಸ್ತೀರ್ಣದ ಖುಷ್ಕಿ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ:– ಸರ್ವೆ ನಂಬರ್ 193/16, ಪಶ್ಚಿಮಕ್ಕೆ:– ಸರ್ವೆ ನಂಬರ್ 193/12, ಉತ್ತರಕ್ಕೆ: – ಸರ್ವೆ ನಂಬರ್ 192/1, 6, ದಕ್ಷಿಣಕ್ಕೆ:– ಸರ್ವೆ ನಂಬರ್ 193/5

ಐಟಂ–4
ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ವರುಣ ಹೋಬಳಿ, ಚಟ್ನಹಳ್ಳಿ ಗ್ರಾಮದ ಸರ್ವೆ ನಂಬರ್. 193/5 ರಲ್ಲಿನ ಒಂದು ಎಕರೆ ಹದಿನಾರು ಗುಂಟೆ (1.16.00.00) ವಿಸ್ತೀರ್ಣದ ಖುಷ್ಕಿ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ:– ಸರ್ವೆ ನಂಬರ್ 191 ಮತ್ತು 187/8, ಪಶ್ಚಿಮಕ್ಕೆ:– ಸರ್ವೆ ನಂಬರ್ 193/14, 15, ಉತ್ತರಕ್ಕೆ: – ಸರ್ವೆ ನಂಬರ್ 193/8, 7, 6, 12, 3, 16, ದಕ್ಷಿಣಕ್ಕೆ:– ಸರ್ವೆ ನಂಬರ್ 186/7, 8, 9, 10, 11 ಮತ್ತು 187/8

ಐಟಂ–5
ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ವರುಣ ಹೋಬಳಿ, ಚಟ್ನಹಳ್ಳಿ ಗ್ರಾಮದ ಸರ್ವೆ ನಂಬರ್. 193/12 ರಲ್ಲಿನ ಎಂಟು ಗುಂಟೆ (0.08.00.00) ವಿಸ್ತೀರ್ಣದ ಖುಷ್ಕಿ ಜಮೀನಿಗೆ ಚಕ್ಕುಬಂದಿ:, ಪೂರ್ವಕ್ಕೆ:– ಸರ್ವೆ ನಂಬರ್ 193/3, ಪಶ್ಚಿಮಕ್ಕೆ:– ಸರ್ವೆ ನಂಬರ್ 193/6, ಉತ್ತರಕ್ಕೆ: – ಸರ್ವೆ ನಂಬರ್ 192/5, ದಕ್ಷಿಣಕ್ಕೆ:– ಸರ್ವೆ ನಂಬರ್ 193/5

Sd/- M.N. Prakash Kalappa, Advocate & Leagal Consultant
#2-3, First Floor, PRI Complex, 67/7A, New Sayyajirao Road,
Fort Mohalla, Mysore-570004. Mob:93431 12535,
ಮೈಸೂರು: 13/02/2026 Email: mnprakashkalappa@gmail.com

ಮೈಸೂರು ಮಹಾನಗರ ಪಾಲಿಕೆ
ಮೈಸೂರು

ಸಂ.: ಮೈನಪಾ/ಆಶ್ರಯ/ಚಾಮ.ರಾ.ಕ್ಷೇ/2025–2026 ದಿನಾಂಕ: 10.02.2026

ಸಾರ್ವಜನಿಕ ಪ್ರಕಟಣೆ

ವಿಷಯ: ಚಾಮರಾಜ ವಿಧಾನಸಭಾ ಕ್ಷೇತ್ರ ಪಾಲಿಕೆ ವ್ಯಾಪ್ತಿಯ ನಗರ ಆಶ್ರಯ ವಸತಿ ಯೋಜನೆಯಡಿ ವಸತಿ 2000 ರಿಂದ 2004ನೇ ಸಾಲಿನಲ್ಲಿ ಅರ್ಜಿಯನ್ನು ಸಲ್ಲಿಸಿರುವ ಅರ್ಜಿದಾರರು **ರೂ.15600/–ಗಳು** ಮತ್ತು **ರೂ.5,100/–** ರಿಂದ **10,100/–ಗಳ** ವಿವಿಧ ರೀತ್ಯಾ ವಂತಿಗೆ ಹಣ ಪಾವತಿಸಿರುವ ಅರ್ಜಿದಾರರು ದಾಖಲಾತಿಗಳನ್ನು ಸಲ್ಲಿಸುವ ಬಗ್ಗೆ.

ಉಲ್ಲೇಖ: ಮಾನ್ಯ ಶಾಸಕರು, ಚಾಮರಾಜ ವಿಧಾನಸಭಾ ಕ್ಷೇತ್ರ ಹಾಗೂ ಮಾನ್ಯ ಜಿಲ್ಲಾಧಿಕಾರಿಗಳು ಮೈಸೂರು ಜಿಲ್ಲೆ, ಮೈಸೂರು ದಿನಾಂಕ: 05.12.2025ರ ತೀರ್ಮಾನದಂತೆ.

ಚಾಮರಾಜ ವಿಧಾನಸಭಾ ಕ್ಷೇತ್ರ ಪಾಲಿಕೆ ವ್ಯಾಪ್ತಿಯ ನಗರ ಆಶ್ರಯ ವಸತಿ ಯೋಜನೆಯಡಿಯಲ್ಲಿ ವಸತಿ ನಿರ್ಮಾಣ ಮಾಡಲು ಪ್ರಗತಿಯಲ್ಲಿದ್ದು, ಫಲಾನುಭವಿಗಳು 2000–2001, 2001–2002, 2002–2003, 2003–2004ನೇ ಸಾಲಿನಲ್ಲಿ ಅರ್ಜಿಯನ್ನು ಸಲ್ಲಿಸಿರುವ ಅರ್ಜಿದಾರರು ರೂ.15600/–ಗಳು ಮತ್ತು ರೂ.5,100/– ರಿಂದ 10,100/–ಗಳ ವಿವಿಧ ರೀತ್ಯಾ ವಂತಿಗೆ ಹಣ ಪಾವತಿಸಿರುವ ಅರ್ಜಿದಾರರ (4ನೇ ಪಟ್ಟಿ) ವಿಳಾಸದ ಬಗ್ಗೆ ಮಾಹಿತಿಗಳನ್ನು ಪರಿಶೀಲಿಸಿದ ನಂತರ ಸುಮಾರು 3000 ಕ್ಕಿಂತ ಮಂದಿಯು ಈಗಾಗಲೇ ಸ್ಥಳಾಂತರಗೊಂಡಿರುವುದು/ವಿಳಾಸ ಬದಲಾವಣೆಯಾಗಿರುವುದು ಕಂಡು ಬಂದಿರುತ್ತದೆ. ಆದುದ್ದರಿಂದ ಸದರಿ ಸ್ಥಳಾಂತರ/ವಿಳಾಸ ಬದಲಾವಣೆಗೊಂಡಿರುವ ಅರ್ಜಿದಾರರಿಂದ ಈ ಪ್ರಕಟಣೆ ಹೊರಡಿಸಿದ 30 ದಿನದೊಳಗಾಗಿ ಅಂದರೆ ದಿನಾಂಕ: **28.02.2026** ರೊಳಗಾಗಿ ಪಾಲಿಕೆಯ ಆಶ್ರಯ ಕಚೇರಿಗೆ ಖುದ್ದು ಹಾಜರಾಗಿ ಈ ಕೆಳಕಂಡ ದಾಖಲಾತಿಗಳನ್ನು ಸಲ್ಲಿಸತಕ್ಕದ್ದು ಎಂದು ಈ ಮೂಲಕ ತಿಳಿಸಿದೆ.

ಸಲ್ಲಿಸಬೇಕಾದ ದಾಖಲೆಗಳು:– 1) ಅರ್ಜಿ ರಶೀದಿಯ ಮೂಲ ಪ್ರತಿ. 2) ವಂತಿಗೆ ಹಣವನ್ನು ಪಾವತಿಸಲು ನೀಡಿರುವ ತಾತ್ಕಲಿಕ ತಿಳುವಳಿಕೆ ಪ್ರತಿ. 3) ವಂತಿಗೆ ಹಣ ಪಾವತಿಸಿರುವ ಚಲನ್ ಪ್ರತಿ. 4) ವಂತಿಗೆ ಪಾವತಿಸಿರುವ ಪಾವತಿದಾರರು ಮೃತಪಟ್ಟಲ್ಲಿ ಮೃತರ ಮರಣ ಪ್ರಮಾಣ ಪತ್ರ/ವಂಶವೃಕ್ಷ. 5) ಜಾತಿ ಪ್ರಮಾಣ ಪತ್ರ/ ಆದಾಯ ಪ್ರಮಾಣ ಪತ್ರ. 6) ವಾಸ ದೃಢೀಕರಣದ ಪ್ರಮಾಣ ಪತ್ರ. 7) ಬಿ.ಪಿ.ಎಲ್ ಪಡಿತರ ಚೀಟಿ ಪತ್ರ. 8) ಆಧಾರ್ ಕಾರ್ಡ್ (ಕುಟುಂಬದ ಎಲ್ಲಾ ಸದಸ್ಯರು). 9) ಚುನಾವಣಾ ಆಯೋಗದ ಗುರುತಿನ ಚೀಟಿ. 10) ಬಾಡಿಗೆ/ಭೋಗ್ಯದ ಪತ್ರ. 11) ಸರ್ಕಾರದ ವಸತಿ ಯೋಜನೆಯಡಿ ಸ್ವಂತ ಮನೆಯ ಸೌಲಭ್ಯವನ್ನು ಪಡೆದಿಲ್ಲದಿರುವ ಬಗ್ಗೆ ನೋಟರಿ ಪ್ರಮಾಣ ಪತ್ರ. 12) ಭಾವಚಿತ್ರ– 2. 13) ದೂರವಾಣಿ ಸಂಖ್ಯೆ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **28.02.2026**

ಸಹಿ/– ಆಯುಕ್ತರು
ಮೈಸೂರು ಮಹಾನಗರ ಪಾಲಿಕೆ, ಮೈಸೂರು.

DIPR/MYS/1662/SA/2025-26

ಪಾಂಡವಪುರ ತಾಲೂಕು ಕಚೇರಿಗೆ ಜಿಲ್ಲಾಧಿಕಾರಿಗಳ ಅನಿರೀಕ್ಷಿತ ಭೇಟಿ

ಕಾಲ ಮಿತಿಯೊಳಗೆ ಕಡತ ವಿಲೇವಾರಿಗೆ ತಾಕೀತು

ಮಂಡ್ಯ, ಫೆ.13– ಕಡತಗಳನ್ನು ಕಾಲ ಮಿತಿಯೊಳಗೆ ವಿಲೇವಾರಿ ಮಾಡದೆ ವಿಳಂಬವಾದಲ್ಲಿ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ.

ಪಾಂಡವಪುರ ತಾಲೂಕು ಕಚೇರಿಗೆ ಶುಕ್ರವಾರ ಜಿಲ್ಲಾಧಿಕಾರಿಗಳು ಅನಿರೀಕ್ಷಿತ ಭೇಟಿ ನೀಡಿ ಕಚೇರಿಯ ವಿವಿಧ ಶಾಖೆಗಳ ಕಾರ್ಯನಿರ್ವಹಣೆ, ಕಡತ ವಿಲೇವಾರಿ, ಸಿಬ್ಬಂದಿಗಳ ಹಾಜರಾತಿ ಹಾಗೂ ಸಾರ್ವಜನಿಕ ಸೇವೆಗಳ ಅನುಷ್ಠಾನವನ್ನು ಪರಿಶೀಲಿಸಿ, ಇ–ಆಫೀಸ್‌ನಲ್ಲಿನ ಬಾಕಿ ಹಾಗೂ ಆದಾಯ, ಜಾತಿ, ನಿವಾಸ, ವಂಶವೃಕ್ಷ, ಭೂಹಿಡುವಳಿ ಪ್ರಮಾಣಪತ್ರ ಸೇರಿದಂತೆ ಎಲ್ಲಾ ಸೇವೆಗಳನ್ನು ಸಕಾಲ ಯೋಜನೆಯಡಿ ನಿಗದಿತ ಅವಧಿಯಲ್ಲಿಯೇ ಒದಗಿಸುವಂತೆ ಕಟ್ಟುನಿಟ್ಟಾಗಿ ಸೂಚಿಸಿ ವಿನಾಕಾರಣ ತಡ ಮಾಡಿದವರ ವಿರುದ್ಧ ಶಿಸ್ತುಕ್ರಮ ಜರುಗಿಸುವುದಾಗಿ ಎಚ್ಚರಿಸಿದರು.



ಪಾಂಡವಪುರ ತಾಲೂಕು ಕಚೇರಿಗೆ ಶುಕ್ರವಾರ ಜಿಲ್ಲಾಧಿಕಾರಿಗಳು ಅನಿರೀಕ್ಷಿತ ಭೇಟಿ ನೀಡಿದಾಗ ಸಾರ್ವಜನಿಕರು ದೂರುಗಳನ್ನು ನೀಡಿದರು.

ಕಚೇರಿಗೆ ಆಗಮಿಸಿದ ಜಿಲ್ಲಾಧಿಕಾರಿ ಡಾ. ಕುಮಾರ್ ಅವರಿಗೆ ಹಲವಾರು ಕುಂದು ಕೊರತೆ ಸಂಬಂಧವಾಗಿ ಸಾರ್ವಜನಿಕರು ದೂರು ನೀಡಿದರು. ಕನಗನಮರಡಿ ಗ್ರಾಮದ ಸರಕಾರಿ ಶಾಲೆಯ ಕಾಂಪೌಂಡ್ ಒತ್ತುವರಿಯಾಗಿದ್ದು ಅದನ್ನು ತೆರವುಗೊಳಿಸುವಂತೆ ಸಾರ್ವಜನಿಕರು ನೀಡಿದ ದೂರಿನ ಮೇರೆಗೆ ಅದನ್ನು ತೆರವುಗೊಳಿಸಿ, ಅರ್ಜಿಗಳನ್ನು ಇತ್ಯರ್ಥ ಪಡಿಸುವಂತೆ ಅಧಿಕಾರಿಗಳಿಗೆ ತಾಕೀತು ಮಾಡಿದರು. ರೈತರ ಸಾಗುವಳಿ ಚೀಟಿಗಳು ತಾಲೂಕು ಕಚೇರಿಯ ರೆಕಾರ್ಡ್‌ನಲ್ಲಿ ಸರಿಯಾಗಿ ದೊರೆಯುತ್ತಿಲ್ಲ, ಹಲವು ಗ್ರಾಮಗಳಲ್ಲಿ ಒತ್ತುವರಿಯಾಗಿರುವ ರಸ್ತೆಗಳನ್ನು ಬಿಡಿಸುವಂತೆ ಸಾರ್ವಜನಿಕರು ದೂರು ಸಲ್ಲಿಸಿದರು.

ಬಳಿಕ ತಾಕೂಕಿನ ಚಂದ್ರೆ ಬಡಾವಣೆ ಸಮೀಪದಲ್ಲಿ ನಿವೃತ್ತ ಸೈನಿಕರಿಗೆ ನಿವೇಶನ ನಿರ್ಮಾಣ ಮಾಡುವ ಸಂಬಂಧ ಸ್ಥಳ ಪರಿಶೀಲನೆ ನಡೆಸಲು ತೆರಳಿದರು. ನಂತರ ಉಪವಿಭಾಗಾಧಿಕಾರಿ ಕಚೇರಿ ಸಭಾಂಗಣದಲ್ಲಿ ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ಸಭೆ ನಡೆಸಿದರು. ಸಭೆ ಬಳಿಕ ಸಾರ್ವಜನಿಕರಿಂದ ಅರ್ಜಿ ಸ್ವೀಕರಿಸಿದ ಜಿಲ್ಲಾಧಿಕಾರಿಗಳು ಸಮಸ್ಯೆಗಳನ್ನು ಬಗೆಹರಿಸುವಂತೆ ಸೂಚಿಸಿದರು. ಉಪವಿಭಾಗಾಧಿಕಾರಿ ಶ್ರೀನಿವಾಸ್, ತಹಶೀಲ್ದಾರ್ ಬಸವರೆಡ್ಡಪ್ಪ ರೋಣದ, ಶಿರಸ್ತೇದಾರ್ ಮೋಹನ್ ಇದ್ದರು.

ಯುವಕನ ಬಂಧನ : 1.64 ಕೆಜಿ ಗಾಂಜಾ ವಶ

ಪಾಂಡವಪುರ, ಫೆ.13–ಖಚಿತ ಮಾಹಿತಿ ಮೇರೆಗೆ ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿದ್ದವನ ಮೇಲೆ ತಹಶೀಲ್ದಾರ್ ನೇತೃತ್ವದ ಅಧಿಕಾರಿಗಳು, ಪೊಲೀಸರು, ದಾಳಿ ನಡೆಸಿ ಲಕ್ಷಾಂತರ ರೂ. ಬೆಲೆ ಬಾಳುವ 1.64 ಕೆಜಿ ಗಾಂಜಾವನ್ನು ವಶಪಡಿಸಿಕೊಂಡು ಆತನನ್ನು ಬಂಧಿಸಿದ್ದಾರೆ.

ಪಟ್ಟಣದ ನಿವಾಸಿ ಪೀಟರ್ ಎಂಬುವರ ಪುತ್ರ ತಂಗರಾಜು(33) ಎಂಬಾತನೇ ಅಕ್ರಮ ಗಾಂಜಾ ಮಾರಾಟ ಮಾಡಿ ಪೊಲೀಸರಿಗೆ ಸಿಕ್ಕಿರುವ ಯುವಕ. ಕರ್ನಾಟಕ ಗೃಹ ನಿರ್ಮಾಣ ಮಂಡಳಿ ಬಡಾವಣೆಯಲ್ಲಿ ಯುವಕನೋರ್ವ ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿದ್ದಾನೆ ಎಂಬ ಖಚಿತ ಮಾಹಿತಿಯ ಮೇರೆಗೆ ಸರ್ಕಲ್ ಇನ್ಸ್‌ಪೆಕ್ಟರ್ ಶರತ್, ತಹಶೀಲ್ದಾರ್ ಬಸವರೆಡ್ಡಪ್ಪರೋಣದ, ಸಬ್ ಇನ್ಸ್‌ಪೆಕ್ಟರ್ ಉಮೇಶ್ ನೇತೃತ್ವದಲ್ಲಿ ದಾಳಿ ನಡೆಸಿದರು. ತಂಗರಾಜು ಎಂಬ ಯುವಕ ಚೀಲದಲ್ಲಿ ಲಕ್ಷಕ್ಕೂ ಅಧಿಕ ಮೌಲ್ಯದ 1.64 ತೂಕದ ಅಕ್ರಮ ಗಾಂಜಾವನ್ನು ಮಾರಾಟ ಮಾಡಲು ಸಂಗ್ರಹಿಸಿಟ್ಟ, ಅಕ್ರಮ ಗಾಂಜಾದ ಜತೆಗೆ ತೂಕ ಮಾಡುವ ಯಂತ್ರ ಹಾಗೂ ಯುವಕನನ್ನು ಪೊಲೀಸರು ವಶಕ್ಕೆಪಡೆದುಕೊಂಡು ವಿಚಾರಣೆಗೆ ಒಳಪಡಿಸಿದ್ದಾರೆ. ಯುವಕ ತಂಗ ರಾಜು ಬೇರೆಡೆಯಿಂದ ಗಾಂಜಾವನ್ನು ತಂದು ಸ್ಥಳೀಯವಾಗಿ ಯುವಕರಿಗೆ ಮಾರಾಟ ಮಾಡುತ್ತಿದ್ದ ಎನ್ನಲಾಗಿದೆ.

ತಿಂಗಳ ಹಿಂದೆಯಷ್ಟೆ ಹಿರೇಮರಳಿ ಸಮೀಪದ ಬಿಟ್ಟನಾಯಕನಹಳ್ಳಿ ಸಮೀಪದ ಅರಣ್ಯ ಪ್ರದೇಶದಲ್ಲಿ ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿದ್ದ ಗುಂಪಿನ ಮೇಲೆ ಪೊಲೀಸರು ದಾಳಿ ನಡೆಸಿ 5 ಲಕ್ಷ ಮೌಲ್ಯದ 10ಕೆಜಿ 165 ಗ್ರಾಂ ತೂಕದ ಗಾಂಜಾವನ್ನು ವಶಪಡಿಸಿಕೊಂಡು ಮೂವರು ಯುವಕ ರನ್ನು ಬಂಧಿಸಿದ್ದರು. ಈ ಪ್ರಕರಣದಲ್ಲಿ ಓರ್ವ ಆರೋಪಿ ತಪ್ಪಿಸಿಕೊಂಡಿದ್ದ, ಈ ಪ್ರಕರಣ ಮಾಸುವ ಮುನ್ನವೇ ಮತ್ತೊಮ್ಮೆ ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿದ್ದ ಯುವಕನನ್ನು ಪೊಲೀಸರು ವಶಕ್ಕೆ ಪಡೆಯುವ ಮೂಲಕ ಅಕ್ರಮವಾಗಿ ಗಾಂಜಾ ಮಾರಾಟ ಮಾಡುವವರ ಹೆಡೆಮುರಿ ಕಟ್ಟುವ ಕೆಲಸ ಮಾಡಿದ್ದಾರೆ. ಪೊಲೀಸರ ಈ ಕಾರ್ಯಕ್ಕೆ ಸಾರ್ವಜನಿಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.



ಅಕ್ರಮ ಗಾಂಜಾ ಮಾರಾಟ ಮಾಡುತ್ತಿದ್ದ ಆರೋಪಿ ತಂಗರಾಜುವನ್ನು 1.64 ಕೆಜಿ ತೂಕದ ಗಾಂಜಾದೊಂದಿಗೆ ಬಂಧಿಸಿದರು.

ಕಾರ್ಯಾಚರಣೆಯಲ್ಲಿ ಪೊಲೀಸ್ ಸಿಬ್ಬಂದಿಗಳಾದ ತೌಷಿಫ್, ಶಿವರಾಜು, ವರದರಾಜು, ಕುಮಾರ್, ಶೋಭಾ, ಗಿರೀಶ್ ಭಾಗವಹಿಸಿದ್ದರು. ಘಟನೆ ಸಂಬಂಧ ಪಾಂಡವಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಮೀನುಗಾರಿಕೆಗೆ ಬೇಕಿರುವ ಸವಲತ್ತುಗಳನ್ನು ಪಡೆದುಕೊಳ್ಳಿ



ಶ್ರೀರಂಗಪಟ್ಟಣ: ಮೀನುಗಾರರು ಸರ್ಕಾರದ ಮಟ್ಟದಲ್ಲಿ ನೀಡುವ ಸವಲತ್ತುಗಳನ್ನು ಸಮರ್ಪಕವಾಗಿ ಪಡೆದುಕೊಳ್ಳುವಂತೆ ಶಾಸಕ ರಮೇಶ ಬಂಡಿಸಿದ್ದೇಗೌಡ ತಿಳಿಸಿದ್ದಾರೆ.

ಗಂಜಾಂನ ಗಂಗಾಧರೇಶ್ವರ ಮೀನುಗಾರರ ಸಹಕಾರ ಸಂಘದ ಆವರಣದಲ್ಲಿ ಇಲಾಖೆಯಿಂದ ಮೀನುಗಾರರಿಗೆ ಬಲೆ, ದೋಣಿ ಸೇರಿದಂತೆ ವಿವಿಧ ಸವಲತ್ತುಗಳ ವಿತರಿಸಿ, ರಾಜ್ಯವಲಯ ಹಾಗೂ ಜಿಪಂ ಒಳನಾಡು ಮೀನುಗಾರಿಕೆ ಅಭಿವೃದ್ಧಿ ಯೋಜನೆ ಅಡಿ ಸರ್ಕಾರ ಮೀನು ಕೃಷಿ ಮಾಡುವವರಿಗೆ ಅನೇಕ ಸವಲತ್ತುಗಳನ್ನು ನೀಡಲು ಮುಂದಾಗಿದ್ದು, ಪ್ರತಿ ಗ್ರಾಪಂ ವ್ಯಾಪ್ತಿಗೆ ಬರುವ ಕೆರೆ, ನದಿ ಸೇರಿದಂತೆ ಜಮೀನುಗಳಲ್ಲಿ ಹೊಂಡ ತೆಗೆದು ಮೀನು ಕೃಷಿ ಮಾಡುವ ಮೀನುಗಾರರನ್ನು ಗುರುತಿಸಿ ಅವರಿಗೆ ಸರ್ಕಾರದಿಂದ ಬರುವ ಸಲಕರಣೆಗಳನ್ನು ವಿತರಿಸಲಾಗುತ್ತಿದೆ ಎಂದರು.

ಮೀನುಗಾರರು ಬಳಸುವ ಹರಿಗೋಲು, ಬಲೆ. ಹೊಂಡಗಳಲ್ಲಿ ಮೀನುಗಳ ಸಾಕಲು ಉಚಿತವಾಗಿ ಗಿಫ್ಟ್ ತಿಲಾಪಿಯ ಮಾದರಿಯ ಮೀನುಮರಿಗಳನ್ನು ನೀಡಲಾಗುತ್ತಿದೆ. ಇದನ್ನು ಫಲಾನುಭವಿಗಳು ಸದುಪಯೋಗಪಡಿಸಿಕೊಳ್ಳಿ ಜೊತೆಗೆ ಗಂಜಾಂನಲ್ಲಿರುವ ಗಂಗಾಧರೇಶ್ವರ ಮೀನುಗಾರಿಕಾ ಸಹಕಾರ ಸಂಘ ತುಂಬಾ ಹಳೆಯದಾಗಿದ್ದು, ಹಲವಾರು ವರ್ಷಗಳಿಂದ ಮೀನುಗಾರರ ಸಂಘದಲ್ಲಿ ಯೋಗಕ್ಷೇಮಗಳಿಗೆ ಹೆಸರುವಾಸಿಯಾಗಿದೆ. ಇನ್ನಷ್ಟು ಉನ್ನತ ಮಟ್ಟದ ಮಾದರಿ ಸಂಘವನ್ನಾಗಿಸಲು ನಾನು ಸಹಕಾರ ನೀಡುತ್ತೇನೆ ಎಂದರು.

ಮೀನುಗಾರಿಕೆ ಇಲಾಖೆ ಸಹಾಯಕ ನಿರ್ದೇಶಕ ಟಿ.ಡಿ.ಜಗದೀಶ್ ಮಾತನಾಡಿ, ಸರ್ಕಾರ ನಮ್ಮ ಮೀನುಗಾರಿಕೆ ಇಲಾಖೆಯಲ್ಲಿ ಬರುವ ಸವಲತ್ತುಗಳನ್ನು ಒಳನಾಡು ಮೀನುಗಾರಿಕೆ ಅಭಿವೃದ್ಧಿ ಯೋಜನೆಯಲ್ಲಿ ಮೀನುಗಾರರನ್ನು ಗುರುತಿಸಿ ಒದಗಿಸಲಾಗುತ್ತಿದೆ. ಕೃಷಿಕರು ಮೀನುಗಾರರು ಹೆಚ್ಚಿನ ಆಸಕ್ತಿ ತೋರಬೇಕು. ಮೀನುಗಾರಿಕೆ ಸಲಕರಣಾ ಕಿಟ್ ಹಾಗೂ ಲೈಫ್ ಜಾಕಿಟ್‌ಗಳನ್ನು ಪಡೆದುಕೊಳ್ಳಿ ಇದೀಗ ಸುಮಾರು 47 ಮಂದಿ ಫಲಾನು ಭವಿಗಳಿಗೆ ತಲಾ 10 ಸಾವಿರ ರೂಗಳು ತಗಲುವ ವೆಚ್ಚದಲ್ಲಿ ಸಲಕರಣೆಗಳ ನೀಡಲಾಗಿದೆ ಎಂದರು.

ಪುರಸಭೆ ಮಾಜಿ ಪ್ರಭಾರ ಅಧ್ಯಕ್ಷ ಎಂ.ಎಲ್. ದಿನೇಶ್, ಮೀನುಗಾರರ ಸಂಘದ ಅಧ್ಯಕ್ಷ ಈ ಪ್ರಕಾಶ್, ಉಪಾಧ್ಯಕ್ಷ ನಾರಾಯಣ್, ಕಾರ್ಯದರ್ಶಿ ಜಿ.ಎಸ್ ಗೋವಿಂದರಾಜು, ನಿರ್ದೇಶಕರಾದ ಟಿ.ಕೃಷ್ಣ, ಮಂಜು, ಹೊನ್ನಯ್ಯ, ಪಿ. ಕುಮಾರ್, ಮಹದೇವು, ರಮ್ಯಾ, ವಿನಯ್ ಕುಮಾರ್, ರೇಣುಕಾ, ಪುರಸಭೆ ಮಾಜಿ ಅಧ್ಯಕ್ಷರಾದ ಎಲ್. ನಾಗರಾಜು, ಆರ್.ಕೃಷ್ಣ ಸೇರಿದಂತೆ ಇತರ ಸಂಘದ ಸದಸ್ಯರು ಹಾಗೂ ಮೀನುಗಾರರು ಉಪಸ್ಥಿತರಿದ್ದರು.

ವಿದ್ಯುತ್ ಖಾಸಗಿಕರಣ ವಿರೋಧಿಸಿ ಪ್ರತಿಭಟನೆ



ವಿದ್ಯುತ್ ಖಾಸಗಿಕರಣ ವಿರೋಧಿಸಿ ಪಟ್ಟಣದ ಚೆಸ್ಕಾಂ ಕಛೇರಿಯ ಮುಂಭಾಗ ಅಧಿಕಾರಿ, ಸಿಬ್ಬಂದಿ ಪ್ರತಿಭಟನೆ ನಡೆಸಿದರು.

ನಾಗಮಂಗಲ,ಫೆ13– ವಿದ್ಯುತ್ ಖಾಸಗಿಕರಣ ವಿರೋಧಿಸಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ನೌಕರರ ಸಂಘದ ಆಶ್ರಯದಲ್ಲಿ ನೌಕರರು, ವಿದ್ಯುತ್ ಗುತ್ತಿಗೆದಾರರು, ಅಧಿಕಾರಿಗಳು ಪಟ್ಟಣದ ಚೆಸ್ಕಾಂ ಕಛೇರಿಯ ಮುಂಭಾಗ ಪ್ರತಿಭಟನೆ ಮಾಡಿದರು.

ವಿದ್ಯುತ್ ಕಾಯಿದೆಗೆ ತಿದ್ದುಪಡಿ ಬೇಡ, ವಿದ್ಯುತ್ ಕ್ಷೇತ್ರದಲ್ಲಿ ಖಾಸಗಿಕರಣ ಬೇಡ, ಕಾರ್ಮಿಕರ ಒಗ್ಗಟ್ಟು ಚಿರಾಯುವಾಗಲಿ ಎಂಬ ಘೋಷಣೆಗಳನ್ನು ಕೂಗಿ ಗಂಟೆ ಕಾಲ ಪ್ರತಿಭಟಿಸಿ ಗಮನಸೆಳೆದರು. ನೌಕರರ ಸಂಘದ ಅಧ್ಯಕ್ಷ ನಾಗರಾಜು ಮಾತನಾಡಿ, ಕೇಂದ್ರ ಸರ್ಕಾರ ವಿದ್ಯುತ್ ಕ್ಷೇತ್ರವನ್ನು ಖಾಸಗೀಕರಣ ಮಾಡಲು ಹೊರಟಿರುವುದರ ವಿರುದ್ಧ ಆಲ್ ಇಂಡಿಯಾ ಇಂಜಿನಿಯರ್ ಒಕ್ಕೂಟ ಸಂಘ ಸಂಸ್ಥೆಗಳ ಒಂದು ದಿನದ ಮುಷ್ಕರ ಮಾಡುವುದನ್ನು ಬೆಂಬಲಿಸಿ ನಾವು ಪ್ರತಿಭಟನೆ ಮಾಡುತ್ತಿದ್ದೇವೆ. ವಿದ್ಯುತ್ ಸುಧಾರಣೆ ಕಾಯ್ದೆ ಗ್ರಾಹಕರಿಗೆ ನೌಕರರ ವರ್ಗದವರಿಗೆ ಮಾರಕವಾಗಿರುವ ಇದು ಕಾರ್ಮಿಕ ವಿರೋಧಿ ನೀತಿಯಾಗಿದೆ ರೈತರು ಜನಸಾಮಾನ್ಯರಿಗೆ ಹೊರೆಯಾಗಲಿದೆ ಕೃಷಿ ಉದ್ದೇಶಕ್ಕೆ ರೈತರಿಗೆ ನೀಡುತ್ತಿರುವ ಉಚಿತ ವಿದ್ಯುತ್‌ಗೆ ಬಡವರಿಗೆ ನೀಡುತ್ತಿರುವ ಕುಟೀರ ಜ್ಯೋತಿ, ಭಾಗ್ಯಜ್ಯೋತಿ ಮುಂತಾದ ಯೋಜನೆಗಳಿಗೆ ಕಡಿವಾಣ ಹಾಕುವ ಸಾಧ್ಯತೆ ಇದೆ. ಈ ಸಂಸ್ಥೆ ಕಟ್ಟಿ ಬೆಳೆಸಿದ ಸಾವಿರಾರು ಪಿಂಚಣಿ ಜನರಿಗೆ ತೊಂದರೆಯಾಗದ್ದರಿಂದ ಕೇಂದ್ರ ಸರ್ಕಾರ ಯಾವುದೇ ಕಾರಣಕ್ಕೂ ವಿದ್ಯುತ್ ಖಾಸಗಿರಣ ಮಾಡಬಾರದು ಎಂದು ಆಗ್ರಹಿಸಿದರು.

ಕಾರ್ಯಪಾಲಕ ಇಂಜಿನಿಯರ್ ಮಂಜುನಾಥ್ ಮಾತನಾಡುತ್ತಾ ವಿದ್ಯುತ್ ಕ್ಷೇತ್ರ, ರಸ್ತೆ, ಆಸ್ಪತ್ರೆಗಳು ಸೇರಿದಂತೆ ಎಲ್ಲವೂ ಸರ್ಕಾರದ ಒಡೆತನದಲ್ಲಿದೆ ಜನರಿಗೆ ಸೇವೆ ಮಾಡುವುದಕ್ಕೆ ಒಳ್ಳೆಯ ಅವಕಾಶವಿದೆ ಆದ್ದರಿಂದ ಕೇಂದ್ರ ಸರ್ಕಾರ ತೆಗೆದುಕೊಂಡಿರುವ ಕ್ರಮ ಸರಿ ಇಲ್ಲವೆಂದು ಅಭಿಪ್ರಾಯಿಸಿದರು. ಪ್ರತಿಭಟನೆಯಲ್ಲಿ ಮಂಜುನಾಥ್ ಎಸ್, ಶಿವಕುಮಾರ್ ಕೆ, ಅಶೋಕ್, ಎ ಟಿ ಮೋಹನ್, ಸಂಪತ್ ಗಿರಿ ಎಸ್ ಆರ್, ಮಂಜು, ಕರಿಯಪ್ಪ, ಶಂಭು, ಕುಮಾರ, ವಿದ್ಯುತ್ ಗುತ್ತಿಗೆದಾರ ಸಂಘದ ಅಧ್ಯಕ್ಷ ಬೊಮ್ಮರಾಜು, ಶಂಕರ, ಆನಂದ ಮುಂತಾದ ಇಲಾಖೆ ಕಾರ್ಮಿಕರು ಉಪಸ್ಥಿತರಿದ್ದರು.

ಯುಗಾದಿ ಸಂಭ್ರಮ: ವಿವಿಧ ಪ್ರಶಸ್ತಿಗಳಿಗೆ ಆಹ್ವಾನ

ಮಂಡ್ಯ: ಡಾ.ಜೀಶಂಪ ಸಾಹಿತ್ಯ ವೇದಿಕೆ ವತಿಯಿಂದ ಯುಗಾದಿ ಸಂಭ್ರಮ ಅಂಗವಾಗಿ 16ನೇ ಅಖಿಲ ಕರ್ನಾಟಕ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಮಾ.22ರಂದು ಶಂಕರಗೌಡ ಶತಮನೋತ್ಸವ ಭವನದಲ್ಲಿ ಆಯೋಜಿಸಿದ್ದು, ಆಸಕ್ತರಿಂದ ಕವಿಗೋಷ್ಠಿಗೆ ಕವನವನ್ನು ಹಾಗೂ ಪ್ರಶಸ್ತಿಗೆ ಸಾಧಕರಿಂದ ಅರ್ಜಿ ಆಹ್ವಾನಿಸಿದೆ.

ಆಸಕ್ತರು 20 ಸಾಲಿನ ಎರಡು ಕವನಗಳು, ಕಿರುಪರಿಚಯ, ಪೋಟೋ, ಮೊಬೈಲ್ ಸಂಖ್ಯೆ ಹಾಗೂ ವಿಳಾಸವನ್ನು ಫೆ.25 ರೊಳಗೆ ಕಳುಹಿಸಬೇಕು. ವ್ಯಾಟ್ಸಪ್‌ನಲ್ಲಿ ಮೊದಲು ನೋಂದಣಿ ಮಾಡಿಕೊಂಡು, ನಂತರ ಅಂಚೆ ಮೂಲಕ ಕಳುಹಿಸಬೇಕು. ಕವನಗಳು ಯಾವುದಾದರೂ ವಿಷಯವನ್ನು ಒಳಗೊಂಡಿರಬಹುದು.

ಐವತ್ತು ಕವಿಗಳಗೆ ಅವಕಾಶ ಕಲ್ಪಿಸಲಾಗುವುದು. 20 ಉತ್ತಮ ಕವನಗಳಿಗೆ 'ಕಾವ್ಯಶ್ರೀ', 20 ಮಂದಿ ಸಾಧಕರಿಗೆ 'ಕನ್ನಡರತ್ನ', ಜೀವಮಾನ ಸಾಧನೆಗಾಗಿ 10 ಮಂದಿಗೆ 'ಕರ್ನಾಟಕ ಭೂಷಣ' ರಾಜ್ಯ ಮಟ್ಟದ ಪ್ರಶಸ್ತಿಗಳನ್ನು ನೀಡಿ ಗೌರವಿಸಿ, ಅತ್ಯತ್ತಮ ಸಾಧಕರನ್ನು ಸಮ್ಮೇಳನಾಧ್ಯಕ್ಷರನ್ನಾಗಿ ಆಯ್ಕೆ ಮಾಡಿ ಗೌರವಿಸಲಾಗುವುದು. ಮಾಹಿತಿಗೆ 9448424380ನ್ನು ಸಂಪರ್ಕಿಸಿ.

ಒಂದನೇ ಪುಟದಿಂದ

ನಕಲಿ ಟಿಪ್ಪಣಿ

ಮತ್ತು ಸೆಕ್ಷನ್ 340(2) ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯಾಗಿ ಮಂಡ್ಯ ಜಿಲ್ಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಡಾ.ಕೆ.ಮೋಹನ್ ಅವರನ್ನು ಮೈಸೂರು ಅಬಕಾರಿ ಉಪ ಆಯುಕ್ತರಾಗಿ ನಿಯೋಜಿಸುವ ಕುರಿತು ಟಿಪ್ಪಣಿಯು ಸಾಮಾಜಿಕ ಜಾಲತಾಣಗಳಲ್ಲಿ ಹಾಗೂ ಮಾಧ್ಯಮಗಳಲ್ಲಿ ಹರಿದಾಡುತ್ತಿರುವುದನ್ನು ಗಮನಿಸಲಾಗಿದೆ ಎಂದು ಸಿಎಂ ಜಂಟಿ ಕಾರ್ಯದರ್ಶಿ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಅಧಿಕೃತ ಸಂಖ್ಯೆ ಮತ್ತು ದಿನಾಂಕವಿಲ್ಲದ ಈ ಟಿಪ್ಪಣಿಯು ಮುಖ್ಯಮಂತ್ರಿಯವರ ಸಚಿವಾಲಯದ ಇ–ತಂತ್ರಾಂಶ(ಇ–Office)ದಲ್ಲಿ ನೋಂದಾಯಿಸಿರುವುದಿಲ್ಲ ಹಾಗೂ ಟಿಪ್ಪಣಿಯನ್ನು ಯಾವುದೇ ಇಲಾಖೆಗೆ ರವಾನಿಸಿರುವುದಿಲ್ಲ. ಇದರ ಆಧಾರದಲ್ಲಿ ಯಾವುದೇ ವರ್ಗಾವಣೆ/ನಿಯೋಜನೆ ಆದೇಶ ಸಹ ಹೊರಡಿಸಿರುವುದಿಲ್ಲ. ಆದಾಗ್ಯೂ ಮುಖ್ಯಮಂತ್ರಿಯವರಿಗೆ ಹಾಗೂ ಸರ್ಕಾರಕ್ಕೆ ಕೆಟ್ಟ ಹೆಸರನ್ನು ತರುವ ದುರುದ್ದೇಶದಿಂದ ಈ ತರಹದ ಕೃತ್ಯವನ್ನು ಎಸಗಿರುವುದು ಕಂಡುಬಂದಿರುವುದರಿಂದ, ಈ ಬಗ್ಗೆ ಸೂಕ್ತ ತನಿಖೆ ನಡೆಸಿ ತಪ್ಪಿತಸ್ಥರನ್ನು ಪತ್ತೆಹಚ್ಚಿ ತುರ್ತಾಗಿ ಕಾನೂನು ಕ್ರಮ ಕೈಗೊಳ್ಳುವಂತೆ ದೂರು ನೀಡಿದ್ದಾರೆ. ಇದಕ್ಕೂ ಮುನ್ನಾ ಬಿಜೆಪಿಯ ಹಿರಿಯ ಶಾಸಕ ಸುನೀಲ್ ಕುಮಾರ್, ಪತ್ರವನ್ನು ಪೋಸ್ಟ್ ಮಾಡಿ, ಸಿಎಂ ಸಿದ್ದರಾಮಯ್ಯನವರ ಹಳಿ ತಪ್ಪಿದ ಆಡಳಿತದ ಕ್ಲಾಸಿಕ್ ಉದಾಹರಣೆ ಎಂದಿದ್ದರು.

ಮೂರ್‍ನಾಲ್ಕು ದಿನಗಳಲ್ಲಿ ಲೋಕಾಯುಕ್ತಕ್ಕೆ ದೂರು

ಇಂದಿನ ಎಂಡಿಎ ನಡುವೆ ಯಾವ ವ್ಯತ್ಯಾಸವಿಲ್ಲ. ದಂಧೆ ಹಾಗೆಯೇ ಮುಂದುವರೆದಿದೆ. ಭ್ರಷ್ಟಾಚಾರದ ವಾಸನೆ ವ್ಯಾಪಿಸುತ್ತಿದೆ. ಕಳೆದ ಸೆಪ್ಟೆಂಬರ್ 16ರಿಂದ ಮುಡಾದ ಮಾಜಿ ಆಯುಕ್ತ ದಿನೇಶ್ ಜೈಲಿನಲ್ಲಿದ್ದಾರೆ. 1055 ನಿವೇಶನಗಳನ್ನು ಇಡಿ ಮುಟ್ಟುಗೋಲು ಹಾಕಿಕೊಂಡಿದೆ. 14 ನಿವೇಶನಗಳನ್ನು ಮುಖ್ಯಮಂತ್ರಿಗಳ ಕುಟುಂಬ ವಾಪಸ್ ನೀಡಿದೆ. ಇಷ್ಟೆಲ್ಲಾ ಆದರೂ ಎಂಡಿಎಯಲ್ಲಿ ಕಾನೂನು ಬಾಹಿರ ಕೆಲಸ ಮಾಡುವ ಧೈರ್ಯ ಮಾಡುತ್ತಿದ್ದಾರೆ ಎಂದರೆ ಅಚ್ಚರಿ ಆಗುತ್ತದೆ ಎಂದಿದ್ದಾರೆ.

ಕ್ರಿಮಿನಲ್ ಪ್ರಕರಣ ದಾಖಲಿಸಬೇಕು: ಎಂಡಿಎ ರಚನೆ ನಂತರ ಖಾಯಂ ಅಧ್ಯಕ್ಷರು, ನಾಲ್ವರು ಸದಸ್ಯರು, ವಿಧಾನಮಂಡಲ ಸದಸ್ಯರು ಸೇರಿದಂತೆ 19 ಜನರನ್ನು ಸಮಿತಿಗೆ ನೇಮಿಸಬೇಕಿತ್ತು. ಆದರೆ ಪ್ರಸ್ತುತ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಅವರ ಕೈಕೆಳಗಿನ 7 ಮಂದಿ ಅಧಿಕಾರಿಗಳು ಹಾಗೂ ಬೆಂಗಳೂರಿನ ಕೃಷ್ಣಮೂರ್ತಿ ಎಂಬುವರು ಸೇರಿ ಒಟ್ಟು 9 ಜನ ಸಮಿತಿಯಲ್ಲಿದ್ದಾರೆ. ಜಿಲ್ಲಾಧಿಕಾರಿಗಳ ನಿರ್ಣಯವನ್ನು ಉಳಿದ ಅಧಿಕಾರಿಗಳು ಧಿಕ್ಕರಿಸುವುದಿಲ್ಲ. ಇನ್ನು ಕೃಷ್ಣಮೂರ್ತಿ ಅವರ ಮೇಲೆ ಪ್ರಭಾವಿಗಳು ಒತ್ತಡ ತಂದು ಈ ನಿರ್ಣಯವನ್ನು ಒಪ್ಪಿಸಿರಬೇಕು. ಈ ಕೆಲಸ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಅವರಿಂದ ಮಾತ್ರ ಸಾಧ್ಯವಾಗುತ್ತದೆ. ಒಂದು ವೇಳೆ ಭೈರತಿ ಸುರೇಶ್ ಅವರು ಭಾಗಿಯಾಗಿಲ್ಲ ಎಂದಾದರೆ ಈ ಅಕ್ರಮದ ವಿರುದ್ಧ ಕ್ರಮ ಕೈಗೊಳ್ಳಬೇಕು. ಇಲ್ಲವಾದರೆ ಅವರೇ ಸಂಪೂರ್ಣ ಜವಾಬ್ದಾರರಾಗುತ್ತಾರೆ. ಪೂರ್ಣ ಪ್ರಮಾಣದ ಆಡಳಿತ ಮಂಡಳಿ ಇದ್ದರೂ ಇಂತಹ ಕಾನೂನು ಬಾಹಿರ ನಿರ್ಣಯ ಮಾಡಲು ಅವಕಾಶವಿಲ್ಲ. ಆದ್ದರಿಂದ ಈ ನಿರ್ಣಯ ಕೈಗೊಂಡ ಸಭೆಯಲ್ಲಿ ಹಾಜರಿದ್ದ ಎಲ್ಲರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಾಗಬೇಕು. ಅಧಿಕಾರಿಗಳನ್ನು ಅಮಾನತುಗೊಳಿಸಿ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ಮಾರ್ಪಾಡಿಗೆ ಅವಕಾಶವೇ ಇಲ್ಲ: 2016ರಲ್ಲಿ ಮುಖ್ಯಮಂತ್ರಿಯಾಗಿದ್ದ ಹಾಲಿ ಸಿಎಂ ಸಿದ್ದರಾಮಯ್ಯನವರ ನೇತೃತ್ವದಲ್ಲಿ 2031ರವರೆಗೂ ಬದಲಾವಣೆಗೆ ಅವಕಾಶವಿಲ್ಲದಂತೆ ನಿಯಮ ರೂಪಿಸಿಕೊಳ್ಳಲಾಗಿದೆ. ವಿಶೇಷ ವ್ಯವಸಾಯ ವಲಯದಲ್ಲಿ ಯಾವ ಚಟುವಟಿಕೆ ಮಾಡಬಹುದು ಹಾಗೂ ಮಾಡಬಾರದು ಎಂಬುದನ್ನು ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ. ಒಂದು ಮನೆ, ಅನಾಥಾಶ್ರಮ, ಶಿಕ್ಷಣ ಸಂಸ್ಥೆ ನಿರ್ಮಿಸಲು ಅವಕಾಶವಿದೆ. ಆದರೆ 2025ರ ಆಗಸ್ಟ್ 8ರಂದು ಎಂಡಿಎ ಪ್ರಥಮ ಸಭೆಯಲ್ಲಿ ವಿಶೇಷ ವ್ಯವಸಾಯ ವಲಯದಿಂದ ವಸತಿ ವಲಯವಾಗಿ ಮಾರ್ಪಾಡು ಮಾಡಲು ನಿರ್ಣಯಿಸಿ, ಅನುಮತಿಗಾಗಿ ರಾಜ್ಯ ಸರ್ಕಾರಕ್ಕೆ ಶಿಫಾರಸು ಮಾಡಿದ್ದಾರೆ. ಆದರೆ ಅಲ್ಲಿ ವ್ಯವಸಾಯ ನಡೆಯುತ್ತಿಲ್ಲ ಎಂಬ ಕಾರಣ ನೀಡಿ ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಮಾರ್ಪಾಡು ಮಾಡಬಹುದು ಎಂದು ಆಯುಕ್ತರು ಅಭಿಪ್ರಾಯಿಸಿರುವ ಹಿನ್ನೆಲೆಯಲ್ಲಿ ನಿರ್ಣಯ ಮಾಡಿದ್ದಾರೆ. ಆದರೆ ಇದು ಮೈಸೂರು ಹಿತದೃಷ್ಟಿಯಿಂದ ನಾವೇ ರಚಿಸಿಕೊಂಡಿರುವ ಕಾನೂನಿನ ಸ್ಪಷ್ಟ ಉಲ್ಲಂಘನೆಯಾಗಿದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಸ್ವಜನ ಪಕ್ಷಪಾತ: ಹಾಲಿ ಎಂಎಲ್‌ಸಿ ಮಧು ಮಾದೇಗೌಡರ ಹೆಸರಿನಲ್ಲಿ 4 ಎಕರೆ 27 ಗುಂಟೆಯನ್ನು ವಿಶೇಷ ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಮಾರ್ಪಾಡು ಮಾಡಲು 2025ರ ಜುಲೈ 14ರಂದು ಪತ್ರಿಕಾ ಪ್ರಕಟಣೆ ಬಂದಿದೆ. ಇದನ್ನು ಶಿಫಾರಸು ಮಾಡಲಾಗದು ಎಂದು ಎಂಡಿಎ ಆಯುಕ್ತರು ಸ್ಪಷ್ಟೀಕರಣ ನೀಡಬೇಕಿತ್ತು. ಆದರೆ ಇವರು ಮಧು ಮಾದೇಗೌಡರ ರಕ್ತ ಸಂಬಂಧಿಯಾದ ಕಾರಣಕ್ಕೆ ಸ್ವಜನಪಕ್ಷಪಾತದಿಂದ ಕ್ರಮ ವಹಿಸಿದ್ದಾರೆ. ಈ ಪ್ರಕರಣ ಸೇರಿದಂತೆ ಕಾನೂನು ಬಾಹಿರವಾಗಿ 500 ಕೋಟಿ ಮೌಲ್ಯದ 47 ಎಕರೆ ಭೂಮಿಯನ್ನು ವಸತಿ ವಲಯಕ್ಕೆ ಭೂ ಪರಿವರ್ತನೆ ಮಾಡಿರುವುದೆಲ್ಲಾ ಬಯಲಾಗಬೇಕು. ಕಾನೂನು ಬಾಹಿರ ನಿರ್ಣಯ ಕೈಗೊಂಡವರ ವಿರುದ್ಧ ಶಿಸ್ತು ಕ್ರಮ ಆಗಬೇಕು ಎಂದು ಆಗ್ರಹಿಸಿದ್ದಾರೆ.

ಯೋಜನೆಗೆ ಮಾರ್ಗಸೂಚಿ

ರಾಜ್ಯಗಳ ವ್ಯಾಪ್ತಿಯ ಯೋಜನೆಗಳ ಮೌಲ್ಯಮಾಪನಕ್ಕಾಗಿ ಈ ಮಾರ್ಗಸೂಚಿ ಪ್ರಕಟಿಸಲಾಗಿದೆ' ಎಂದರು. ಮೌಲ್ಯ ಮಾಪನಕ್ಕಾಗಿ ಮೇಕೆದಾಟು ಯೋಜನೆಯ ವಿಸ್ತೃತ ಯೋಜನಾ ವರದಿಯನ್ನು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದಿಂದ ಜಲ ಆಯೋಗ ಸ್ವೀಕರಿಸಿದೆ ಯೋಜನೆ ಅನುಷ್ಠಾನಗೊಳಿಸುವ ಮೊದಲು ಕರ್ನಾಟಕ ಸರ್ಕಾರವು ಸಂಬಂಧಪಟ್ಟ ಇಲಾಖೆಗಳಿಂದ ಪರಿಸರ ಅನುಮತಿ ಸೇರಿದಂತೆ ಎಲ್ಲಾ ಶಾಸನಬದ್ಧ ಅನುಮೋದನೆಗಳನ್ನು ಪಡೆಯಬೇಕು ಎಂದು ತಿಳಿಸಿದ್ದಾರೆ.

ಭಾರತ–ಪಾಕ್ ಹೈವೋಲ್ಟೇಜ್ ಪಂದ್ಯಕ್ಕೆ ಮಳೆ ಅಡ್ಡಿ ಸಾಧ್ಯತೆ

ಕೊಲಂಬೋ: ಭಾರತ ಮತ್ತು ಪಾಕಿಸ್ತಾನ ನಡುವಿನ ಹೈವೋಲ್ಟೇಜ್ ಪಂದ್ಯಕ್ಕೆ ಮಳೆ ಅಡ್ಡಿಯಾಗುವ ಸಾಧ್ಯತೆಯಿದೆ. ಶ್ರೀಲಂಕಾದ ಕೊಲಂಬೋದಲ್ಲಿ ಫೆ.15ರಂದು ಭಾರತೀಯ ಕಾಲಮಾನ ಸಂಜೆ 7 ಗಂಟೆಗೆ ಪಂದ್ಯ ನಿಗದಿಯಾಗಿದೆ. ಆದರೆ ಬಂಗಾಳಕೊಲ್ಲಿಯ ಆಗ್ನೇಯ ಭಾಗದಲ್ಲಿ ಕಡಿಮೆ ಒತ್ತಡ ರೂಪುಗೊಳ್ಳುವ ಸಾಧ್ಯತೆಯಿರುವುದರಿಂದ ಪಂದ್ಯಕ್ಕೂ ಮುನ್ನ ಮಳೆ ಸುರಿಯಬಹುದು ಎಂದು ಹವಾಮಾನ ವರದಿಗಳು ತಿಳಿಸಿವೆ.

ಅಕ್ಯೂವೆದರ್ ಪ್ರಕಾರ, ಪಂದ್ಯ ಪ್ರಾರಂಭವಾಗುವ ಎರಡು ಗಂಟೆಗಳ ಮೊದಲು ಸಂಜೆ 5 ಗಂಟೆಯ ಸುಮಾರಿಗೆ ಮಳೆಯಾಗುವ ಸಾಧ್ಯತೆಯಿದೆ. ಆದರೆ ಪಂದ್ಯ ನಡೆಯುವ ವೇಳೆ ಮಳೆ ಬರುವ ಸಾಧ್ಯತೆ ಕಡಿಮೆ ಎನ್ನಲಾಗಿದೆ.

ಆದ್ಯತೆ ನೀಡಿದ್ದರು

ಕರ್ನಾಟಕದಲ್ಲಿ 231 ನಿರ್ದಿಷ್ಟ ಅಣೆಕಟ್ಟುಗಳಿದ್ದು ದೇಶದಲ್ಲಿ ಆರನೇ ಸ್ಥಾನದಲ್ಲಿದೆ. ಅಣೆಕಟ್ಟು ಸುರಕ್ಷತೆ ಕುರಿತ ಚರ್ಚೆಗಳು ಅನುಭವ ಮತ್ತು ಜವಾಬ್ದಾರಿಯನ್ನೂ ಹೊಂದಿರುತ್ತವೆ. ಸಮ್ಮೇಳನ ಜಾಗತಿಕ ಚೇತನ ಪ್ರತಿಬಿಂಬಿಸುತ್ತದೆ. ವಿವಿಧ ದೇಶಗಳ ತಜ್ಞರು, ನೀತಿ ನಿರೂಪಕರು ಒಟ್ಟುಗೂಡಿ ಅಣೆಕಟ್ಟು ಸುರಕ್ಷತೆ ಮತ್ತು ಸುಸ್ಥಿರ ಜಲ ಸಂಪನ್ಮೂಲ ನಿರ್ವಹಣೆ ಜವಾಬ್ದಾರಿ ಕುರಿತು ಚರ್ಚಿಸಲಿದ್ದಾರೆ.

ತುರ್ತು ಕಾರ್ಯಾಚರಣೆ ಅಗತ್ಯತೆ: ಜಲಾಶಯಗಳು ಕಾಂಕ್ರೀಟ್ ಮತ್ತು ಉಕ್ಕಿನ ರಚನೆ ಮಾತ್ರವಲ್ಲ ಭಾರತದ ಮೊದಲ ಪ್ರಧಾನಿ ಪಂಡಿತ್ ಜವಾಹರಲಾಲ್ ನೆಹರೂ ಅಣೆಕಟ್ಟೆಗಳನ್ನು ಆಧುನಿಕ ಭಾರತದ ದೇವಾಲಯಗಳು ಎಂಬುದಾಗಿ ಕರೆದಿದ್ದರು. ಇವು ಸಾಮೂಹಿಕ ಆಕಾಂಕ್ಷೆ, ಕೃಷಿ ಸಮೃದ್ಧಿ ಮತ್ತು ಕೈಗಾರಿಕಾ ಪ್ರಗತಿಯ ಜೀವಾಳವಾಗಿವೆ.

ದೇಶದಲ್ಲಿ ಶೇಕಡಾ 70ರಷ್ಟು ಅಣೆಕಟ್ಟೆಗಳು ನಿರ್ಮಾಣಗೊಂಡು 25 ವರ್ಷಗಳಿಗೂ ಹೆಚ್ಚು ಹಳೆಯದಾಗಿದ್ದು, ಇವುಗಳ ಸುರಕ್ಷಾ ಮೌಲ್ಯಮಾಪನ ಅಪಾಯ ಮುನ್ಸೂಚನೆಗಳಿಗೆ ತುರ್ತು ಕಾರ್ಯಾಚರಣೆಯ ಅಗತ್ಯತೆಯನ್ನು ಸಾರುತ್ತದೆ. ಹವಾಮಾನ ಬದಲಾವಣೆಯಿಂದಾಗುವ ನೀರಿನ ವೈಪರೀತ್ಯಗಳನ್ನು ಎದುರಿಸುತ್ತಿದ್ದು, ಭೂಕಂಪನಗಳು, ಜಲಾಶಯ ಹೂಳು ಶೇಖರಣೆ, ಹಳೆಯದಾದ ನಿರ್ಮಾಣಗಳ ಮೇಲಿನ ಒತ್ತಡದ ಅಪಾಯಗಳನ್ನು ಸೃಷ್ಟಿಸಿವೆ ಎಂದರು.

ಯೋಜನೆ ಜಾರಿ

400 ಮೆ.ವ್ಯಾಟ್ ವಿದ್ಯುತ್ ಉತ್ಪಾದನೆಗೆ ಸಹಕಾರಿಯಾಗಲಿದೆ. ಕೃಷ್ಣಾ ಮೇಲ್ದಂಡೆ ಯೋಜನೆ ವಿಚಾರದಲ್ಲಿ ಪಾರದರ್ಶಕ ನೀತಿ ತಂದಿದ್ದು, ಭೂಮಿ ಕಳೆದುಕೊಳ್ಳುವ ರೈತರಿಗೆ 2013ರ ಕಾಯ್ದೆ ಅನುಸಾರ ಉತ್ತಮ ಪರಿಹಾರ ನೀಡಲು ತೀರ್ಮಾನಿಸಲಾಗಿದೆ. 2025ರ ಡಿಸೆಂಬರ್ ವೇಳೆಗೆ ರಾಜ್ಯದಲ್ಲಿ 1.72 ಲಕ್ಷ ಎಕರೆ ಕೃಷಿ ಭೂಮಿಗೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ.


ಅಣೆಕಟ್ಟುಗಳ ನಿರ್ಬಂಧ ಸಡಿಲಿಸಿದರೆ ಒಳ್ಳೆಯದು: ಅಣೆಕಟ್ಟು ಸುರಕ್ಷತಾ ಮಾರ್ಗಸೂಚಿಯಲ್ಲಿ ಅಣೆಕಟ್ಟಿನ ಸುತ್ತ 500 ಮೀಟರ್‌ವರೆಗೆ ವಿಧಿಸಲಾಗಿರುವ ನಿಬಂಧನೆ ಸಡಿಲಗೊಳಿಸಿದರೆ ಜಲಾಶಯಗಳ ಬಳಿ ಪ್ರವಾಸೋದ್ಯಮಕ್ಕೆ ಅವಕಾಶ ಕಲ್ಪಿಸಿ ಸ್ಥಳೀಯ ಆರ್ಥಿಕತೆಗೆ ನೆರವಾಗಲು ಮನವಿ ಮಾಡುತ್ತೇನೆ. ಅಣೆಕಟ್ಟೆಗಳು ದೇಶದ ಶಕ್ತಿ ಹಾಗೂ ಪ್ರಗತಿಯ ಪ್ರತೀಕ, ರೈತರನ್ನು ಸಶಕ್ತರನ್ನಾಗಿ ಮಾಡುತ್ತವೆ. ಸ್ವಚ್ಛ ಇಂಧನ ಸೃಷ್ಟಿಸಿ, ಸಮುದಾಯವನ್ನು ಕಾಯುತ್ತಿವೆ. ನಮ್ಮ ಪೀಳಿಗೆಯನ್ನು ಸುಸ್ಥಿರವಾಗಿಟ್ಟು ಕಾಪಾಡುತ್ತಿರುವ ರಕ್ಷಕನಂತೆ ಕಾರ್ಯನಿರ್ವಹಿಸುತ್ತಿವೆ. ನೀರು ಸಮೃದ್ಧವಾದಷ್ಟು, ನಾಗರಿಕತೆ ಅಭಿವೃದ್ಧಿಯಾಗುತ್ತದೆ. ನಮ್ಮ ಅನೇಕ ಅಣೆಕಟ್ಟೆಗಳು 60–70 ವರ್ಷಗಳ ಹಳೆಯದಾಗಿದ್ದು ದುರಸ್ತಿ ಕಾಮಗಾರಿ ಅಗತ್ಯವಾಗಿವೆ. ಅತಿಯಾದ ಮಳೆ, ಪ್ರವಾಹ ದೇಶದೆಲ್ಲೆಡೆ ಸಮಸ್ಯೆಯಾಗಿ ತಲೆದೋರಿವೆ ಎಂದರು.

20 ಕೆಎಎಸ್ ಅಧಿಕಾರಿಗಳಿಗೆ ಬಡ್ತಿ

ಆರ್.ರಂಗಸ್ವಾಮಿ, ಕೆಐಎಡಿಬಿ(ಬೆಂಗಳೂರು) ವಿಶೇಷ ಭೂಸ್ವಾಧೀನಾಧಿಕಾರಿ ಹೆಚ್.ಎನ್.ಶಿವೇಗೌಡ, ಬಿಡಿಎ ವಿಶೇಷ ಭೂಸ್ವಾಧೀನಾಧಿಕಾರಿ ಕೆ.ಎನ್.ಪ್ರವೀಣ್, ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ ನಿರ್ದೇಶಕ ಎನ್.ಎಸ್.ಚಿದಾನಂದ, ಧಾರವಾಡ ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಅಜೀಜ್ ದೇಸಾಯಿ, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಉಪ ಆಯುಕ್ತ ರವೀಂದ್ರ ಕರಿಲಿಂಗಣ್ಣನವರ, ಕೆಐಎಡಿಬಿ (ಮಂಗಳೂರು) ವಿಶೇಷ ಭೂಸ್ವಾಧೀನಾಧಿಕಾರಿ ಆರ್.ಮೇಘನಾ, ಕೃಷಿ ಇಲಾಖೆ ಜಂಟಿ ನಿರ್ದೇಶಕ ಹೆಚ್.ಜಿ.ಚಂದ್ರಶೇಖರಯ್ಯ, ಕಾರವಾರ ಅಪರ ಜಿಲ್ಲಾಧಿಕಾರಿ ಸಾಜೀದ್ ಅಹಮದ್ ಮುಲ್ಲಾ, ಧಾರವಾಡ ಕೃಷಿ ವಿಶ್ವವಿದ್ಯಾನಿಲಯದ ಕುಲಸಚಿವೆ ಜಯಶ್ರೀ ಶಿಂತ್ರಿ, ವಿಜಯಪುರ ಅಪರ ಜಿಲ್ಲಾಧಿಕಾರಿ ಡಾ.ಔದ್ರಾಮ, ಮಂಗಳೂರು ಮಹಾನಗರ ಪಾಲಿಕೆ ಆಯುಕ್ತ ರವಿಚಂದ್ರ ನಾಯಕ್, ಆರ್ಥಿಕ ಇಲಾಖೆ ಉಪ ಕಾರ್ಯದರ್ಶಿ ಅರುಳ್ ಕುಮಾರ್, ಬೆಂಗಳೂರು ಪೂರ್ವ ಮಹಾನಗರ ಪಾಲಿಕೆ ವಲಯ ಜಂಟಿ ಆಯುಕ್ತೆ ಡಾ.ಕೆ.ದಾಕ್ಷಾಯಿಣಿ ಹಾಗೂ ಧಾರವಾಡ ಅಪರ ಜಿಲ್ಲಾಧಿಕಾರಿ ಸಿ.ಡಿ.ಗೀತಾ.

ನಟೇಶ್ ವಿರುದ್ಧ ಅಕ್ರಮ ಆರೋಪ: ಡಿ.ಬಿ.ನಟೇಶ್ ಅವರು ಮುಡಾ ಮಾಜಿ ಆಯುಕ್ತರಾಗಿದ್ದಾಗ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪತ್ನಿ ಪಾರ್ವತಿ ಅವರಿಗೆ ಅಕ್ರಮವಾಗಿ 14 ನಿವೇಶನಗಳನ್ನು ಹಂಚಿಕೆ ಮಾಡಿದ ಆರೋಪವಿದೆ. ಇವರ ಅವಧಿಯಲ್ಲಿ ನಿವೇಶನ ಮಂಜೂರಾತಿ, ಮತ್ತು ಖಾತೆ ಪ್ರಕ್ರಿಯೆ ನಡೆದಿದ್ದ ಹಿನ್ನೆಲೆಯಲ್ಲಿ ಜಾರಿ ನಿರ್ದೇಶನಾಲಯ(ಇಡಿ) ದಾಳಿ ನಡೆಸಿ ದಾಖಲೆಗಳನ್ನು ವಶಪಡಿಸಿಕೊಂಡಿತ್ತು. ನಂತರ ನಟೇಶ್ ನಿವಾಸದಲ್ಲೂ ಪರಿಶೀಲನೆ ನಡೆಸಿ, ದಾಖಲೆಗಳನ್ನು ಪರಿಶೀಲಿಸಿದ್ದರು. ಇಡೀ ಕ್ರಮವನ್ನು ಪ್ರಶ್ನಿಸಿ ನಟೇಶ್, ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ನಟೇಶ್ ನಿವಾಸದ ಮೇಲಿನ ಇಡಿ ಶೋಧವನ್ನು ಹೈಕೋರ್ಟ್ ಕಾನೂನು ಬಾಹಿರ ಎಂದು ಘೋಷಿಸಿತ್ತಾದರೂ ತನಿಖೆ ಮುಂದುವರಿಸಲು ಅನುಮತಿ ನೀಡಿತು. ನಟೇಶ್ ವಿರುದ್ಧ ಪ್ರಾಸಿಕ್ಯೂಷನ್(ವಿಚಾರಣೆ)ಗೆ ರಾಜ್ಯ ಗೃಹ ಇಲಾಖೆ ಅನುಮತಿ ನೀಡಿತು. ಮತ್ತೊಂದೆಡೆ ಇದೇ ಪ್ರಕರಣದಲ್ಲಿ ಲೋಕಾಯುಕ್ತ ವಿಚಾರಣೆಗೂ ನಟೇಶ್ ಹಾಜರಾಗಿದ್ದರು. ಇದೆಲ್ಲದರ ನಡುವೆಯೂ ಡಿ.ಬಿ.ನಟೇಶ್ ಹುದ್ದೆ ಉನ್ನತೀಕರಣಕ್ಕೆ ಸರ್ಕಾರ ಸದ್ದಿಲ್ಲದೇ ತಯಾರಿ ನಡೆಸಿರುವ ಬಗ್ಗೆ 15 ದಿನಗಳ ಹಿಂದೆಯೇ ವರದಿಯಾಗಿತ್ತು.

ಸಾರಾ ಮಹೇಶ್ ಈಗ ಚಿತ್ರ ನಿರ್ಮಾಪಕರು!




ಸಂಗೀತಾ


ಪ್ರಿಯಾಂಕಾ

ಮಾಜಿ ಸಚಿವ ಹಾಗೂ ಜೆಡಿಎಸ್ ನಾಯಕ ಸಾ.ರಾ. ಮಹೇಶ್ ಅವರು ನಿರ್ಮಾಪಕರಾಗಿ ಕನ್ನಡ ಚಿತ್ರರಂಗಕ್ಕೆ ಅಡಿಯಿಟ್ಟಿದ್ದಾರೆ.

ಕಿರಣ್ ವಿಶ್ವನಾಥ್ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಹೊಸ ಚಿತ್ರಕ್ಕೆ ಸಾ.ರಾ.ಮಹೇಶ್ ನಿರ್ಮಾಪಕರಾಗಿದ್ದು, ಚಿತ್ರದ ಚಿತ್ರೀಕರಣ ಭರದಿಂದ ಸಾಗಿದೆ. ಗೌರಿ ಆರ್ಟ್ಸ್ ಬ್ಯಾನರ್ ಅಡಿಯಲ್ಲಿ ನಿರ್ಮಾಣವಾಗುತ್ತಿರುವ ಈ ಚಿತ್ರದಲ್ಲಿ ದೊಡ್ಡ ತಾರಾಬಳಗವೇ ಇದೆ. ಹೊಸ ಪ್ರತಿಭೆಗಳ ಪರಿಚಯದ ಜೊತೆಗೆ ಹಲವು ವರ್ಷಗಳಿಂದ ಚಿತ್ರರಂಗದಿಂದ ದೂರ ಉಳಿದಿದ್ದ ಕಲಾವಿದರು ಈ ಚಿತ್ರದ ಮೂಲಕ ಕಮ್‌ಬ್ಯಾಕ್ ಮಾಡುತ್ತಿರುವುದು ವಿಶೇಷ.

ಮಹಾನಟಿ ಖ್ಯಾತಿಯ ಪ್ರಿಯಾಂಕಾ ಆಚಾರ್ ಚಿತ್ರದ ನಾಯಕಿಯಾಗಿದ್ದಾರೆ. ತರುಣ್ ಕಿಶೋರ್ ನಿರ್ಮಾಣದ 'ಏಳುಮಲೆ' ಚಿತ್ರದಲ್ಲಿ ಉತ್ತಮ ಅಭಿನಯದ ಮೂಲಕ ಪ್ರೇಕ್ಷಕರ ಗಮನ ಸೆಳೆದಿರುವ ಇವರು, ಮತ್ತೆ ಬೆಳ್ಳಿತೆರೆಯಲ್ಲಿ ಮಿಂಚಲು ಸಿದ್ಧವಾಗಿದ್ದಾರೆ. ಇನ್ನು 'ಯಾರೇ ನೀನು ಚೆಲುವೆ' ಹಾಗೂ 'ಯಾರೇ ನೀ ಅಭಿಮಾನಿ' ಚಿತ್ರಗಳಲ್ಲಿ ಮನೋಜ್ಞವಾಗಿ ಅಭಿನಯಿಸಿದ್ದ ನಟಿ ಸಂಗೀತಾ ಮಾಧವನ್, ಈ ಚಿತ್ರದಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತಿದ್ದಾರೆ. ಈ ಮುಖೇನ ಎರಡು ದಶಕಗಳಿಗೂ ಹೆಚ್ಚು ಕಾಲ ಕನ್ನಡ ಚಿತ್ರರಂಗದಿಂದ ದೂರ ಉಳಿದಿದ್ದ ಅವರು, ಮತ್ತೆ ಸ್ಯಾಂಡಲ್‌ವುಡ್‌ಗೆ ಮರಳುತ್ತಿದ್ದಾರೆ.

ಈ ಹಿಂದೆ 'ರನ್ನ' ಮತ್ತು 'ವಿಕ್ಟರಿ' ಸೇರಿದಂತೆ ಹಲವು ಚಿತ್ರಗಳಲ್ಲಿ ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡಿರುವ ಕಿರಣ್ ವಿಶ್ವನಾಥ್, ಸಾ.ರಾ.ಮಹೇಶ್ ನಿರ್ಮಾಣದ ಸಿನಿಮಾ ಮೂಲಕ ಪೂರ್ಣ ಪ್ರಮಾಣದ ನಿರ್ದೇಶಕರಾಗಿ ಪ್ರತಿಭೆ ಅನಾವರಣಕ್ಕೆ ಮುಂದಾಗಿದ್ದಾರೆ. ನಿರ್ದೇಶಕ ಹಾಗೂ ನಿರ್ಮಾಪಕರಿಬ್ಬರಿಗೂ ಇದು ಚೊಚ್ಚಲ ಚಿತ್ರವಾಗಿದ್ದು, ಇತ್ತೀಚೆಗಷ್ಟೇ ಬಿಡುಗಡೆಯಾದ ಪ್ರಮೋಷನಲ್ ಟೀಸರ್‌ನಲ್ಲಿ ಸಾರಾ ಮಹೇಶ್ ಅವರನ್ನು ನಿರ್ಮಾಪಕರಾಗಿ ಪರಿಚಯಿಸಲಾಗಿದೆ.

ಚಿತ್ರದಲ್ಲಿ ಲವ್ ಸ್ಟೋರಿ ಜೊತೆಗೆ ಪ್ರೇಕ್ಷಕರನ್ನು ಸೆಳೆಯುವ ಸೆಂಟಿಮೆಂಟ್ ಸಮ್ಮಿಳಿತಗೊಂಡಿದೆ. ಅದ್ಧೂರಿಯಾಗಿ ನಿರ್ಮಾಣಗೊಳ್ಳುತ್ತಿರುವ ಈ ಚಿತ್ರದ ಹೀರೋ ಯಾರೆಂಬುದು ಗೌಪ್ಯವಾಗಿದೆ. ಮುಂದಿನ ವಾರದಲ್ಲಿ ಚಿತ್ರದ ಶೀರ್ಷಿಕೆ ಮತ್ತು ನಾಯಕ ನಟ ಯಾರೆಂಬುದನ್ನು ಘೋಷಿಸಲು ಚಿತ್ರತಂಡ ಯೋಜಿಸಿದೆ. ಸಾ.ರಾ. ಮಹೇಶ್ ಪತ್ನಿ ಅನಿತಾ ಅವರು ಈಗಾಗಲೇ ಕನ್ನಡ ಚಿತ್ರರಂಗದಲ್ಲಿ ಗಾಯಕಿಯಾಗಿ ಗುರುತಿಸಿಕೊಂಡಿದ್ದು, ಇದೀಗ ನಿರ್ಮಾಣದ ಜವಾಬ್ದಾರಿಯೊಂದಿಗೆ ಸಾ.ರಾ.ಮಹೇಶ್ ಸ್ಯಾಂಡಲ್‌ವುಡ್ ಪ್ರವೇಶಿಸಿದ್ದಾರೆ.

ಫಿಲ್ಮ್ ಚೇಂಬರ್‌ನಲ್ಲೇ ಹೃದಯಾಘಾತ

'ಸಾಹಸಸಿಂಹ' ಚಿತ್ರದ ನಿರ್ದೇಶಕ ಜೊ ಸೈಮನ್ ನಿಧನ



ಬೆಂಗಳೂರು: ಹಿರಿಯ ನಿರ್ದೇಶಕ ಜೊ ಸೈಮನ್ ಅವರು ತೀವ್ರ ಹೃದಯಾಘಾತದಿಂದ ನಿಧನರಾಗಿದ್ದಾರೆ. ಫಿಲ್ಮ್ ಚೇಂಬರ್‌ನಲ್ಲಿ ನಡೆಯುತ್ತಿದ್ದ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಜೊ ಸೈಮನ್ ಭಾಗಿಯಾಗಿದ್ದರು. ಸಭೆಯಲ್ಲಿ ಮಾತನಾಡಿದ ಬಳಿಕ ವಾಶ್ ರೂಮ್‌ಗೆ ಹೋಗಿದ್ದಾರೆ.


ವಾಶ್ ರೂಮ್‌ನಲ್ಲಿ ವಾಂತಿ ಮಾಡಿದ ಬಳಿಕ ಕುಸಿದು ಬಿದ್ದಿದ್ದಾರೆ. ಕೂಡಲೇ ಅವರನ್ನು ಮಲ್ಲಿಗೆ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಜೊ ಸೈಮನ್ ಮೃತಪಟ್ಟಿದ್ದಾರೆ.

ವಿಷ್ಣುವರ್ಧನ್ ಅಭಿನಯದ 'ಸಾಹಸಸಿಂಹ' ಚಿತ್ರದ ನಿರ್ದೇಶಕರಾಗಿದ್ದ ಜೊ ಸೈಮನ್ ಸಿಂಹದ ಜೋಡಿ, ನನ್ನ ರೋಷ ನೂರು ವರುಷ, ಮಹಾ ಪ್ರಚಂಡರು, ಸಾಹಸಸಿಂಹ ಸೇರಿದಂತೆ ಹಲವು ಹಿಟ್ ಸಿನಿಮಾಗಳನ್ನು ನೀಡಿದ್ದರು.

ಮಂಡ್ಯ ಮೂಲದ ಜೊ ಸೈಮನ್ ಆರಂಭದಲ್ಲಿ ಟಚ್ ಅಪ್ ಬಾಯ್, ಸಹಾಯಕ ಮೇಕ್ ಅಪ್ ಮ್ಯಾನ್ ಮತ್ತು ಸೆಟ್ ಬಾಯ್ ಆಗಿ ಕೆಲಸ ಮಾಡಿದ್ದರು. ನಂತರ ಅವರು ನಿರ್ದೇಶನ ವಿಭಾಗದಲ್ಲಿ ಕೆಲಸ ಮಾಡಲು ಪ್ರಾರಂಭಿಸಿದರು. ಅವರು ಕೆ.ಎಸ್.ಆರ್.ದಾಸ್, ಆರ್.ಎನ್. ಜಯಗೋಪಾಲ್, ಕಣಗಾಲ್ ಪ್ರಭಾಕರ ಶಾಸ್ತ್ರಿ, ಎಸ್.ವಿ.ರಾಜೇಂದ್ರ ಸಿಂಗ್ ಬಾಬು ಮುಂತಾದ ನಿರ್ದೇಶಕರೊಂದಿಗೆ ಕೆಲಸ ಮಾಡಿದ್ದಾರೆ.

ಕರ್ನಾಟಕ ಚಾಲನಚಿತ್ರ ಅಕಾಡೆಮಿ ಜೊ ಸೈಮನ್ ಅವರ ಜೀವಿತಾವಧಿ ಸಾಧನೆ ಗುರುತಿಸಿ 2013ರಲ್ಲಿ ಬಿ.ಆರ್. ಪಂತುಲು ಪ್ರಶಸ್ತಿಯನ್ನು ನೀಡಿ ಗೌರವಿಸಿದೆ

1.31 ಕೋಟಿ ಖಾತೆಗೆ 5 ಸಾವಿರ ಜಮೆ; ಮತ್ತೆ ಅಧಿಕಾರಕ್ಕೆ ಬಂದರೆ 2 ಸಾವಿರ



ಚೆನ್ನೈ, ಫೆ.13– ಚುನಾವಣೆ ಹೊಸ್ತಿಲಲ್ಲೇ ಕಲೈಗ್ನಾರ್ ಮಹಿಳಾ ಹಕ್ಕುಗಳ ಯೋಜನೆಯಡಿ ತಮಿಳುನಾಡಿನ 1.31 ಕೋಟಿ ಮಹಿಳೆಯ ಬ್ಯಾಂಕ್ ಖಾತೆಗಳಿಗೆ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಸರ್ಕಾರ 5,000 ರೂಪಾಯಿ ವರ್ಗಾವಣೆ ಮಾಡಿದ್ದು ಮತ್ತೆ ಅಧಿಕಾರಕ್ಕೆ ಬಂದರೆ ಪ್ರತಿ ತಿಂಗಳು 2 ಸಾವಿರ ರೂಪಾಯಿ ನೀಡುವುದಾಗಿ ಘೋಷಿಸಿದೆ. ಫೆಬ್ರವರಿ, ಮಾರ್ಚ್ ಮತ್ತು ಏಪ್ರಿಲ್ ಕಂತುಗಳಿಗಾಗಿ 3,000 ರೂಪಾಯಿಯನ್ನು ಈಗಾಗಲೇ ವಿತರಿಸಲಾಗಿದೆ. ಇದಲ್ಲದೆ, 2,000 ಅನ್ನು ಬೇಸಿಗೆ ವಿಶೇಷ ಪ್ಯಾಕೇಜ್ ಆಗಿ ನೀಡ ಲಾಗಿದ್ದು ಒಟ್ಟಾರೆ ಪ್ರತಿಯೊಬ್ಬ ಫಲಾನುಭವಿ ಮಹಿಳೆ ಒಟ್ಟು 5,000 ರೂಪಾಯಿ ಪಡೆದಿದ್ದಾರೆ.

ಚುನಾವಣೆಯನ್ನು ಉಲ್ಲೇಖಿಸಿ ಕೆಲವರು ಯೋಜನೆಯ ಹಣವನ್ನು ತಡೆಹಿಡಿಯಲು ಬಯಸಿದ್ದರು. ಆದರೆ ಮಹಿಳೆಯರಿಗೆ ಯಾವುದೇ ಅನಾನುಕೂಲವಾಗದಂತೆ ತಮ್ಮ ಸರ್ಕಾರವು ಹಣವನ್ನು ಮೊದಲೇ ವರ್ಗಾಯಿಸಿದೆ ಎಂದು ಸಿಎಂ ಸ್ಟಾಲಿನ್ ಹೇಳಿದರು. ದ್ರಾವಿಡ ಮುನ್ನೇತ್ರ ಕಳಗಂ (DMK) ಮತ್ತೆ ಅಧಿಕಾರಕ್ಕೆ ಬಂದರೆ ಮಹಿಳೆಯರಿಗೆ ನೀಡಲಾಗುತ್ತಿದ್ದ 1,000 ಮಾಸಿಕ ಸಹಾಯಧನವನ್ನು 2,000ಕ್ಕೆ ಹೆಚ್ಚಿಸಲಾಗುವುದು ಎಂದು ಸ್ಟಾಲಿನ್ ಭರವಸೆ ನೀಡಿದರು. ತಮಿಳುನಾಡು ವಿಧಾನಸಭೆಯಲ್ಲಿ ಒಟ್ಟು 234 ಸ್ಥಾನಗಳಿದ್ದು 2026ರಲ್ಲಿ ಚುನಾವಣೆ ನಡೆಯುವ ಸಾಧ್ಯತೆಯಿದೆ. ಸ್ಟಾಲಿನ್ ಅವರ ಪಕ್ಷ 2021ರಲ್ಲಿ ಬಹುಮತ ಗಳಿಸಿತು. ಚುನಾವಣೆಯಲ್ಲಿ ಸೋಲುವ ಭಯದಿಂದ ಸ್ಟಾಲಿನ್ ಈ ನಡೆ ಕೈಗೊಂಡಿದ್ದಾರೆ ಎಂದು ಬಿಜೆಪಿ ನಾಯಕಿ ತಮಿಳಿಸೈ ಸೌಂದರರಾಜನ್ ಆರೋಪಿಸಿದ್ದರು.

ಅಪರಿಚಿತ ಶವ ಪತ್ತೆ

ಮೈಸೂರು, ಫೆ.13(ಎಸ್‌ಪಿಎನ್)– ಮೈಸೂರು ರೈಲ್ವೆ ನಿಲ್ದಾಣದ ಮುಂಭಾಗದ ಪ್ರಧಾನ ಮಂತ್ರಿ ಜನಔಷಧಿ ಕೇಂದ್ರದ ಬಳಿ 60 ವರ್ಷದ ಅಪರಿಚಿತ ವ್ಯಕ್ತಿ ಮೃತಪಟ್ಟಿದ್ದಾರೆ. ಕೆ.ಆರ್.ಆಸ್ಪತ್ರೆ ಶವಾಗಾರದಲ್ಲಿ ಮೃತದೇಹ ಇಡಲಾಗಿದೆ. ಯಾರಾದರೂ ಈ ವ್ಯಕ್ತಿಯ ಗುರುತು ಸಿಕ್ಕಲ್ಲಿ ಮೈಸೂರು ರೈಲ್ವೆ ಪೊಲೀಸ್ ಠಾಣೆ ದೂ:0821–2516579, ಮೊ:94808–02122 ಸಂಪರ್ಕಿಸುವಂತೆ ರೈಲ್ವೆ ಪೊಲೀಸರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಂತರರಾಷ್ಟ್ರೀಯ ಮಟ್ಟದ ಬಿಗ್ ಕ್ಯಾಟ್ ಶೃಂಗ ಸಭೆಗೆ ತೆರೆ

ವನ್ಯಜೀವಿಗಳ ಕುರಿತಾಗಿ ಐದು ದಿನಗಳು ಉಪಯುಕ್ತ ವಿಚಾರ ವಿನಿಮಯ

ಮೈಸೂರು, ಫೆ.13(ಎಂಟಿವೈ)– ಜಾಗತಿಕ ಮಟ್ಟದಲ್ಲಿ ದೊಡ್ಡ ಬೆಕ್ಕು ಜಾತಿಯ (ಬಿಗ್ ಕ್ಯಾಟ್ಸ್) ಪ್ರಾಣಿಗಳ ಸಂರಕ್ಷಣೆಗಾಗಿ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಚರ್ಚಿಸಲು ಬಂಡೀಪುರ, ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಫೆ9ರಿಂದ ನಡೆಯುತ್ತಿದ್ದ ಅಂತರ ರಾಷ್ಟ್ರೀಯ ಬಿಗ್ ಕ್ಯಾಟ್ ಶೃಂಗ ಸಭೆಗೆ ಶುಕ್ರವಾರ ಸಂಜೆ ತೆರೆ ಬಿದ್ದಿದೆ.

ಅಂತರರಾಷ್ಟ್ರೀಯ ಮಟ್ಟದಲ್ಲಿ ದೊಡ್ಡ ಬೆಕ್ಕು ಜಾತಿಗೆ ಸೇರಿರುವ ಹುಲಿ, ಸಿಂಹ, ಚಿರತೆ, ಜಾಗ್ವಾರ್, ಚೀತಾ, ಹಿಮ ಚಿರತೆ ಹಾಗೂ ಪೂಮಾ ಪ್ರಾಣಿಗಳ ಸಂರಕ್ಷಣೆಗೆ ಕ್ರಮ ಕೈಗೊಂಡು ಅವುಗಳ ಸಂಖ್ಯೆ ಸುಧಾರಿಸುವ ನಿಟ್ಟಿನಲ್ಲಿ ಜಾಗತಿಕ ಮಟ್ಟದಲ್ಲಿ ಚರ್ಚಿಸಲು ಆಯೋಜಿಸಿದ್ದ ಶೃಂಗ ಸಭೆಯ ಆತಿಥ್ಯವನ್ನು ಕರ್ನಾಟಕ ಅರಣ್ಯ ಇಲಾಖೆ ವಹಿಸಿಕೊಂಡು, ಹುಲಿ, ಆನೆ, ಚಿರತೆ ಸೇರಿದಂತೆ ವಿವಿಧ ಪ್ರಾಣಿಗಳ ಸಾಂದ್ರತೆಯಲ್ಲಿ ಮುಂಚೂಣಿಯಲ್ಲಿರುವ ಬಂಡೀಪುರ ಹಾಗೂ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದಲ್ಲಿ ನಡೆಸಲು ನಿರ್ಧರಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಫೆ.9ರಿಂದ 13ವರೆಗೆ ನಡೆದ ಎರಡನೇ ಆವೃತ್ತಿಯ ಅಂತರ ರಾಷ್ಟ್ರೀಯ ಬಿಗ್ ಕ್ಯಾಟ್ ಶೃಂಗಸಭೆಯಲ್ಲಿ 23 ದೇಶಗಳ 38 ಪ್ರತಿನಿಧಿಗಳು ಪಾಲ್ಗೊಂಡು ಭಾರತ, ಅದರಲ್ಲೂ ಕರ್ನಾಟಕದಲ್ಲಿ ದೊಡ್ಡ ಬೆಕ್ಕು ಜಾತಿಯ ಪ್ರಾಣಿಗಳ ಸಂರಕ್ಷಣೆಗೆ ಕೈಗೊಂಡಿರುವ ಕ್ರಮಗಳ ಬಗ್ಗೆ ಇಲ್ಲಿನ ಹಿರಿಯ ಅಧಿಕಾರಿಗಳು, ತಜ್ಞರು ಹಾಗೂ ಪಶುವೈದ್ಯರಿಂದ ಮಾಹಿತಿ ಪಡೆದರು.

ಫೆ.9ರಿಂದ 11ರವರೆಗೆ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ನಡೆದ ಶೃಂಗಸಭೆಯ ವಿವಿಧ ವಿಚಾರ ಸಂಕಿರಣ, ಪ್ರಾತ್ಯಕ್ಷಿಕೆ ಸೇರಿದಂತೆ ವಿವಿಧ ಚಟುವಟಿಕೆಗಳಲ್ಲಿ ಪಾಲ್ಗೊಂಡಿದ್ದ ವಿದೇಶದ ಅರಣ್ಯಾಧಿಕಾರಿಗಳ ನಿಯೋಗ, ಫೆ.11ರ ಸಂಜೆಯಿಂದ 13ರ ಸಂಜೆವರೆಗೆ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಅಂತರಸಂತೆ ವ್ಯಾಪ್ತಿಯ ಜೆಎಲ್‌ಆರ್‌ನಲ್ಲಿ ನಡೆದ ಮುಂದುವರೆದ ಶೃಂಗ ಸಭೆಯಲ್ಲಿ ಪಾಲ್ಗೊಂಡಿದ್ದರು.


ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದಲ್ಲಿ ನಡೆದ ಅಂತರರಾಷ್ಟ್ರೀಯ ಬಿಗ್ ಕ್ಯಾಟ್ ಅಲೈಯನ್ಸ್ ಶೃಂಗಸಭೆಯ ಸಮಾರೋಪ ಸಮಾರಂಭದಲ್ಲಿ ಅರಣ್ಯಾಧಿಕಾರಿಗಳೊಂದಿಗೆ ವಿದೇಶಿ ಅರಣ್ಯಾಧಿಕಾರಿಗಳು.

ನಾಗರಹೊಳೆಯಲ್ಲಿ ಅರ್ಕಾನ್ಸಾಸ್ ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಡಾ.ಕೆ.ಸಿ.ಅನೂಪ್, ಸುಸ್ಥಿರ ಪರಿಸರ ಪ್ರವಾಸೋದ್ಯಮ ಮತ್ತು ಜನಸಂಪರ್ಕ ಕಾರ್ಯಕ್ರಮ ಕುರಿತು ಮಾಹಿತಿ ನೀಡಿದರೆ, ನ್ಯಾಷನಲ್ ಜಿಯಾಗ್ರಫಿಕ್ ಸಂಸ್ಥೆಯ ಜೈ ಶರ್ಮಾ, ಯುನೆಸ್ಕೋ ಸದಸ್ಯ ಶ್ರೀ ಸಂತೋಷ್ ಸುತ್ತರ್, ವನ ಲೋಕ್ ಅವರು ಹವಾಮಾನ ಬದಲಾವಣೆ ಕುರಿತು ಪ್ರಾತ್ಯಕ್ಷಿಕೆ ನೀಡಿದರು. ಭಾರತೀಯ ವನ್ಯಜೀವಿ ಸಂಸ್ಥೆಯ ವಿಜ್ಞಾನಿ ಡಾ. ರಮೇಶ್ ಕೃಷ್ಣಮೂರ್ತಿ ಅವರು ವನ್ಯಜೀವಿ ಸಂರಕ್ಷಣೆಗಾಗಿ ಭೂದೃಶ್ಯ ವಿಧಾನಗಳು, ಕೊಯಮತ್ತೂರಿನ ರಾಮಾನುಜನ್ ಫೆಲೋ ಪ್ರಾತ್ಯಕ್ಷಿಕೆ ನೀಡಿದ್ದಾರೆ. ಬಳಿಕ ಸುಸ್ಥಿರ ಪರಿಸರ ಪ್ರವಾಸೋದ್ಯಮ ಅಧ್ಯಯನದ ಭಾಗವಾಗಿ ಕ್ಷೇತ್ರ ಭೇಟಿ ಕಾರ್ಯಕ್ರಮದಲ್ಲಿ ಕಬಿನಿ ಹಿನ್ನೀರಿನ ಪ್ರದೇಶಕ್ಕೆ ಭೇಟಿ ನೀಡಿ ನಂತರ ಸಾಕಾನೆಗಳ ನಿರ್ವಹಣೆ ಕುರಿತು ಅಧ್ಯಯನ ನಡೆಸಲು ಬಳ್ಳೆ ಸಾಕಾನೆ ಶಿಬಿರಕ್ಕೆ ಭೇಟಿ ನೀಡಿ ಸಾಕಾನೆಗಳ ಬಗ್ಗೆ ತಂಡ ಮಾಹಿತಿ ಪಡೆಯಿತು.

ಶೃಂಗಸಭೆಯ ಕೊನೆ ದಿನವಾದ ಇಂದು ಬೆಳಗ್ಗೆ ಹೆಚ್.ಡಿ.ಕೋಟೆ ತಾಲೂಕಿನ ಕಾರಾಪುರದಲ್ಲಿರುವ ಜಂಗಲ್ ಲಾಡ್ಜಸ್ ಮತ್ತು ರೆಸಾರ್ಟ್ ಸಂಸ್ಥೆ ಆವರಣದಲ್ಲಿ ನಡೆದ ಅಧಿವೇಶನದಲ್ಲಿ ನಾಗರಹೊಳೆ ಪಶುವೈದ್ಯಾಧಿಕಾರಿ ಡಾ.ಹೆಚ್.ರಮೇಶ್ ವನ್ಯಪ್ರಾಣಿಗಳನ್ನು ಸೆರೆ ಹಿಡಿಯುವ ಕಾರ್ಯಾಚರಣೆ, ಎದುರಾಗುವ ಸವಾಲು, ಅರವಳಿಕೆ ಚುಚ್ಚು ಮದ್ದು ಪ್ರಯೋಗ, ಪ್ರಾಣಿಗಳ ವಯಸ್ಸು, ದೇಹದಾರ್ಢ್ಯತೆ, ಆರೋಗ್ಯ ಸ್ಥಿತಿಗೆ ಅನುಗುಣವಾಗಿ ಅರವಳಿಕೆ ಚುಚ್ಚು ಮದ್ದಿನ ಪ್ರಮಾಣ ಬಳಕೆ, ಕೈಗೊಳ್ಳಬೇಕಾದ ಕ್ರಮ, ಸೂಕ್ಷ್ಮತೆ ಸೇರಿದಂತೆ ಇನ್ನಿತರ ಮಹತ್ತರ ವಿಷಯಗಳ ಬಗ್ಗೆ ಪ್ರಾತ್ಯಕ್ಷಿಕೆ ಮೂಲಕ ವಿವರಣೆ ನೀಡಿದರು. ಇದೇ ವೇಳೆ ಸಂರಕ್ಷಣಾ ಕಾರ್ಯಗಳಿಗೆ ಆರ್ಥಿಕ ವ್ಯವಸ್ಥೆ ಕುರಿತಂತೆ ಆರ್ಥಿಕ ಸಲಹೆಗಾರರಾದ ರಾನೆನ್ ಬ್ಯಾನರ್ಜಿ ಅವರಿಂದ ವೀಡಿಯೊ ಸಂದೇಶ ಪ್ರಸಾರ ಮಾಡಲಾಯಿತು.

ಭಾರತದಲ್ಲಿ ಆನೆ ಸಂರಕ್ಷಣೆಗೆ ಇರುವ ಸವಾಲುಗಳು ಕುರಿತು ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದ ಹೆಚ್ಚುವರಿ ಮಹಾನಿರ್ದೇಶಕ ರಮೇಶ್ ಕುಮಾರ್ ಪಾಂಡೆ ಪ್ರಾತ್ಯಕ್ಷಿಕೆ ನೀಡಿದರು. ಬಳಿಕ ರಾಜ್ಯ ಮತ್ತು ದೇಶದ ವಿವಿಧೆಡೆಯಿಂದ ಆಗಮಿಸಿದ್ದ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ವಿವಿಧ ದೇಶಗಳಿಂದ ಬಂದಿರುವ ಪ್ರತಿನಿಧಿಗಳು ಸಂವಾದ ನಡೆಸಿದರು. ಜಾಗತಿಕವಾಗಿ ವನ್ಯಜೀವಿಗಳ ಸಂರಕ್ಷಣೆ ಹಾಗೂ ಸುಧಾರಣೆಗಾಗಿ ಜಾರಿಗೆ ತರಬಹುದಾದ ಸಂರಕ್ಷಣಾ ಕಾರ್ಯತಂತ್ರಗಳ ಕುರಿತು ಚರ್ಚಿಸಿದರು.

ಸಮಾರೋಪ ಸಮಾರಂಭ: ಶೃಂಗಸಭೆಯ ಸಮಾರೋಪ ಸಮಾರಂಭದಲ್ಲಿ ವನ್ಯಜೀವಿ ಮತ್ತು ಸಂರಕ್ಷಣಾ ಅಭ್ಯರ್ಥಿಗಳ ಸಾಮರ್ಥ್ಯ ವರ್ಧನೆಗಾಗಿ ಕಾರ್ಯನಿರ್ವಾಹಕ ಕೋರ್ಸ್ನ ಅಂತಿಮವಾಗಿ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ ಹಾಗೂ ಕರ್ನಾಟಕ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳು ವಿದೇಶಿ ಪ್ರತಿನಿಧಿಗಳಿಗೆ ಪ್ರಮಾಣ ಪತ್ರ ವಿತರಿಸಿದರು.

ಈ ಸಂದರ್ಭದಲ್ಲಿ ವಿದೇಶಾಂಗ ಸಚಿವಾಲಯ ನಿರ್ದೇಶಕ ನಿತಿನ್ ಪ್ರಮೋದ್, ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದ ಹೆಚ್ಚುವರಿ ಮಹಾನಿರ್ದೇಶಕ ರಮೇಶ್ ಕುಮಾರ್ ಪಾಂಡೆ, ನಿರ್ದೇಶಕ ಜೆರೋಮ್ ಮಿಂಜ್, ಸದಸ್ಯ ಕಾರ್ಯದರ್ಶಿ ಡಾ. ಸಂಜಯನ್ ಕುಮಾರ್, ಸಭೆಯ ಕೋರ್ಸ್ ನಿರ್ದೇಶಕ ಸುಭಾಷ್ ಮಾಲ್ಖೆಡೆ, ಪಿಸಿಸಿಎಫ್(ವನ್ಯಜೀವಿ) ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರಾದ ಕುಮಾರ್ ಪುಷ್ಕರ್, ಎನ್‌ಟಿಸಿಎ ಅಧಿಕಾರಿ ಹರಿಣಿ ವೇಣುಗೋಪಾಲ್, ಹುಲಿ ಯೋಜನೆಯ ನಿರ್ದೇಶಕ, ಸಿಸಿಎಫ್ ಡಾ.ಪಿ.ರಮೇಶ್ ಕುಮಾರ್, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಎಸ್.ಪ್ರಭಾಕರನ್, ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕರಾದ ಪಿ.ಎ.ಸೀಮಾ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ, ಹುಣಸೂರು ಹಾಗೂ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಇತರೆ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗ ಪಾಲ್ಗೊಂಡಿದ್ದರು.


ಬಳ್ಳೆ ಕ್ಯಾಂಪ್‌ಗೆ ತೆರಳಿದ್ದ ವಿದೇಶಿ ಅರಣ್ಯಾಧಿಕಾರಿಗಳ ನಿಯೋಗ ದಸರಾ ಗಜಪಡೆಯ ನಾಯಕ ಅಭಿಮನ್ಯು ಸೇರಿದಂತೆ ವಿವಿಧ ಆನೆಗಳನ್ನು ವೀಕ್ಷಿಸಿ, ಅವುಗಳ ಕಾರ್ಯವೈಖರಿ ಬಗ್ಗೆ ತಿಳಿದುಕೊಂಡರು.

ಡಾ.ಯತೀಂದ್ರ ವಿರುದ್ಧ ಪ್ರತಾಪ್‌ಸಿಂಹ ಹೇಳಿಕೆ ಖಂಡಿಸಿ ದಲಿತ ಮಹಾಸಭಾ ಪ್ರತಿಭಟನೆ

ಮೈಸೂರು,ಫೆ.13(ಜಿಎ)–ಡಾ.ಯತೀಂದ್ರ ಸಿದ್ದರಾಮಯ್ಯ ಅವರ ರಾಜಕೀಯ ಏಳಿಗೆ ಸಹಿಸದೇ ಅವರ ವಿರುದ್ಧ ಸುಳ್ಳು ಆರೋಪ ಮಾಡುತ್ತಿರುವ ಮಾಜಿ ಸಂಸದ ಪ್ರತಾಪ್ ಸಿಂಹ ಅವರನ್ನು ಬಂಧಿಸಬೇಕು ಎಂದು ಒತ್ತಾಯಿಸಿ ದಲಿತ ಮಹಾ ಸಭಾದಿಂದ ಪುರಭವನ ಮುಂಭಾಗದ ಅಂಬೇಡ್ಕರ್ ಪ್ರತಿಮೆ ಬಳಿ ಪ್ರತಿಭಟನೆ ನಡೆಸಲಾಯಿತು.


ದಲಿತ ಮಹಾಸಭಾದಿಂದ ಅಂಬೇಡ್ಕರ್ ಪ್ರತಿಮೆ ಬಳಿ ಪ್ರತಿಭಟನೆ ನಡೆಸಲಾಯಿತು.

ಯತೀಂದ್ರ ಸಿದ್ದರಾಮಯ್ಯ ಅವರ ಸಾಮಾಜಿಕ ಕಾಳಜಿ, ದಲಿತಪರ ಸೇವಾ ಮನೋಭಾವನೆ, ಯುವ ಜನತೆಯ ಸಬಲೀಕರಣ, ವರುಣ ಕ್ಷೇತ್ರ ಸೇರಿದಂತೆ ರಾಜ್ಯದ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವುದನ್ನು ಸಹಿಸದೇ ಮಾಜಿ ಸಂಸದ ಪ್ರತಾಪ್ ಸಿಂಹ ಆಧಾರ ರಹಿತ ಆರೋಪ ಮಾಡುತ್ತಿದ್ದಾರೆ. ಯತೀಂದ್ರ ಅವರು ವರ್ಗಾವಣೆ ವಿಚಾರದಲ್ಲಿ ಹಸ್ತಕ್ಷೇಪ ಮಾಡುವುದಕ್ಕೆ ಸಾಕ್ಷ್ಯಾಧಾರ ನೀಡಲಿ. ಯಾವುದೇ ಸಾಕ್ಷ್ಯಾಧಾರ ಇಲ್ಲದೆ, ಈ ರೀತಿ ಸುಳ್ಳು ಆರೋಪ ಮಾಡುವ ಮೊದಲು ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಮಾಜಿ ಸಿಎಂ ಯಡಿಯೂರಪ್ಪ ಅವರ ಅವಧಿಯಲ್ಲಿ ಅಧಿಕಾರ ದುರುಪಯೋಗ ಪಡಿಸಿಕೊಂಡು ವರ್ಗಾವಣೆ ದಂಧೆಯಲ್ಲಿ ತೊಡಗಿ ಕೋಟ್ಯಾಂತರ ರೂ ಹಣ ಮಾಡಿರುವುದನ್ನು ಪ್ರತಾಪ್ ಸಿಂಹ ಮರೆತಂತಿದೆ ಎಂದು ಪ್ರತಿಭಟನಾಕಾರರು ಕಿಡಿಕಾರಿದರು.

ಸಿಎಂ ಸಿದ್ದರಾಮಯ್ಯ ರಾಜ್ಯದ ಉದ್ದಲಕ್ಕೂ ಸಂಚಾರ ಮಾಡಿ, ರಾಜ್ಯದ ಅಭಿವೃದ್ಧಿ ಬಗ್ಗೆ ಹೆಚ್ಚಿನ ಗಮನ ನೀಡುತ್ತಿದ್ದಾರೆ. ಹೀಗಾಗಿ ಸಹಜವಾಗಿ ವರುಣ ಕ್ಷೇತ್ರದಲ್ಲಿ ಅವರ ಮಗನಾಗಿ ಜನತೆಯ ಕುಂದು ಕೊರತೆ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಿ ಸೂಕ್ತಸಲಹೆ ಮಾರ್ಗದರ್ಶನ ಹಾಗೂ ಕಾಮಗಾರಿಗಳ ಅನುಷ್ಠಾನಗೊಳಿಸುವತ್ತ ಸಕ್ರಿಯರಾಗಿದ್ದಾರೆ. ಈ ಮೂಲಕ ಯತೀಂದ್ರ ಕ್ಷೇತ್ರದ ಜನತೆಯ ವಿಶ್ವಾಸ, ಪ್ರೀತಿ ಗಳಿಸಿ ಜನಪ್ರಿಯರಾಗುತ್ತಿರುವುದನ್ನು ಸಹಿಸಿಕೊಳ್ಳದೆ, ಮುಂದಿನ ದಿನಗಳಲ್ಲಿ ಭವಿಷ್ಯದ ಹಿಂದುಳಿದ ವರ್ಗದ ಜನಪ್ರಿಯ ನಾಯಕರಾಗುತ್ತಾರೆಂಬ ಉದ್ದೇಶದಿಂದ ಈ ರೀತಿಯ ಆಧಾರ ರಹಿತ ಸುಳ್ಳು ಆರೋಪ ಮಾಡುವ ಮೂಲಕ ಯತೀಂದ್ರ ಅವರ ಹೆಸರಿಗೆ ಮಸಿ ಬಳಿಯುವ, ತೇಜೋವಧೆ ಮಾಡುವ ಹುನ್ನಾರವಿದ್ದು, ಶೋಷಿತ ಸಮುದಾಯದ ನಾಯಕನನ್ನು ತೇಜೋವಧೆ ಮಾಡುವ, ಅವರ ಆತ್ಮಸ್ಥೈರ್ಯ ಕುಗ್ಗಿಸುವ ಹೇಳಿಕೆ ನೀಡುತ್ತಿರುವ ಪ್ರತಾಪ್ ಸಿಂಹ ಅವರನ್ನು ಬಂಧಿಸಿ, ಕಾನೂನು ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ದಲಿತ ಮಹಾಸಭಾ ಅಧ್ಯಕ್ಷ ಎಸ್.ರಾಜೇಶ್, ಕುರುಬಾರಹಳ್ಳಿ ಪ್ರಕಾಶ್, ರಾಜಶೇಖರ್, ಸುನಿಲ್ ನಾರಾಯಣ, ಸೈಯ್ಯದ್, ರವಿ ನಾಯಕ್, ಶಿವಶಂಕರಮೂರ್ತಿ, ಲೋಕೇಶ್ ಕುಮಾರ್ ಮಾದಾಪುರ, ರವಿನಂದನ್, ಬಿ.ಜಿ.ಕೇಶವ, ರಹೀಮ್, ನಂಜುಂಡಸ್ವಾಮಿ, ಪ್ರಕಾಶ್, ಯೋಗೇಶ್ ಹಲವರು ಪಾಲ್ಗೊಂಡಿದ್ದರು.

ಥಾಮಸ್ ಕುಕ್ ಇಂಡಿಯಾದಿಂದ ಇಂದು ಬೃಹತ್ ಟ್ರಾವೆಲ್ ಮೇಳ

ಮೈಸೂರು, ಫೆ.13– ಥಾಮಸ್ ಕುಕ್ ಇಂಡಿಯಾ ಲಿಮಿಟೆಡ್‌ನ ಬೃಹತ್ ಟ್ರಾವೆಲ್ ಮೇಳ ಮೈಸೂರಿನ ಗ್ರಾಂಡ್ ಮರ್ಕ್ಯೂರ್ (ಸಯ್ಯಾಜಿ ರಾವ್ ರಸ್ತೆ ಬಳಿ)ನಲ್ಲಿ ಫೆ.14ರ ಶನಿವಾರ ಬೆಳಗ್ಗೆ 10 ರಿಂದ ಸಂಜೆ 6ರವರೆಗೆ ನಡೆಯಲಿದೆ.

ಈ ಮೇಳದಲ್ಲಿ ದೇಶೀಯ ಪ್ರವಾಸ ಪ್ಯಾಕೇಜ್‌ಗಳನ್ನು ಪ್ರವಾಸ ಪ್ರಿಯರಿಗೆ ಪರಿಚಯಿಸಲಾಗುವುದು. ಕೈಲಾಸ್ ಮಾನಸ ಸರೋವರ ಯಾತ್ರೆ, ಚಾರ್ಧಾಮ್ ಯಾತ್ರೆ, ಕಾಶಿ–ಅಯೋಧ್ಯೆ ಯಾತ್ರೆ, ಶ್ರೀಲಂಕಾ ರಾಮಾಯಣ ಟ್ರೇಲ್ಸ್ ಹಾಗೂ ಬೆಂಗಳೂರು ನೇರ ಚಾರ್ಟರ್ಡ್ ವಿಮಾನದೊಂದಿಗೆ ಭೂತಾನ್ ಪ್ರವಾಸ ಪ್ರಮುಖ ಆಕರ್ಷಣೆಗಳಾಗಿವೆ.

ಅಂತರರಾಷ್ಟ್ರೀಯ ಪ್ರವಾಸಗಳಲ್ಲಿ ಯೂರೋಪ್, ಅಮೆರಿಕಾ, ದಕ್ಷಿಣ ಅಮೆರಿಕಾ, ಕ್ಯಾನಡಾ ಜೊತೆಗೆ ಅಲಾಸ್ಕಾ, ದುಬೈ, ಥೈಲ್ಯಾಂಡ್, ಸಿಂಗಾಪುರ್, ಬಾಲಿ, ಆಸ್ಟ್ರೇಲಿಯಾ ಜೊತೆಗೆ ನ್ಯೂಜಿಲ್ಯಾಂಡ್, ಜಪಾನ್ (ಚೆರ್ರಿ ಬ್ಲಾಸಮ್ / ಸಾಕುರಾ), ಈಜಿಪ್ಟ್, ದಕ್ಷಿಣ ಆಫ್ರಿಕಾ ಜೊತೆ ಕೆನ್ಯಾ ಮತ್ತು ಟಾಂಜಾನಿಯಾ, ಬಾಕು, ಜಾರ್ಜಿಯಾ, ಜೋರ್ಡನ್, ರಷ್ಯಾ, ಮತ್ತು ಅಂಟಾರ್ಟಿಕಾ ಕ್ರೂಸ್ (ಇಂಡಿಯನ್ ಶೆಫ್ಸ್ ಜೊತೆ ವಿಶೇಷ ಪ್ರವಾಸ ಅನುಭವ) ಲಭ್ಯವಿದೆ.

ಕಾರ್ಯಕ್ರಮದ ವೇಳೆ ಪ್ರವಾಸ ತಜ್ಞರಿಂದ ನೇರ ಮಾರ್ಗದರ್ಶನ, ವಿಶೇಷ ಆಫರ್‌ಗಳು ಹಾಗೂ ಗ್ರಾಹಕರ ಅಗತ್ಯಕ್ಕೆ ಅನುಗುಣವಾಗಿ ಕಸ್ಟಮೈಸ್ ಮಾಡಿದ ಪ್ರವಾಸ ಯೋಜನೆಗಳ ಮಾಹಿತಿ ಲಭ್ಯವಿರಲಿದೆ. ಹೆಚ್ಚಿನ ಮಾಹಿತಿಗಾಗಿ 9886281887, 9590567287 ಸಂಪರ್ಕಿಸುವಂತೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯಾರ್ಥಿ ನಾಪತ್ತೆ



ಮೈಸೂರು, ಫೆ13(ಎಸ್‌ಪಿಎನ್)– 9ನೇ ತರಗತಿ ವಿದ್ಯಾರ್ಥಿಯೊಬ್ಬ ಟ್ಯೂಷನ್‌ಗೆ ಹೋಗಲು ನಿರಾಕರಿಸಿ ಮನೆಯಿಂದ ನಾಪತ್ತೆಯಾಗಿರುವ ಘಟನೆ ಲಕ್ಷ್ಮೀಪುರಂ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಫೆ10ರಂದು ನಡೆದಿದೆ.

ಮಹಾರಾಜ ಪ್ರೌಢಶಾಲೆಯಲ್ಲಿ 9ನೇ ತರಗತಿ ವ್ಯಾಸಂಗ ಮಾಡುತ್ತಿರುವ ವಿ.ಯಶಸ್(14) ನಾಪತ್ತೆಯಾಗಿದ್ದಾನೆ. ಈತ ಎಂಎಂಸಿ ಕೋಚಿಂಗ್ ಸೆಂಟರ್‌ನಲ್ಲಿ ಕೋಚಿಂಗ್ ಪಡೆಯುತ್ತಿದ್ದ. ಸಾರ್ವಜನಿಕರಿಗೆ ಈತ ಸುಳಿವು ಸಿಕ್ಕಲ್ಲಿ ಲಕ್ಷ್ಮೀಪುರಂ ಪೊಲೀಸ್ ಠಾಣೆ ದೂ:0821–2418339/320, ಮೊ:94808–02243 ಸಂಪರ್ಕಿಸುವಂತೆ ಪೊಲೀಸರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಿಜಟಲೀಕರಣದೊಂದಿಗೆ ಸಹಕಾರ ಬ್ಯಾಂಕ್‌ಗಳಲ್ಲಿ ತ್ವರಿತ ಸೇವೆ ಲಭ್ಯವಾಗಲಿ

ರಾಜ್ಯ ಸಹಕಾರ ಮಹಾಮಂಡಳ ಅಧ್ಯಕ್ಷರೂ ಆದ ಶಾಸಕ ಜಿ.ಟಿ.ದೇವೇಗೌಡರ ಸಲಹೆ

ಮೈಸೂರು, ಫೆ.13– ವಾಣಿಜ್ಯ ಬ್ಯಾಂಕ್‌ಗಳಂತೆ ಸಹಕಾರ ಕ್ಷೇತ್ರದ ಬ್ಯಾಂಕ್‌ಗಳು ಡಿಜಿಟಲೀಕರಣಗೊಂಡು ತ್ವರಿತ ಸೇವೆ ನೀಡುವಂತಾಗಬೇಕು ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕರೂ ಆದ ಕರ್ನಾಟಕ ರಾಜ್ಯಸಹಕಾರ ಮಹಾಮಂಡಳ ಅಧ್ಯಕ್ಷ ಜಿ.ಟಿ.ದೇವೇಗೌಡರು ಸಲಹೆ ನೀಡಿದರು.

ನಗರದ ಕೆಆರ್‌ಎಸ್ ರಸ್ತೆಯ ಹೋಟೆಲ್ ಶೈಲೆಂಟ್ ಶೋರ್ಸ್‌ನಲ್ಲಿ ಕರ್ನಾಟಕ ರಾಜ್ಯಸಹಕಾರ ಮಹಾಮಂಡಳ, ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್, ಮೈಸೂರು ಜಿಲ್ಲಾ ಸಹಕಾರ ಯೂನಿಯನ್ ಹಾಗೂ ಸಹಕಾರ ಇಲಾಖೆ ಸಹಯೋಗದಲ್ಲಿ ಅಪೆಕ್ಸ್ ಬ್ಯಾಂಕ್‌ನ ಹಿರಿಯ ಅಧಿಕಾರಿಗಳಿಗಾಗಿ ಆಯೋಜಿಸಿದ್ದ ಎರಡು ದಿನಗಳ ರಾಜ್ಯಮಟ್ಟದ ವಿಶೇಷ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ, ಅವರು ಮಾತನಾಡಿದರು.

ರಾಜ್ಯದಲ್ಲಿ ಅಪೆಕ್ಸ್ ಬ್ಯಾಂಕ್, ಜಿಲ್ಲಾ ಸಹಕಾರ ಕೇಂದ್ರಗಳ ಬ್ಯಾಂಕ್‌ಗಳು ಮತ್ತು ರೈತರ ಪಾಲಿಗೆ ಸಂಜೀವಿನಿಯಾಗಿದೆ. ಆರ್‌ಬಿಐನಿಂದ ಹೊಸ ನಿಯಮ ಹಾಗೂ ಮಾರ್ಗಸೂಚಿಗಳನ್ವಯ ಕಾರ್ಯನಿರ್ವಹಿಸಬೇಕಾಗಿದೆ ಡಿಜಿಟಲ್, ಮೊಬೈಲ್ ಬ್ಯಾಂಕಿಂಗ್ ಸೇರಿದಂತೆ ಡಿಜಿಟಲೀಕರಣದ ಮೂಲಕ ಗ್ರಾಹಕರಿಗೆ ಸೇವೆ ನೀಡಬೇಕು. ಮುಂದಿನ ದಿನಗಳಲ್ಲಿ ಮತ್ತಷ್ಟು ಸರಳೀಕರಣದೊಂದಿಗೆ ರೈತರಿಗೆ ತ್ವರಿತವಾಗಿ ಎಲ್ಲಾ ರೀತಿಯ ಸೌಲಭ್ಯ ಕಲ್ಪಿಸಿಕೊಡಬೇಕು ಎಂದರು.


ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್‌ನ ಹಿರಿಯ ಅಧಿಕಾರಿಗಳಿಗೆ ಆಯೋಜಿಸಿದ್ದ ಎರಡು ದಿನಗಳ ರಾಜ್ಯಮಟ್ಟದ ವಿಶೇಷ ತರಬೇತಿ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯಸಹಕಾರ ಮಹಾಮಂಡಳ ಅಧ್ಯಕ್ಷರಾದ ಶಾಸಕ ಜಿ.ಟಿ.ದೇವೇಗೌಡ ಉದ್ಘಾಟಿಸಿದರು.

ರೈತರಿಗೆ ನೆರವಾದ ಸಹಕಾರ ಬ್ಯಾಂಕ್: ಪಂಡಿತ್ ಜವಾಹರಲಾಲ್ ನೆಹರು ಅವರು ಪಂಚವಾರ್ಷಿಕ ಯೋಜನೆ ತಂದಿದ್ದರಿಂದ ಸಹಕಾರ ಕ್ಷೇತ್ರ ಹೆಮ್ಮರವಾಗಿ ಬೆಳೆಯಲು ಸಾಧ್ಯವಾಯಿತು. ಇಂದಿರಾ ಗಾಂಧಿ ಅವರು ಬ್ಯಾಂಕ್‌ಗಳನ್ನು ರಾಷ್ಟ್ರೀಕರಣ ಮಾಡಿದ ಮೇಲೆ ವಾಣಿಜ್ಯ ಬ್ಯಾಂಕ್‌ಗಳು ಐದು ವರ್ಷಗಳ ಕಾಲ ರೈತರಿಗೆ ಸಾಲ ನೀಡಿ, ನಂತರ ಉದ್ಯಮಿಗಳು, ಕೈಗಾರಿಕೋದ್ಯಮಿಗಳತ್ತ ಮುಖಮಾಡಿದವು. ಆಗ ಸಹಕಾರಿ ಬ್ಯಾಂಕ್‌ಗಳು ರೈತರಿಗೆ ನೆರವಾದವು. ವಾಣಿಜ್ಯ ಬ್ಯಾಂಕ್‌ಗಳ ಸಾಲದ ನಷ್ಟವನ್ನು ಭರಿಸಲು ಕೋಟ್ಯಾಂತರ ರೂಪಾಯಿ ನೀಡುವ ಕೇಂದ್ರ ಸರ್ಕಾರ, ಸಹಕಾರ ಬ್ಯಾಂಕ್‌ಗಳ ನಷ್ಟ ಪರಿಹಾರಕ್ಕೆ ಹಣ ನೀಡಿಲ್ಲ. ವರ್ಷಗಳು ಕಳೆದಂತೆ ನಬಾರ್ಡ್‌ನಿಂದ ಬರುವ ಹಣವೂ ಕಡಿಮೆಯಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಪುಣ್ಯದ ಕೆಲಸ: ಸಹಕಾರ ಕ್ಷೇತ್ರದಲ್ಲಿ ಕೆಲಸ ಮಾಡುವುದು ಸೌಭಾಗ್ಯ. ಸಾವಿರಾರು ರೈತರ ಸಮಸ್ಯೆಗಳಿಗೆ ಸ್ಪಂದಿಸುವುದರ ಜೊತೆಗೆ ಸಾಲ ಸೌಲಭ್ಯದ ಮೂಲಕ ಕೃಷಿಗೆ ನೆರವಾಗಬಹುದು. ನಾನು ಬಡ ರೈತನ ಮಗ. ಕೃಷಿ ಮಾಡಿಕೊಂಡು ಬಂದ ನಾನು ಬ್ಯಾಂಕ್ ಪಾಸ್ ಪುಸ್ತಕ ಸೇರಿ ಲೆಕ್ಕ ಬರೆಯುವುದನ್ನು ಕಲಿತುಕೊಂಡೆ. 1972ರಲ್ಲಿ ಸೊಸೈಟಿ ಕಾರ್ಯದರ್ಶಿಯಾಗಿದ್ದ ನನಗೆ ಕ್ಯಾಷ್ ಬುಕ್, ಲಾಗ್, ಲೆಡ್ಜರ್ ಎಲ್ಲವನ್ನು ಸರಿಯಾಗಿ ನಿರ್ವಹಣೆ ಮಾಡಿದ್ದರಿಂದ ಪ್ರಥಮ ಬಹುಮಾನ ಬಂದಿತು. ಸ್ವಚ್ಛತೆಯಿಂದ ಹಿಡಿದು ಎಲ್ಲಾ ಕೆಲಸ ನಾನೇ ಮಾಡುತ್ತಿದ್ದೆ. ನಾನೇ ಬೆಳೆಸಿದ ವ್ಯಕ್ತಿ ನನ್ನನ್ನು ಸೊಸೈಟಿಯಲ್ಲಿ ಅಕ್ಕಿ ತೂಗುತ್ತಿದ್ದ ಎಂದು ಹೀಯಾಳಿಸಿದ್ದ. ನಾವು ಬಡವರ ಪರವಾಗಿ ಕೆಲಸ ಮಾಡಿದ ಫಲವೆಂಬಂತೆ ದೇವರ ಆಶೀರ್ವಾದ ಸಿಕ್ಕಿದೆ ಎಂದು ಸಹಕಾರ ಕ್ಷೇತ್ರದಲ್ಲಿ ಬೆಳೆದು ಬಂದ ದಿನಗಳನ್ನು ನೆನೆದರು.

ಆರೋಗ್ಯ ಮುಖ್ಯ: ಧ್ಯಾನ, ಯೋಗ, ವಾಯು ವಿಹಾರ ಮಾಡಿಕೊಂಡು ಆರೋಗ್ಯ ಕಾಪಾಡಿಕೊಳ್ಳಬೇಕು. ಮನೆಯಲ್ಲಿ ಸಣ್ಣಪುಟ್ಟ ವ್ಯತ್ಯಾಸವಾದರೂ ಅದನ್ನು ಸರಿಪಡಿಸಿಕೊಳ್ಳಬೇಕು. ಕೋಪವನ್ನು ಬದಿಗೊತ್ತಿ ತಾಳ್ಮೆಯಿಂದ ಇದ್ದರೆ ಸಮಸ್ಯೆ ತಾನಾಗಿಯೇ ದೂರವಾಗುತ್ತದೆ. ರೈತರು ಯಾವುದೇ ಕಾರಣಕ್ಕೂ ಜಮೀನು ಮಾರಾಟ ಮಾಡಿ, ಮಕ್ಕಳ ಮದುವೆಯನ್ನು ಅದ್ದೂರಿಯಾಗಿ ಮಾಡುವ ಯೋಚನೆಯನ್ನೂ ಮಾಡಬಾರದು. ಸರಳ ವಿವಾಹ ಮಾಡಿ ಅದೇ ಜಮೀನನ್ನು ಮಗಳ ಹೆಸರಿನಲ್ಲಿ ಬರೆದರೆ ಎಲ್ಲರೂ ಖುಷಿಯಿಂದ ಜೀವನ ನಡೆಸಬಹುದು ಎಂದು ಕಿವಿಮಾತು ಹೇಳಿದರು.

ಕರ್ನಾಟಕ ರಾಜ್ಯಸಹಕಾರಿ ಅಪೆಕ್ಸ್ ಬ್ಯಾಂಕ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಸಿ.ಎನ್.ದೇವರಾಜು ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ಕಾರ್ಯದರ್ಶಿ ಅಶ್ವಥ ನಾರಾಯಣ, ಅಪೆಕ್ಸ್ ಬ್ಯಾಂಕ್ ಮುಖ್ಯ ಪ್ರಧಾನ ವ್ಯವಸ್ಥಾಪಕ ಕೆ.ಕೆ.ರಂಗಸ್ವಾಮಿ, ಮಹಾಮಂಡಳದ ಕಾರ್ಯಕ್ರಮ ಸಮನ್ವಯಾಧಿಕಾರಿ ಎಸ್.ಎನ್. ವೇಣುಗೋಪಾಲ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ ಶನಿವಾರ 14 ಫೆಬ್ರವರಿ 2026

ಅಯ್ಯಂಗೇರಿಯ ಶ್ರೀ ಕೃಷ್ಣ ಚಿನ್ನತಪ್ಪ ವಾರ್ಷಿಕೋತ್ಸವ



ಅಯ್ಯಂಗೇರಿಯ ಶ್ರೀ ಕೃಷ್ಣ ಚಿನ್ನತಪ್ಪ ದೇವಸ್ಥಾನ

ನಾಪೋಕ್ಲು, ಫೆ.13– ಇಲ್ಲಿಗೆ ಸಮೀಪದ ಅಯ್ಯಂಗೇರಿಯ ಶ್ರೀ ಕೃಷ್ಣ ಚಿನ್ನತಪ್ಪ ದೇವರ ವಾರ್ಷಿಕೋತ್ಸವ ಮಾ.11ರಿಂದ 13ರವರೆಗೆ ನಡೆಸಲು ತೀರ್ಮಾನಿಸಲಾಯಿತು.

ಅಯ್ಯಂಗೇರಿ ಗ್ರಾಮದ ಶ್ರೀ ಕೃಷ್ಣ ಚಿನ್ನತಪ್ಪ ದೇವಸ್ಥಾನದ ಆವರಣದಲ್ಲಿ ಬಿದ್ದಿಯಂಡ ಸುಭಾಷ್‌ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ವಾರ್ಷಿಕೋತ್ಸವದ ದಿನವನ್ನು ನಿಗದಿಪಡಿಸಿದಂತೆ ಮಾ.11 ರಿಂದ 13ರವರೆಗೆ ನಡೆಸಲು ಸರ್ವ ಸಮಿತಿಯವರ ಒಪ್ಪಿಗೆಯಂತೆ ತೀರ್ಮಾನಿಸಲಾಯಿತು.

ತಕ್ಕ ಮುಖ್ಯಸ್ಥರು ಆಡಳಿತ ಮಂಡಳಿಯ ಕಾರ್ಯದರ್ಶಿ ತೋತ್ತಿಯಂಡ ಸಂಜು, ಪದಾಧಿಕಾರಿಗಳು, ಸದಸ್ಯರು ಮತ್ತು ಊರವರು ಉಪಸ್ಥಿತರಿದ್ದರು.

ಮಾನಸಿಕವಾಗಿ ಸದೃಢರಾಗಲು ಕ್ರೀಡೆಯಲ್ಲಿ ತೊಡಗಿಸಿಕೊಳ್ಳಿ



ಗ್ರಾಮೀಣ ಕ್ರೀಡಾಕೂಟವನ್ನು ಶಾಸಕ ಎ.ಎಸ್.ಪೊನ್ನಣ್ಣ ಭಾರದ ಗುಂಡು ಎಸೆಯುವ ಮೂಲಕ ಉದ್ಘಾಟಿಸಿದರು.

ವಿರಾಜಪೇಟೆ, ಫೆ13– ಕ್ರೀಡೆಯಲ್ಲಿ ಹೆಚ್ಚು ಹೆಚ್ಚು ತೊಡಗಿಸಿಕೊಳ್ಳುವುದರಿಂದ ದೈಹಿಕ, ಮಾನಸಿಕವಾಗಿ ಸದೃಢರಾಗಲು ಸಾಧ್ಯ ಎಂದು ಶಾಸಕ ಎ.ಎಸ್.ಪೊನ್ನಣ್ಣ ಹೇಳಿದ್ದಾರೆ.

ಇಲ್ಲಿನ ತಾಲೂಕು ಮೈದಾನದಲ್ಲಿ ಆಯೋಜಿಸಲಾಗಿದ್ದ ಗ್ರಾಮೀಣ ಕ್ರೀಡಾಕೂಟವನ್ನು ಖಂಜಿರ ಬಾರಿಸುವ ಮೂಲಕ ಉದ್ಘಾಟಿಸಿ, ಗ್ರಾಮೀಣ ಕ್ರೀಡಾಕೂಟ ಸಂಸ್ಕೃತಿ ಉಳಿಯಲು ನಾವುಗಳು ಅದಕ್ಕೆ ಉತ್ತೇಜನ ನೀಡುವ ಮೂಲಕ ಮುಂದಿನ ಪೀಳಿಗೆಗೆ ಉಳಿಸಿ ಬೆಳೆಸಿಕೊಂಡು ಹೋಗುವಂತಾಗಬೇಕು. ಇಂದಿನ ಯುವ ಜನಾಂಗ ಕ್ರೀಡಾ ಮನೋಭಾವನೆ ಬೆಳೆಸಿಕೊಳ್ಳಬೇಕು, ಎಂದು ಹೇಳಿದ ಬಳಿಕ ಕ್ರೀಡಾಕೂಟದಲ್ಲಿ ಭಾಗವಹಿಸಿ ಭಾರದಗುಂಡು ಎಸೆದರು.

ಜಿಲ್ಲಾ ಜಾನಪದ ಪರಿಷತ್ ಅಧ್ಯಕ್ಷ ಬಿ.ಜಿ.ಅನಂತಶಯನ ಮಾತನಾಡಿ, ಗ್ರಾಮೀಣ ಭಾಗದಲ್ಲಿ ಎಲೆ ಮರೆ ಕಾಯಿಯಂತಿರುವ ಕಲಾವಿದರನ್ನು ಗುರುತಿಸಿ 10 ವರ್ಷಗಳಿಂದಲೂ ರಾಜ್ಯ ಮಟ್ಟದ ಪ್ರಶಸ್ತಿಯನ್ನು ನೀಡುತ್ತಿದೆ. ಜಾನಪದದಲ್ಲಿ ಅಹಂ ಇರಬಾರದು. ಒಂದು ಕುಟುಂಬದವರಂತೆ ಇರುವಂತಾಗಬೇಕು. ಕಲಾವಿದರು ಸಿಗುವಂತಹ ವೇದಿಕೆಯ ಅವಕಾಶವನ್ನು ಬಳಸಿಕೊಂಡು ರಾಜ್ಯ ಮಟ್ಟದಲ್ಲಿ ಭಾಗವಹಿಸುವಂತಾಗಬೇಕು. ಎಂದರು.

ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಕೇಶವ ಕಾಮತ್, ನಿಕಟಪೂರ್ವ ಅಧ್ಯಕ್ಷ ಲೋಕೇಶ್ ಸಾಗರ್, ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ನಿರ್ದೇಶಕರಾದ ಲೀಲಾವತಿ ಮಾತನಾಡಿದರು. ವೇದಿಕೆಯಲ್ಲಿ ಪುರಸಭೆ ಮಾಜಿ ಅಧ್ಯಕ್ಷೆ ಮನೆಯಪಂಡ ದೇಚಮ್ಮ ಕಾಳಪ್ಪ, ಜಾನಪದ ಪರಿಷತ್ ಕಾರ್ಯದರ್ಶಿ ಉಜ್ವಲ್ ರಂಜಿತ್, ವಿರಾಜಪೇಟೆ ಘಟಕದ ಅಧ್ಯಕ್ಷ ಟೋಮಿ ಥಾಮಸ್, ಪ್ರಧಾನ ಕಾರ್ಯದರ್ಶಿ ರಜಿತಾ ಕಾರ್ಯಪ್ಪ, ಪೊನ್ನಂಪೇಟೆ ಘಟಕದ ಅಧ್ಯಕ್ಷ ದಿಲನ್ ಚೆಂಗಪ್ಪ, ಪ್ರಧಾನ ಕಾರ್ಯದರ್ಶಿ ಗೀತಾ ನಾಯ್ದು, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನಾಧಿಕಾರಿ ಪಿ. ಹರೀಶ್, ಕುಶಾಲನಗರ ಘಟಕದ ಅಧ್ಯಕ್ಷ ಚಂದ್ರಮೋಹನ್, ಜಿಲ್ಲಾ ಘಟಕದ ಖಜಾಂಚಿ ಸಂಪತ್ ಕುಮಾರ್, ನವೀನ್ ಅಂಬೇಕಲ್, ಮುಂತಾದವರು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಗೌರಮ್ಮ ದತ್ತಿನಿಧಿ ಪ್ರಶಸ್ತಿ ಪುರಸ್ಕೃತೆ ಸಾಹಿತಿ ಕೃಪಾ ದೇವರಾಜು ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೇಲ್ವಿಚಾರಕ ಶಿವಕುಮಾರ್, ಸೇವಾ ಪ್ರತಿನಿಧಿಗಳಾದ ಮೀನಾಕ್ಷಿ, ವೀಣಾ, ಜೇಮ್ಸ್, ಬಿಂದು, ಜಾನಪದ ಪರಿಷತ್ತಿನ ಪದಾಧಿಕಾರಿಗಳಾದ ವೀಣಾ ರವಿ, ಫ್ಯಾನ್ಸಿ ಮುತ್ತಣ್ಣ, ರಂಜಿತ ಕವಲಪಾರ, ರಂಜಿತ್ ಕಿಗ್ಗಾಲು, ರಂಜಿನಿ, ಪ್ರಮಿಳಾ ನಾಚಯ್ಯ, ಗೌರು ನಂಜಪ್ಪ, ಶೋಭಾ ಸುಬ್ಬಯ್ಯ, ಕೃಪಾ ದೇವರಾಜ್, ಜಿಲ್ಲಾ ಘಟಕದ ಉಪಾಧ್ಯಕ್ಷರಾದ ಅಂಬೇಕಲ್ ಕುಶಾಲಪ್ಪ, ಪದಾಧಿಕಾರಿಗಳಾದ ನಳಿನಾಕ್ಷಿ, ಅನಿತಾ, ರಾಜೇಶ್, ಟಿ.ಡಿ. ಮೋಹನ್, ಚಂಬಂಡ ಮುದ್ದಪ್ಪ, ಗಿರೀಶ್ ಕಿಗ್ಗಾಲು, ಹರೀಶ್ ಕಿಗ್ಗಾಲು, ಹಾತಿ ಜಯಪ್ರಕಾಶ್, ಸಿದ್ದರಾಜು ಬೆಳ್ಳಯ್ಯ, ಪ್ರೇಮ ರಾಘವಯ್ಯ, ವೈಲೇಶ್, ವಾಂಚೀರ ನಾಣಯ್ಯ ಸೇರಿದಂತೆ ಹಲವರಿದ್ದರು. ಬಳಿಕ ವಿವಿಧ ಗ್ರಾಮೀಣ ಕ್ರೀಡಾಕೂಟ ನಡೆಯಿತು.

ಕಾರುಗಳ ಮುಖಾಮುಖಿ ಡಿಕ್ಕಿ: ಇಬ್ಬರಿಗೆ ಗಾಯ

ಅಪಘಾತವಾಗಿದ್ದ ಕಾರಿನ ಮೇಲೆ ಬಿದ್ದ ಲಾರಿ



ಸುಂಟಿಕೊಪ್ಪ, ಫೆ.13–ಕೊಡಗರಹಳ್ಳಿ ಮಾರುತಿ ನಗರದ ಬಳಿ ಗುರುವಾರ ತಡರಾತ್ರಿ ರಿಟ್ಜ್ ಹಾಗೂ ಬೊಲೆನೋ ಕಾರುಗಳ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿದೆ. ನಂತರ ಅದೇ ಜಾಗದಲ್ಲಿ ಮರದ ದಿಮ್ಮಿಗಳನ್ನು ಸಾಗಾಟ ಮಾಡುತ್ತಿದ್ದ ಮೂರ್ನಾಡಿನ ಲಾರಿ ಮಗುಚಿಕೊಂಡು ಮತ್ತೊಂದು ಅವಘಡ ಸಂಭವಿಸಿದೆ.

ಕೊಡಗರಹಳ್ಳಿ ರಾಷ್ಟ್ರೀಯ ಹೆದ್ದಾರಿ 275ರ ಮಾರುತಿ ನಗರದ ಬಳಿ ತಡರಾತ್ರಿ 11 ಗಂಟೆಯ ಸಂದರ್ಭದಲ್ಲಿ ಕುಶಾಲನಗರ ಕಡೆಯಿಂದ ಮಡಿಕೇರಿ ಕಡೆಗೆ ಆಗಮಿಸುತ್ತಿದ್ದ ರಿಟ್ಜ್ ಹಾಗೂ ಮಡಿಕೇರಿ ಕಡೆಯಿಂದ ಕುಶಾಲನಗರಕ್ಕೆ ತೆರಳುತ್ತಿದ್ದ ಬೊಲೆನೋ ಕಾರುಗಳ ನಡುವೆ ಅಪಘಾತ ಸಂಭವಿಸಿ ರಿಟ್ಜ್ ಕಾರಿನಲ್ಲಿ ಪ್ರಯಾಣಿಸುತ್ತಿದ್ದ ಮಹಿಳೆ ಹಾಗೂ ಬೊಲೆನೋ ಕಾರಿನಲ್ಲಿ ಪ್ರಯಾಣಿಸುತ್ತಿದ್ದ ಒಬ್ಬರಿಗೆ ಸಣ್ಣಪುಟ್ಟ ಗಾಯಗಳಾಗಿತ್ತು. ಅಪಘಾತದ ಸ್ಥಳದಲ್ಲೇ ವಾಹನಗಳನ್ನು ರಾತ್ರಿ ಇರಿಸಲಾಗಿದ್ದು, ನಂತರ ಅದೇ ಜಾಗದಲ್ಲಿ ಮತ್ತೊಂದು ಅವಘಡ ನಡೆದಿದೆ.

ಶುಕ್ರವಾರ ನಸುಕಿನ ವೇಳೆ 4 ಗಂಟೆಗೆ ಮಡಿಕೇರಿ ಕಡೆಯಿಂದ ಮೈಸೂರಿನತ್ತ ಮರದ ದಿಮ್ಮಿಗಳನ್ನು ಸಾಗಾಟ ಮಾಡುತ್ತಿದ್ದ ಮೂರ್ನಾಡಿನ ಲಾರಿ ಅಪಘಾತದ ನಂತರ ರಸ್ತೆ ಬದಿ ನಿಂತಿದ್ದ ಬೊಲೆನೋ ಕಾರಿನ ಮೇಲೆ ಬಿದ್ದಿದೆ. ಇದರಿಂದ ಬೊಲೆನೋ ಕಾರು ಮತ್ತಷ್ಟು ಜಖಂಗೊಂಡಿದೆ. ಘಟನಾ ಸ್ಥಳಕ್ಕೆ ಸುಂಟಿಕೊಪ್ಪ ಪೊಲೀಸರು ತೆರಳಿ ಪರಿಶೀ ಲನೆ ನಡೆಸಿ ವಾಹನಗಳನ್ನು ವಶಕ್ಕೆ ಪಡೆದು ಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಗೌಡ ಸಮಾಜದ ಅಧ್ಯಕ್ಷರಾಗಿ ಮುಕ್ಕಾಟ್ಟಿ ವಾಸು ಗಣಪತಿ



ಗಣಪತಿ



ರೇಖಾ

ನಾಪೋಕ್ಲು, ಫೆ.13–ವಿರಾಜಪೇಟೆ ಗೌಡ ಸಮಾಜದ ನೂತನ ಆಡಳಿತ ಮಂಡಳಿ ಅಧ್ಯಕ್ಷರಾಗಿ ಮುಕ್ಕಾಟ್ಟಿ ವಾಸು ಗಣಪತಿ ಕಾರ್ಯದರ್ಶಿಯಾಗಿ ಮಂಜಂಡ್ರ ರೇಖಾ ಉಲ್ಲಾಸ್ ಆಯ್ಕೆಯಾಗಿದ್ದಾರೆ.

ಗೌಡ ಸಮಾಜಗಳ ಒಕ್ಕೂಟದ ಅಧ್ಯಕ್ಷ ಆನಂದ ಕರಂದಲಾಜೆ ಅಧ್ಯಕ್ಷತೆಯಲ್ಲಿ ವಿರಾಜಪೇಟೆ ಗೌಡ ಸಮಾಜದಲ್ಲಿ ಜರುಗಿದ ವಿಶೇಷ ಮಹಾಸಭೆಯಲ್ಲಿ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಉಪಾಧ್ಯಕ್ಷರಾಗಿ ತಡಿಯಪ್ಪನ ನರೇಂದ್ರ ಮತ್ತು ಪೊಕ್ಕುಳಂಡ್ರಾ ರಮೇಶ್, ಜಂಟಿ ಕಾರ್ಯದರ್ಶಿ ಚಂಡಿರ ಸುಂದರ, ಖಜಾಂಚಿ ಬಿಳಿಯಂಡ್ರ ಹರಿಪ್ರಸಾದ್, ನಿರ್ದೇಶಕರಾಗಿ ಗೌಡ ದಾರೆ ಚೋಟು ಬಿದ್ದಪ್ಪ, ಕತ್ರಿ ಕೊಲ್ಲಿ ನಂಜುಂಡ, ತೆಕ್ಕಡೆ ಗಾಯತ್ರಿ, ಉಪ್ಪಂಡಿ ಬಾಬಿ ದೇವಯ್ಯ, ಪೊ ಕ್ಕುಳಂಡ್ರಾ ಧನುಜ್(ದಿವ್ಯ) ಮುಕ್ಕಾಟಿ ದಿಲೀಪ್, ಪೊಕ್ಕುಳಂಡ್ರಾ ದಿನೇಶ್, ಕಾಯರ ತೋಡಿ ನಾಣಯ್ಯ, ಕೊಂಪುಳಿರ ಪೃಥ್ವಿ, ಜೈನೀರ ತನು ತಮ್ಮಯ್ಯ, ಗೌರವಾಧ್ಯಕ್ಷರು ಕೆ.ವಿ.ಚಿದಾನಂದ, ಕೆ.ವಿ.ರೇಣುಕಾ ಪ್ರಸಾದ್, ಖಾಯಂ ಸಲಹೆಗಾರರು ಗೌಡ ಸಮಾಜಗಳ ಒಕ್ಕೂಟದ ಅಧ್ಯಕ್ಷ ಆನಂದ್ ಕರಂದಲಾಜೆ, ಉಪಾಧ್ಯಕ್ಷ ಡಾ. ತೇನನ ರಾಜೇಶ್ ಮಂಡಳಿಯಲ್ಲಿ ಇರುವರು.

ಸಮಾಜದ ಪ್ರಮುಖರು ಉಪಸ್ಥಿತರಿದ್ದರು

ಫೆ.28ರಿಂದ ಮೊಗೇರ ದುಡಿ ಆಯನ ಸಮಾರಂಭ

ಮಡಿಕೇರಿ, ಫೆ.13–ಅತ್ಯಂತ ಶ್ರೀಮಂತ ಸಂಸ್ಕೃತಿಯನ್ನು ಹೊಂದಿರುವ ಮೊಗೇರ ಸಮಾಜದ ಮೂಲ ಸಮಸ್ಯೆಗಳ ಬಗೆಹರಿಕೆಗೆ ಪೂರಕವಾಗಿ, ಸಮಾಜವನ್ನು ಸಂಘಟಿಸುವ ಪ್ರಮುಖ ಉದ್ದೇಶದೊಂದಿಗೆ ಫೆ.28 ಮತ್ತು ಮಾ.1ರಂದು ಸುಳ್ಯದ ಕೊಡಿಯಾಲ್‌ಬೈಲ್ ಸಮುದಾಯ ಭವನದಲ್ಲಿ 'ಮೊಗೇರ ದುಡಿ ಆಯನ ಸಮಾರಂಭ'ವನ್ನು ಆಯೋಜಿಸಲಾಗಿದೆ ಎಂದು ರಾಜ್ಯ ಮೊಗೇರ ಸಂಘದ ಅಧ್ಯಕ್ಷ ನಂದರಾಜ್ ಸಂಕೇಶ್ ತಿಳಿಸಿದ್ದಾರೆ.

ಪ್ರಸ್ತುತ ಮೊಗೇರ ಸಮಾಜವನ್ನು ಪ್ರವರ್ಗ 2ಕ್ಕೆ ಒಳಪಡಿಸಿ, ಶೇ.6ರ ಒಳ ಮೀಸಲಾತಿಯನ್ನು ಸರ್ಕಾರ ಒದಗಿಸಿರುವುದಾಗಿ ತಿಳಿಸಿದ ಅವರು, ಮತ್ತಷ್ಟು ಸಮಸ್ಯೆಗಳ ಬಗ್ಗೆ ಸರ್ಕಾರದ ಗಮನ ಸೆಳೆಯುವ ಮತ್ತು ನಮ್ಮ ಸಮೂಹದ ಶಕ್ತಿಯನ್ನು ಸಮಾಜಕ್ಕೆ ತೋರಿಸುವ ಉದ್ದೇಶದಿಂದ ದುಡಿ ಆಯನ ಸಮಾರಂಭವನ್ನು ಆಯೋಜಿಸಲಾಗುತ್ತಿದೆ ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಮೊಗೇರ ಸಂಘದ ರಾಜ್ಯ ಕಾರ್ಯಾಧ್ಯಕ್ಷ ಕರುಣಾಕರ ಪಲ್ಲತ್ತಡ್ಕ ಮಾತನಾಡಿ, ಮೊಗೇರ ಸಂಘ ಇದೀಗ ಸುವರ್ಣ ಸಂಭ್ರಮದಲ್ಲಿರುವ ಸಮಾಜವು ಎರಡು ದಿನಗಳ ಕಾಲ ಆಯೋಜಿಸಿರುವ ಮೊಗೇರ ದುಡಿ ಆಯನ ಸಮಾರಂಭದಲ್ಲಿ ಸಮಾಜಕ್ಕೆ ಸೇರಿದ ಸಾಂಸ್ಕೃತಿಕ ಕಲಾ ಪ್ರಕಾರಗಳು, ಜಾನಪದ ಕ್ರೀಡೆಗಳ ಪ್ರದರ್ಶನಗಳನ್ನು ಆಯೋಜಿಸಲಾಗಿದೆ ಎಂದರು. ಸಮಾಜದ ಜಿಲ್ಲಾ ಅಧ್ಯಕ್ಷ ಪಿ.ಎಂ.ರವಿ ಮಾತನಾಡಿ, ಇದೊಂದು ಐತಿಹಾಸಿಕವಾದ ಕಾರ್ಯಕ್ರಮವಾಗಿದ್ದು, ಈಗಾಗಲೇ ಸಮಾಜ ಬಾಂಧವರ ಮನೆ ಮನೆ ಭೇಟಿ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಸಮಾರಂಭಕ್ಕೆ ಜಿಲ್ಲೆಯ ಶಾಸಕರುಗಳು ಮತ್ತು ಸಂಸದರನ್ನು ಆಹ್ವಾನಿಸಲಾಗಿದೆ ಎಂದು ಮಾಹಿತಿ ನೀಡಿದರು. ಸಂಘದ ರಾಜ್ಯ ಉಪಾಧ್ಯಕ್ಷ ಪಿ.ಕೆ.ಚಂದ್ರು ಮಾತನಾಡಿ, ಮೊಗೇರ ದುಡಿ ಆಯನ ಸಮಾರಂಭವನ್ನು ಫೆ.28ರಂದು ಬೆಳಗ್ಗೆ 9ಕ್ಕೆ ಸಂಘದ ಸ್ಥಾಪಕ ಸದಸ್ಯರಾದ ಶುಭೋದಯ ಕೂಡ್ಲು ಅವರು ನೆರವೇರಿಸಲಿದ್ದಾರೆ. ಸಭಾಧ್ಯಕ್ಷತೆಯನ್ನು ರಾಜ್ಯಾಧ್ಯಕ್ಷ ನಂದರಾಜ್ ಸಂಕೇಶ್ ವಹಿಸಲಿದ್ದಾರೆ. ಅಂದು ಮಧ್ಯಾಹ್ನ ವಿವಿಧ ಕ್ಷೇತ್ರಗಳ ಸಾಧಕರಿಗೆ ಗೌರವಾರ್ಪಣೆ, ಸಾಂಸ್ಕೃತಿಕ ವೈವಿಧ್ಯ, ಪ್ರತಿನಿಧಿ ಅಧಿವೇಶನ, ಸಂಜೆ ಡಾ.ಅಂಬೇಡ್ಕರ್ ಬದುಕು ಮತ್ತು ಹೋರಾಟದ ಉಪನ್ಯಾಸ ಕಾರ್ಯಕ್ರಮ ನಡೆಯಲಿದೆ ಎಂದು ಮಾಹಿತಿ ನೀಡಿದರು. ಮಾ.1ರಂದು ಬೆಳಗ್ಗೆ 10 ಗಂಟೆಗೆ ವಿವಿಧ ಕಲಾ ತಂಡಗಳೊಂದಿಗೆ ವರ್ಣರಂ ಜಿತ ಮೆರವಣಿಗೆ, ಬಳಿಕ ಬಹಿರಂಗ ಸಭೆ ನಡೆಯಲಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಕೊಡಗು ಮೊಗೇರ ಸೇವಾ ಸಮಾಜದ ಅಧ್ಯಕ್ಷ ಪಿ.ಬಿ.ಜನಾರ್ಧನ ಮರಗೋಡು, ದುಡಿ ಆಯನ ಸಮಾರಂಭದ ಆಯೋಜನಾ ಸಮಿತಿಯ ಸಂಚಾಲಕ ಅಚ್ಚುತ ಮೆಲ್ಕಾಜೆ ಉಪಸ್ಥಿತರಿದ್ದರು.

ಇಂದು ಕೆಡ್ಡಸ ದಿನಾಚರಣೆ

ನಾಪೋಕ್ಲು, ಫೆ.13 (ದುಗ್ಗಳ)– ಕೆಡ್ಡಸ ದಿನಾಚರಣೆಯು ಫೆ.14 ರಂದು ಸುಳ್ಯದಲ್ಲಿ ನಡೆಯಲಿದೆ. ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ, ಮತ್ತು ಮಹಾತ್ಮ ಗಾಂಧಿ ಮಲ್ನಾಡು ಆಂಗ್ಲ ಮಾಧ್ಯಮ ಪ್ರೌಢಶಾಲೆ ಕೊಡಿಯಾಲಬೈಲು ಸಹಯೋಗದಲ್ಲಿ ಕೆಡ್ಡಸ ದಿನಾಚರಣೆಯು ಫೆ14 ರಂದು ಬೆಳಗ್ಗೆ 10 ಸುಳ್ಯ ಕೊಡಿಯಾಲಬೈಲ್ ಗೌಡ ಸಮಯದಾಯ ಭವನದಲ್ಲಿ ಆಯೋಜಿಸಲಾಗಿದೆ. ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಜಿ, ನೆಹರು ಮೆಮೋರಿಯಲ್ ಕಾಲೇಜಿನ ವಿಶ್ರಾಂತ ಪ್ರಾಂಶುಪಾಲ ಪ್ರೊ.ಎಂ. ಬಾಲಚಂದ್ರ ಗೌಡ, ಶ್ರೀ ಶಾರದಾ ಪದವಿ ಪೂರ್ವ ಕಾಲೇಜಿನ ಅರ್ಥಶಾಸ್ತ್ರ ಉಪನ್ಯಾಸಕ ಎ.ಎಸ್. ಸ್ವರ್ಣಲತಾ ಪಾಲ್ಗೊಳ್ಳಲಿದ್ದಾರೆ.

ಬಸವೇಶ್ವರ ದೇವಸ್ಥಾನದಲ್ಲಿ ನಾಳೆ ರುದ್ರಾಭಿಷೇಕ



ವಿರಾಜಪೇಟೆ, ಫೆ.13 –ಶಿವರಾತ್ರಿ ಹಬ್ಬದ ಪ್ರಯುಕ್ತ ಪಟ್ಟಣದ ಜೈನರ ಬೀದಿಯಲ್ಲಿರುವ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಫೆ.15ರ ಬೆಳಿಗ್ಗೆ 8 ಗಂಟೆಯಿಂದ ಶ್ರೀ ಬಸವೇಶ್ವರ ದೇವರಿಗೆ ರುದ್ರಾಭಿ ಷೇಕ ವಿಶೇಷ ಪೂಜೆ ಮಹಾಪೂಜೆ ಬಳಿಕ ಪ್ರಸಾದ ವಿತರಣೆ ಕಾರ್ಯಕ್ರಮ ನಡೆಯಲಿದೆ.

ರಾತ್ರಿ 7ಗಂಟೆಗೆ ದೇವರಿಗೆ ವಿಶೇಷ ಪೂಜೆಗಳು ನಡೆದು ಬಳಿಕ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ಳಾರೆ ಬಾಚೂಡಿ ವೆಂಕಟೇಶ್ ಪೈ ಹಾಗೂ ತಂಡದೊಂದಿಗೆ ರಾತ್ರಿ ಭಜನೆ ಹಾಗೂ ದೇವರ ಗೀತ ಗಾಯನ ಕಾರ್ಯಕ್ರಮ ನಡೆಯಲಿದೆ. ಮತ್ತು ಪ್ರತಿ ತಿಂಗಳು ಎರಡನೇ ಶನಿವಾರ ಬಸವೇಶ್ವರ ದೇವಸ್ಥಾನದಲ್ಲಿ ನಡೆಯುವ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆಯನ್ನು ನಾಳೆ (ಫೆ14) ಸಂಜೆ 6ಗಂಟೆಗೆ ನಡೆಸಲಾಗುವುದು ಎಂದು ಸಮಿತಿ ಅಧ್ಯಕ್ಷ ಎನ್. ರವಿಂದ್ರನಾಥ್ ಕಾಮತ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತ್ಯಾಜ್ಯಗಳನ್ನು ಎಲ್ಲೆಂದರಲ್ಲಿ ಎಸೆಯದೆ ಸ್ವಚ್ಛತೆ ಕಾಪಾಡಿ



ಹೆಚ್.ಪಿ.ಮಂಜುನಾಥ್, ಕೆ.ಎಂ.ಜೆಕಬ್, ಡಾ ಹರಿ ಎ ಶೆಟ್ಟಿ ಕ್ರಜ್ವಲ್ ಕೋಟ್ಸ್, ಎಂ ಡಿ ರಂಗಸ್ವಾಮಿ, ಕೆ ಎಸ್ ರಾಜಶೇಖರ್, ಆರತಿ ಎ ಶೆಟ್ಟಿ ಉಲ್ಲಾಸ್ ಕೃಷ್ಣ ಇದ್ದರು.

ಕುಶಾಲನಗರ, ಫೆ.13–ತ್ಯಾಜ್ಯಗಳನ್ನು ಎಲ್ಲೆಂದರಲ್ಲಿ ಎಸೆಯದೆ ಕಸದ ತೊಟ್ಟಿಗಳಲ್ಲಿ ವಿಲೇವಾರಿ ಮಾಡುವುದರ ಮೂಲಕ ಸ್ವಚ್ಛ ಜಿಲ್ಲೆಯಲ್ಲಿ ಸ್ವಚ್ಛತೆ ಕಾಪಾಡುವುದು ಪ್ರತಿಯೊಬ್ಬರ ಆದ್ಯ ಕರ್ತವ್ಯವಾಗಿದೆ ಎಂದು ಶಾಸಕ ಡಾ ಮಂತರ್ ಗೌಡ ಹೇಳಿದರು.

ರೋಟರಿ ಕುಶಾಲನಗರ 50ನೇ ವರ್ಷದ ಸಂಭ್ರಮದ ಅಂಗವಾಗಿ ಕುಶಾಲನಗರದ ಸರಕಾರಿ ಬಸ್ ನಿಲ್ದಾಣದ ಎದುರುಗಡೆ ನಿರ್ಮಿಸಿದ ಬೃಹತ್ ಬಾಟಲ್ ಮಾದರಿಯ ಒಣ ಕಸ ಸಂಗ್ರಹ ಘಟಕ ಉದ್ಘಾಟಿಸಿ, ಸ್ಥಳೀಯರು ಸೇರಿದಂತೆ ಪ್ರವಾಸಿಗರ ಒತ್ತಡದಿಂದ ಪಟ್ಟಣ ವ್ಯಾಪ್ತಿಯ ಸಾರ್ವಜನಿಕ ಸ್ಥಳಗಳಲ್ಲಿ ತ್ಯಾಜ್ಯಗಳ ಪ್ರಮಾಣ ಹೆಚ್ಚಳವಾಗುತ್ತಿದೆ ಎಂದರು.

ರೋಟರಿ ಅಧ್ಯಕ್ಷ ಮನು ಪೆಮ್ಮಯ್ಯ ಮಾತನಾಡಿದರು. ಯೋಜನಾ ಪ್ರಾಧಿಕಾರದ ಅಧ್ಯಕ್ಷ ಪ್ರಮೋದ್ ಮುತ್ತಪ್ಪ, ರೋಟರಿ ಅಧ್ಯಕ್ಷ ಮನು ಪೆಮ್ಮಯ್ಯ ಕಾರ್ಯದರ್ಶಿ

ರೈತ ಚೇತನ ಪ್ರೊ.ಎಂ.ಡಿ.ನಂಜುಂಡಸ್ವಾಮಿ ಹುಟ್ಟುಹಬ್ಬ ಅಂಗವಾಗಿ

'ಸ್ವಾಭಿಮಾನದೆಡೆಗೆ ಹಸಿರು ಸೇನಾನಿಗಳ ಕಾಲ್ನಡಿಗೆ' ಬೃಹತ್ ಜಾಥಾ



ಚಾ.ನಗರದಲ್ಲಿ ಸ್ವಾಭಿಮಾನದೆಡೆಗೆ ಹಸಿರು ಸೇನಾನಿಗಳ ಕಾಲ್ನಡಿಗೆ ಜಾಥಾ ಕಾರ್ಯಕ್ರಮ ನಡೆಯಿತು.

ಚಾಮರಾಜನಗರ, ಫೆ.13– ವಿಶ್ವ ರೈತ ಚೇತನ ಪ್ರೊ.ಎಂ.ಡಿ.ನಂಜುಂಡಸ್ವಾಮಿ ಅವರ 90ನೇ ಜನ್ಮ ದಿನಾಚರಣೆ ಅಂಗವಾಗಿ ನಗರದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯಿಂದ ಶುಕ್ರವಾರ 'ಸ್ವಾಭಿಮಾನದೆಡೆಗೆ ಹಸಿರು ಸೇನಾನಿಗಳ ಕಾಲ್ನಡಿಗೆ' ಬೃಹತ್ ಜಾಥಾ ನಡೆಯಿತು.

ಜಿಲ್ಲೆಯ ಚಾಮರಾಜನಗರ, ಯಳಂದೂರು, ಕೊಳ್ಳೇಗಾಲ, ಹನೂರು ಹಾಗೂ ಗುಂಡ್ಲುಪೇಟೆ ಸೇರಿದಂತೆ ವಿವಿಧೆಡೆಯಿಂದ ಆಗಮಿಸಿದ್ದ ಸಾವಿರಕ್ಕೂ ಹೆಚ್ಚು ರೈತ ಮುಖಂಡರು ನಗರದ ಎಪಿಎಂಸಿ ಮುಂಭಾಗ ಜಮಾಯಿಸಿದರು. ಬಳಿಕ ಅಲ್ಲಿಂದ ಗುಂಡ್ಲುಪೇಟೆ ಸರ್ಕಲ್, ದೊಡ್ಡಂಗಡಿ, ಚಿಕ್ಕಂಗಡಿ ಬೀದಿ, ಸಂತೇಮರಹಳ್ಳಿ ವೃತ್ತ, ಡಿವಿಯೇಷನ್ ರಸ್ತೆ, ಶ್ರೀಭುವನೇಶ್ವರಿ ವೃತ್ತ, ಬಿ.ರಾಚಯ್ಯ ಜೋಡಿ ರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಸಮಾವೇಶಗೊಂಡರು.

ವಿವಿಧ ಬೇಡಿಕೆಗೆ ಒತ್ತಾಯ: ಪ್ರತಿ 2 ಗಂಟೆಗೆ ಮೂವರು ರೈತರು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ಅನ್ನದಾತನ ಆತ್ಮಹತ್ಯೆ ನಿಲ್ಲಬೇಕು. ಅಭಿವೃದ್ಧಿ ನೆಪದಲ್ಲಿ ರೈತರ ಫಲವತ್ತಾದ ಕೃಷಿ ಭೂಮಿಯನ್ನು ರೈತರ ಅನುಮತಿಯನ್ನೇ ಪಡೆಯದೆ ಸ್ವಾಧೀನಪಡಿಸಿಕೊಳ್ಳಲು ನೋಟಿಸ್ ನೀಡುತ್ತಿರುವುದನ್ನು ತಕ್ಷಣವೇ ಕೈಬಿಡಬೇಕು ಎಂದು ಒತ್ತಾಯಿಸಿದರು.

ಡಾ.ಎಂ.ಎಸ್.ಸ್ವಾಮಿನಾಥನ್ ವರದಿಯ ಶಿಫಾರಸ್ಸಿನಂತೆ ಕನಿಷ್ಠ ಬೆಂಬಲ ಬೆಲೆಯನ್ನು ಎಲ್ಲಾ ಕೃಷಿ ಉತ್ಪನ್ನಗಳಿಗೂ ನಿಗದಿ ಮಾಡುವಂತೆ ಕಾನೂನು ಮಾಡಬೇಕು. ವಿಬಿ ಜಿ ರಾಮ್ ಜೀ ಯೋಜನೆಯನ್ನು ಕೈಬಿಟ್ಟು ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯನ್ನು ಪುನರ್ ಸ್ಥಾಪಿಸಿ ಕೃಷಿಗೆ ಪೂರಕವಾಗುವಂತೆ ತಿದ್ದುಪಡಿ ತರಬೇಕು ಮತ್ತು ಕನಿಷ್ಠ 600 ರೂ. ನಿಗದಿಪಡಿಸಬೇಕು ಎಂದು ಹೇಳಿದರು.

ಕೃಷಿ ವಲಯ ನಷ್ಟದಲ್ಲಿ ಮುಳುಗಿರುವ ಕಾರಣ ಕೃಷಿಯನ್ನು ಸಿಬಿಲ್‌ನಿಂದ ಹೊರಗಿಡಬೇಕು. ರೈತರು ಪಡೆಯುತ್ತಿರುವ ಸಾಲ ದೇಶದ ಆಹಾರದ ಸಾರ್ವಭೌಮತೆ ರಕ್ಷಿಸುವುದಕ್ಕಾಗಿ ಎಂಬ ಸತ್ಯವನ್ನು ಅರಿತು ಎಲ್ಲ ರೈತರಿಗೆ ಸಾಲ ಸುಲಭವಾಗಿ ಸಿಗುವಂತೆ ಸಾಲ ನೀತಿಯಲ್ಲಿ ತಿದ್ದುಪಡಿಗಳನ್ನು ತರಬೇಕು. ಭಾರತ ಅಮೆರಿಕಾ, ಯುರೋಪಿಯನ್ ಒಕ್ಕೂಟ ಸೇರಿದಂತೆ ಯಾವ ದೇಶಗಳ ಜೊತೆಯೂ ಕೃಷಿಗೆ ಸಂಬಂಧಿಸಿದ ಮುಕ್ತ ವಾಣಿಜ್ಯ ಒಪ್ಪಂದಗಳಿಗೆ ಸಹಿ ಹಾಕಬಾರದು ಎಂದು ಹೇಳಿದರು.

ಜಿಲ್ಲೆಯ ರಸ್ತೆಗಳು ಸಂಪೂರ್ಣ ಹದಗೆಟ್ಟಿದ್ದು ಕೂಡಲೇ ದುರಸ್ತಿಗೊಳಿಸಬೇಕು. ಶಾಲಾ ಮಕ್ಕಳಿಗೆ ಅನುಕೂಲವಾಗುವಂತೆ ಕೆಎಸ್‌ಆರ್‌ಟಿಸಿ ಬಸ್ ಸೌಲಭ್ಯ ಒದಗಿಸಬೇಕು. ಅರಣ್ಯ ಇಲಾಖೆಯವರು ಗೋಮಾಳ ಮತ್ತು ದೊಡ್ಡ ಕೆರೆಗಳನ್ನು ಒತ್ತುವರಿ ಮಾಡಿಕೊಂಡಿರುವುದನ್ನು ತಕ್ಷಣ ಬಿಡುಗಡೆಗೊಳಿಸಬೇಕು ಎಂದು ಆಗ್ರಹಿಸಿದರು.

ಕಾಲ್ನಡಿಗೆ ಜಾಥಾದಲ್ಲಿ ರಾಷ್ಟ್ರೀಯ ರೈತ ನಾಯಕರಾದ ರಾಕೇಶ್ ಟಿಕಾಯಿತ್, ಯುದ್ಧವೀರಸಿಂಗ್, ಪ್ರೊ.ಜಿ.ಎಸ್.ಜಯದೇವ್, ನಳಿನಿ ಕೋಲಾರ, ಚಿತ್ರನಟ ಅಶೋಕ್, ಹಿರಿಯ ವಕೀಲ ಜಯದೇವ, ಸಾಮೂಹಿಕ ನಾಯಕತ್ವದಲ್ಲಿ ರೈತ ಸಂಘ ಅಧ್ಯಕ್ಷ ಹೊನ್ನೂರು ಪ್ರಕಾಶ್ ಸೇರಿದಂತೆ ರೈತ ಮುಖಂಡರು, ಪದಾಧಿಕಾರಿಗಳು ಹಾಜರಿದ್ದರು.

ಪ್ರೊ.ಎಂ.ಡಿ.ನಂಜುಂಡಸ್ವಾಮಿಗೆ ಭಾರತರತ್ನ ನೀಡಲು ಆಗ್ರಹ



ಹೊಂಡರಬಾಳು ಅಮೃತ ಭೂಮಿಯಲ್ಲಿರುವ ಸ್ಮಾರಕಕ್ಕೆ ನಮನ ಸಲ್ಲಿಸಲಾಯಿತು.

ಚಾಮರಾಜನಗರ: ಪ್ರೊ.ಎಂ.ಡಿ.ನಂಜುಂಡಸ್ವಾಮಿ ಅವರಿಗೆ 'ಭಾರತ ರತ್ನ' ಪ್ರಶಸ್ತಿ ನೀಡಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘದ ಖಾಯಂ ಆಹ್ವಾನಿತ ಹೆಗ್ಗವಾಡಿಪುರ ಮಹೇಶ್ ಆಗ್ರಹಿಸಿದರು.

ಪ್ರೊ.ಎಂ.ಡಿ.ನಂಜುಂಡಸ್ವಾಮಿ ಅವರ 90ನೇ ಜನ್ಮ ದಿನಾಚರಣೆ ಅಂಗವಾಗಿ ತಾಲೂಕಿನ ಹೊಂಡರಬಾಳು ಅಮೃತ ಭೂಮಿಯಲ್ಲಿರುವ ಅವರ ಸ್ಮಾರಕಕ್ಕೆ ಪುಷ್ಪಾರ್ಚನೆ ಮಾಡಿ ಗೌರವ ನಮನ ಸಲ್ಲಿಸಿ ಮಾತನಾಡಿದರು.

ಅವರು ನಮ್ಮನ್ನು ಅಗಲಿ 22 ವರ್ಷಗಳಾಗಿವೆ. ಕೇಂದ್ರ, ರಾಜ್ಯ ಸರ್ಕಾರಗಳು ಅವರ ಬಗ್ಗೆ ಕಿಂಚಿತ್ತೂ ಗಮನಹರಿಸದಿರುವುದು ದೇಶದ ದುರಂತವಾಗಿದೆ. ಕೂಡಲೇ ಸರ್ಕಾರಗಳು ಅವರಿಗೆ ಭಾರತರತ್ನ ಪ್ರಶಸ್ತಿ ಘೋಷಿಸಬೇಕು, ಪಠ್ಯ ಪುಸ್ತಕದಲ್ಲಿ ಅವರ ವಿಚಾರಗಳನ್ನು ಸೇರಿಸಬೇಕು. ಕೃಷಿ ಪ್ರವಾಸೋದ್ಯಮ ಜಾರಿ ಮಾಡಬೇಕು ಎಂದು ಒತ್ತಾಯಿಸಿದರು. ರಾಜ್ಯ ರೈತ ಸಂಘದ ಕಾರ್ಯಾಧ್ಯಕ್ಷ ಎ.ಎಂ.ಮಹೇಶ್‌ಪ್ರಭು, ವಿಭಾಗೀಯ ಕಾರ್ಯದರ್ಶಿ ಸಿದ್ದರಾಜು, ಖಜಾಂಚಿ ಬಾಬು, ಜಯಣ್ಣ, ಮಲ್ಲನಗೌಡ, ಬಾಬು, ಭೂಪತಿ, ಚಿನ್ನಸ್ವಾಮಿಗೌಂಡರ್, ಯಶವಂತ ಇದ್ದರು.

ಚಾಮರಾಜನಗರ ಅಭಿವೃದ್ಧಿಗಾಗಿ ಪಂಜಿನ ಮೆರವಣಿಗೆ



ಅಭಿವೃದ್ಧಿಗೆ ಒತ್ತಾಯಿಸಿ ಕರವೇಯಿಂದ ಪಂಜಿನ ಮೆರವಣಿಗೆ ನಡೆಸಲಾಯಿತು.

ಚಾಮರಾಜನಗರ, ಫೆ.13– ಚಾಮರಾಜನಗರ ಅಭಿ ವೃದ್ಧಿಗೆ ಒತ್ತಾಯಿಸಿ ಕರ್ನಾಟಕ ರಕ್ಷಣಾ ವೇದಿಕೆ ಪ್ರವೀಣ್ ಶೆಟ್ಟಿ ಬಣದ ವತಿಯಿಂದ ನಗರದಲ್ಲಿ ಪಂಜಿನ ಮೆರವಣಿಗೆ ನಡೆಸಲಾಯಿತು.

ನಗರದ ಪ್ರವಾಸಿ ಮಂದಿರದ ಆವರಣದ ಬಳಿ ಸಮಾವೇಶಗೊಂಡ ಪ್ರತಿಭಟನಾನಿರತರು, ಅಲ್ಲಿಂದ ಪಂಜಿನ ಮೆರವಣಿಗೆಯಲ್ಲಿ ಭುವನೇಶ್ವರಿ ವೃತ್ತಕ್ಕೆ ತೆರಳಿ ಕೆಲಕಾಲ ಪ್ರತಿಭಟನೆ ನಡೆಸಿ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ವೇದಿಕೆ ತಾಲೂಕು ಅಧ್ಯಕ್ಷ ಕ್ವಾಲಿಟಿ ನವೀನ್ ಮಾತನಾಡಿ, ಜನಪ್ರತಿನಿಧಿಗಳು, ಜಿಲ್ಲಾಡಳಿತ, ಸರ್ಕಾರವಾಗಲೀ ನಗರದ ಅಭಿವೃದ್ಧಿಯ ಬಗ್ಗೆ ಧ್ವನಿ ಎತ್ತುತ್ತಿಲ್ಲ. ಕುಡಿಯುವ ನೀರಿನ ವ್ಯವಸ್ಥೆ ಸರಿ ಇಲ್ಲ. ಚರಂಡಿ ವ್ಯವಸ್ಥೆ ಇಲ್ಲ. ಪಚ್ಚಪ್ಪ ಸರ್ಕಲ್, ಮರಳ ಸರ್ಕಲ್, ಸೋಮವಾರ ಪೇಟೆ ರೋಡ್ ಹಾಗೂ ಮರಳ್ಳಿಗೆ ಹಾದು ಹೋಗುವ ರೋಡ್‌ನಲ್ಲಿ ವಿದ್ಯುತ್ ದೀಪಗಳಿಲ್ಲದೇ ಕಗ್ಗತ್ತಲಿನಲ್ಲಿ ಜನರು ಓಡಾಡುವಂತಾಗಿದೆ ಎಂದರು.

ಬಿ.ರಾಚಯ್ಯ ಜೋಡಿ ರಸ್ತೆಯಲ್ಲಿ ಕಾವೇರಿ ನೀರು ಚರಂಡಿಗೆ ಹೋಗುತ್ತಿರುವುದನ್ನು ಸರಿಪಡಿಸಿಲ್ಲ. ಪಚ್ಚಪ್ಪ ಸರ್ಕಲ್‌ನಲ್ಲಿ ಸಾರ್ವಜನಿಕರಿಗೆ ಸಾರ್ವಜನಿಕ ಶೌಚಾಲಯ ಇಲ್ಲ. ಕುಡಿಯುವ ನೀರಿನ ವ್ಯವಸ್ಥೆ ಇಲ್ಲ ಹಾಗೂ ಸರ್ಕಾರಿ ಆಸ್ಪತ್ರೆಯಲ್ಲಿ ನಡೆಯುತ್ತಿರುವ ಅವ್ಯವಹಾರಗಳು, ಆರ್‌ಟಿಓ ಆಫೀಸ್‌ನಲ್ಲಿ ಎಗ್ಗಿಲ್ಲದೆ ದಲ್ಲಾಳಿಗಳ ಹಾವಳಿ ನಡೆಯುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳೇ ಅವರ ಜೊತೆ ಶಾಮೀಲಾಗಿದ್ದಾರೆ. ಕೋಟ್ಯಾಂತರ ರೂಪಾಯಿ ಅನುದಾನ ತಂದು ನಗರದಲ್ಲಿ ಬಿಲ್ಡಿಂಗ್‌ಗಳು ಹಾಗೂ ಶೌಚಾಲಯಗಳನ್ನು ಮಾಡಿದ್ದೀರಾ. ಸಾರ್ವಜನಿಕರಿಗೆ ಅನುಕೂಲ ಆಗುತ್ತಿಲ್ಲ. ಈ ಎಲ್ಲಾ ಸಮಸ್ಯೆಗಳನ್ನು ಕೂಡಲೇ ನಗರಸಭೆ, ಜಿಲ್ಲಾಡಳಿತ ಬಗೆಹರಿಸಬೇಕು. ಇಲ್ಲದಿದ್ದರೆ ನಗರಸಭೆಗೆ ಬೀಗ ಹಾಕಿ ಅಹೋರಾತ್ರಿ ಧರಣಿ ಮಾಡಲಾಗುವುದು ಎಂದು ಎಚ್ಚರಿಸಿದರು.

ಮೆರವಣಿಗೆಯಲ್ಲಿ ಟೌನ್ ಅಧ್ಯಕ್ಷ ಮಹೇಂದ್ರ ಉಪ್ಪಾರ್, ಕಾರ್ಮಿಕ ಘಟಕದ ಅಧ್ಯಕ್ಷ ಹರೀಶ್ ನಾಯಕ್, ತಾಲೂಕು ಉಪಾಧ್ಯಕ್ಷರಾದ ಅವಿನಾಶ್, ಉಮೇಶ್, ಪ್ರಧಾನ ಕಾರ್ಯದರ್ಶಿ ಅರ್ಜುನ್. ಗೌರವ ಸಲಹೆಗಾರ ಅಮ್ಜದ್ ಉಲ್ಲಾ ಖಾನ್, ಕಾರ್ಯದರ್ಶಿ ರಾಜೇಂದ್ರ, ಗೌರವಾಧ್ಯಕ್ಷ ಪುರುಷೋತ್ತಮ್, ಅಫ್ಸನ್, ಫರಾಜ್, ನಲ್ಲೂರು ನಟರಾಜು, ಕಾಡಳ್ಳಿ ಕುಮಾರ, ಮಹದೇವಸ್ವಾಮಿ, ಗಣೇಶ ದೊಡ್ಡಮೋಳೆ, ರಿಜ್ವಾನ್, ಮಹೇಂದ್ರ ಇತರರಿದ್ದರು.

ಗುಂಡ್ಲುಪೇಟೆ ರಸ್ತೆಗಳ ದುರಸ್ತಿಗೆ ಆಗ್ರಹ



ರಸ್ತೆ ದುರಸ್ತಿಗೆ ಆಗ್ರಹಿಸಿ ನಮ್ಮ ಕರ್ನಾಟಕ ಸೇನೆ ಪದಾಧಿಕಾರಿಗಳು ಮನವಿ ಸಲ್ಲಿಸಿದರು.

ಗುಂಡ್ಲುಪೇಟೆ, ಫೆ.13(ಸೋಮ್. ಜಿ)– ಪಟ್ಟಣ ವ್ಯಾಪ್ತಿಯ ಪ್ರಮುಖ ರಸ್ತೆಗಳು ಹಾಗೂ ವಾರ್ಡ್‌ನ ಎಲ್ಲಾ ರಸ್ತೆಗಳು ಗುಂಡಿ ಬಿದ್ದು ವಾಹನ ಹಾಗೂ ಜನ ಸಂಚಾರಕ್ಕೆ ತೊಂದರೆಯಾಗುತ್ತಿದೆ. ಆದ್ದರಿಂದ ತುರ್ತಾಗಿ ರಸ್ತೆ ದುರಸ್ತಿಗೊಳಿಸುವಂತೆ ಆಗ್ರಹಿಸಿ ನಮ್ಮ ಕರ್ನಾಟಕ ಸೇನೆ ಪದಾಧಿಕಾರಿಗಳು ಪುರಸಭೆ ಮುಖ್ಯಾಧಿಕಾರಿ ಎಸ್. ಸರವಣ ಅವರಿಗೆ ಮನವಿ ಸಲ್ಲಿಸಿದರು.

ನಂತರ ಮಾತನಾಡಿದ ನಮ್ಮ ಕರ್ನಾಟಕ ಸೇನೆಯ ಜಿಲ್ಲಾಧ್ಯಕ್ಷ ಸುರೇಶ್ ನಾಯಕ್, ಗುಂಡ್ಲುಪೇಟೆ ಪಟ್ಟಣದಲ್ಲಿ ಕುಡಿಯುವ ನೀರಿನ ನಲ್ಲಿ ಸಂಪರ್ಕಕ್ಕಾಗಿ ಪ್ರಮುಖ ರಸ್ತೆಗಳು ಸೇರಿದಂತೆ ವಾರ್ಡ್‌ನ ಪ್ರತಿಯೊಂದು ರಸ್ತೆಯಲ್ಲಿಯೂ ಪೈಪ್‌ಲೈನ್‌ಗಾಗಿ ಗುಂಡಿ ತೆಗೆದಿದ್ದಾರೆ. ಅದನ್ನು ಸಂಬಂಧಪಟ್ಟವರು ಮುಚ್ಚದಿರುವುದರಿಂದ ಗುಂಡ್ಲುಪೇಟೆ ಈಗ ಗುಂಡಿಪೇಟೆಯಾಗಿ ಉಳಿದಿದೆ. ಇನ್ನಾದರೂ ಶಾಸಕರು ಹಾಗೂ ಅಧಿಕಾರಿಗಳು ಗಮನ ಹರಿಸಿ ತುರ್ತು ಕ್ರಮ ಕೈಗೊಳ್ಳಬೇಕು. ತಪ್ಪಿದರೆ ಸೇನೆ ವತಿಯಿಂದ ಉಗ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಈ ವೇಳೆ ಪದಾಧಿಕಾರಿಗಳಾದ ಶ್ರೀನಿವಾಸ್, ಕೃಷ್ಣ, ನಾಗರಾಜು, ಹರೀಶ ಮನು, ಮಧು ನಾಯಕ್ ಇತರರಿದ್ದರು.

ಸಿಬಿಎಸ್‌ಇ ಪರೀಕ್ಷೆ: ನಿಷೇಧಾಜ್ಞೆ

ಚಾಮರಾಜನಗರ: ಸಿಬಿಎಸ್‌ಇ 10 ಹಾಗೂ 12ನೇ ತರಗತಿ ಬೋರ್ಡ್ ಪರೀಕ್ಷೆಗಳು ಫೆ.17 ರಿಂದ ಏ.11ರವರೆಗೆ ನಗರದ ಸೇವಾ ಭಾರತಿ ಇಂಗ್ಲಿಷ್ ಪ್ರಾಥಮಿಕ ಶಾಲೆ ಮತ್ತು ಕೇಂದ್ರೀಯ ವಿದ್ಯಾಲಯದಲ್ಲಿ ನಡೆಯಲಿದ್ದು, ಫೆ.17ರ ಬೆಳಗ್ಗೆ 6 ರಿಂದ ಏ.11ರ ಸಂಜೆ 5 ರವರೆಗೆ ಈ ಪರೀಕ್ಷಾ ಕೇಂದ್ರದ ಸುತ್ತಲ 200 ಮೀಟರ್ ವ್ಯಾಪ್ತಿಯ ಪ್ರದೇಶವನ್ನು ಸಾರ್ವಜನಿಕ ನಿಷೇಧಿತ ಪ್ರದೇಶವೆಂದು ಘೋಷಿಸಿ ಜಿಲ್ಲಾಧಿಕಾರಿ ಶ್ರೀರೂಪ ಅವರು ಆದೇಶ ಹೊರಡಿಸಿದ್ದಾರೆ. ಸದರಿ ದಿನಗಳಂದು ಪರೀಕ್ಷಾ ಕೇಂದ್ರಗಳ 200 ಮೀಟರ್ ವ್ಯಾಪ್ತಿಯ ಜೆರಾಕ್ಸ್ ಅಂಗಡಿಗಳನ್ನು ಮುಚ್ಚಲು ಆದೇಶಿಸಲಾಗಿದೆ.

ದೆಹಲಿಯಲ್ಲಿ ಅಂತಾರಾಷ್ಟ್ರೀಯ ಕಿಕ್ ಬಾಕ್ಸಿಂಗ್ ಚಾಂಪಿಯನ್‌ಶಿಪ್

ಪದಕ ಗೆದ್ದು ಅಮ್ಮ–ಮಗಳಿಂದ ಸಾಧನೆ



ಕೊಳ್ಳೇಗಾಲ, ಫೆ.13– ಇತ್ತೀಚೆಗೆ ನವದೆಹಲಿಯ ಇಂದಿರಾಗಾಂಧಿ ಕ್ರೀಡಾಂಗಣದಲ್ಲಿ ವಾಕೋ ಇಂಡಿಯಾ ಸಂಸ್ಥೆ ಆಯೋಜಿಸಿದ್ದ ಅಂತಾರಾಷ್ಟ್ರೀಯ ಕಿಕ್ ಬಾಕ್ಸಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಪಟ್ಟಣದ ಅಮ್ಮ, ಮಗಳು 1 ಚಿನ್ನ, 2 ಕಂಚಿನ ಪದಕ ಪಡೆಯುವ ಮೂಲಕ ಸಾಧನೆ ಮಾಡಿದ್ದಾರೆ.

ಪಟ್ಟಣದ ಬಸ್ತೀಪುರ ಗ್ರಾಮದ ನಿವಾಸಿ ಎನ್. ಪುಷ್ಪಲತಾ ಹಾಗೂ ಆದರ್ಶ ಶಾಲೆ 6ನೇ ತರಗತಿ ವಿದ್ಯಾರ್ಥಿನಿ ಜೀವಿತಾ ಸಾಧನೆಗೈದ ಅಮ್ಮ, ಮಗಳು. ದೆಹಲಿಯಲ್ಲಿ ಫೆ.4 ರಿಂದ 8ರವರೆಗೆ ನಡೆದ ಅಂತಾರಾಷ್ಟ್ರೀಯ ಮಟ್ಟದ ಕಿಕ್ ಬಾಕ್ಸಿಂಗ್ ಸ್ಪರ್ಧೆಯಲ್ಲಿ ಕೊಳ್ಳೇಗಾಲದ ಎನ್.ಪುಷ್ಪಲತಾ ಹಾಗೂ ಅವರ ಪುತ್ರಿ ಜೀವಿತಾ ಸೇರಿದಂತೆ ನಾಲ್ವರು ವಿದ್ಯಾರ್ಥಿಗಳು ಭಾರತವನ್ನು ಪ್ರತಿನಿಧಿಸಿದ್ದರು. ಈ ವೇಳೆ ಇವರು ಸ್ಪರ್ಧೆಯಲ್ಲಿ ಜಯ ಗಳಿಸುವ ಮೂಲಕ ಒಟ್ಟು 1 ಚಿನ್ನ, 8 ಕಂಚಿನ ಪದಕ ಗೆಲ್ಲುವ ಮೂಲಕ ಸಾಧನೆ ಮಾಡಿದ್ದಾರೆ. ಇವರಿಗೆ ತರಬೇತುದಾರ, ಶಿಕ್ಷಕ ಸೆನ್ಸಾಯ್ ಡಿ. ಚಂದ್ರು, ಅಂಬರೀಶ್ ತರಬೇತಿ ನೀಡಿದ್ದರು.

ಮಾಸ್ಟರ್ ಕೆಟಗರಿಯ ಕಿಕ್‌ಲೈಟ್ ವಿಭಾಗದಲ್ಲಿ ಕೊಳ್ಳೇಗಾಲದ ಬಸ್ತೀಪುರ ಗ್ರಾಮದ ಪುಷ್ಪಲತಾ ಅವರು 41 ವರ್ಷ ವಿಭಾಗದ ಸ್ಪರ್ಧೆಯಲ್ಲಿ ವಿಜೇತರಾಗಿ 1 ಚಿನ್ನದ ಪದಕ ಗಳಿಸಿದ್ದಾರೆ. ಅದೇ ರೀತಿ ಇವರ ಪುತ್ರಿ ಕುಮಾರಿ ಜೀವಿತಾ ವೇಪನ್ಸ್ ಮತ್ತು ಓಪನ್ ಹ್ಯಾಂಡ್ ವಿಭಾಗಗಳಲ್ಲಿ 2 ಕಂಚಿನ ಪದಕ ಗಳಿಸಿದ್ದಾರೆ. ಉಳಿದಂತೆ ಕೊಳ್ಳೇಗಾಲದ ಕುಕ್ಕೆ ಹೊಟೇಲ್ ಸಹ ಮಾಲೀಕ ನಾಗರಾಜು ಅವರ ಪುತ್ರಿ ಹಾಗೂ ವಾಸವಿ ವಿದ್ಯಾಸಂಸ್ಥೆಯ 6ನೇ ತರಗತಿ ವಿದ್ಯಾರ್ಥಿನಿ ಸಾನ್ವಿ ಓಪನ್ ಹ್ಯಾಂಡ್, ವೇಪನ್ಸ್ ಹಾಗೂ ಮ್ಯೂಸಿಕಲ್ ವೇಪನ್ಸ್ ಫಾರ್ಮ್‌ನ 3 ವಿಭಾಗಗಳಲ್ಲೂ 3 ಕಂಚಿನ ಪದಕ ಪಡೆದು ಸಾಧನೆಗೈದಿದ್ದಾರೆ.

ಅದೇ ರೀತಿ ಕೊಳ್ಳೇಗಾಲ ಕ್ಷೇತ್ರ ವ್ಯಾಪ್ತಿಯ ಯಳಂದೂರು ತಾಲೂಕಿನ ಅಂಬಳೆ ಗ್ರಾಮದ ನಿತ್ಯಶ್ರೀ (ಆದರ್ಶ ಸರ್ಕಾರಿ ಶಾಲೆ) ವಿದ್ಯಾರ್ಥಿನಿ ಲೈಟ್ ಕಾಂಟಾಕ್ಟ್ ಮತ್ತು ಓಪನ್ ಹ್ಯಾಂಡ್ ಫಾರ್ಮ್ ಎರಡು ವಿಭಾಗಗಳಲ್ಲೂ 2 ಕಂಚಿನ ಪದಕ ಗಳಿಸಿದ್ದಾರೆ. ಯಳಂದೂರು ಪಟ್ಟಣದ ಸ್ನೇಹ (7ನೇ ತರಗತಿ ಆದರ್ಶ ಶಾಲೆ ಮೆಲ್ಲಳ್ಳಿ) ಕಿಕ್‌ಲೈಟ್ ವಿಭಾಗದಲ್ಲಿ 1 ಕಂಚಿನ ಪದಕ ಪಡೆದು ಸಾಧನೆಗೈದಿದ್ದಾರೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಮುಡಾ ಸೈಟು ಮಾರಾಟಕ್ಕಿದೆ
ಪಶ್ಚಿಮ ದಿಕ್ಕಿನ 40x60 ಬೋಗಾದಿ 2ನೇ ಹಂತ ನಿರ್ಮಿತಿ ಕೇಂದ್ರದ ಹತ್ತಿರ
93428-82148
93421-82148

Go Mysore Holidays
ತಿರುಪತಿ–ತಿರುಮಲ–ಕಾಳಹಸ್ತಿ ಪ್ಯಾಕೇಜ್
20th February 2026(20/02/2026) ಹೊರಡುವುದು, ಎರಡು ದಿನದ ಪ್ರವಾಸ, ಕೆ.ಜಿ. ಸರ್ಕಲ್, ವಿಜಯನಗರ, 2ನೇ ಹಂತ, ಮೈಸೂರು
9448738617
9036154301

ಕೆಲಸಕ್ಕೆ ಬೇಕಾಗಿದ್ದಾರೆ
Aee Bee auto LPG gas ಬಂಕ್ ಸ್ಥಳ : ನಂಜುಮಳಿಗೆ ಸರ್ಕಲ್, ಮೈಸೂರು ಮತ್ತು ಬಂಬೂ ಬಜಾರ್ ರಸ್ತೆ, ಹೈವೇ ಸರ್ಕಲ್, ಮೈಸೂರು ಗ್ಯಾಸ್ ಫಿಲ್ಲರ್ ಹುಡುಗರು ಬೇಕಾಗಿದ್ದಾರೆ ಹೌಸ್ ಕೀಪಿಂಗ್‌ಗೆ ಮಹಿಳೆಯರು ಬೇಕಾಗಿದ್ದಾರೆ. (ವಸತಿ ಸೌಲಭ್ಯವಿದೆ) ಆಕರ್ಷಕ ಸಂಬಳದೊಂದಿಗೆ ESI, PF ಸೌಲಭ್ಯವಿರುತ್ತದೆ.
9035217205

SITE FOR SALE
ಜೆ.ಪಿ.ನಗರ ರಿಂಗ್ ರೋಡ್ ಜಡ್ಜ್ ಕ್ವಾರ್ಟರ್ಸ್ ಹಿಂಭಾಗ 30x40 ಸೈಟ್
Mob: 9886048471

HERITAGE RESORT
AVAILABLE ON LEASE
Bangalore & Mysore
7899780255
Email : honeymgm@gmail.com

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಕ್ಯಾಶಿಯರ್ ಬೇಕಾಗಿದ್ದಾರೆ. ಇಚ್ಛೆಯುಳ್ಳವರು ಸಂಪರ್ಕಿಸಿ:
ವಿಳಾಸ : ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್
ಶಿಕ್ಷರಣೆ ಸ್ಕೂಲ್ ಪಕ್ಕ, ಹೆಬ್ಬಾಳ್

ಬೇಕಾಗಿದ್ದಾರೆ
ಮೈಸೂರು ಜಿಲ್ಲೆಯಲ್ಲಿ ನೂತನವಾಗಿ ಪ್ರಾರಂಭವಾಗಿರುವ ಕಾರ್ ಷೋರೂಮ್ ಹಾಗೂ ಬೈಕ್ ಷೋರೂಮ್‌ಗಳಿಗೆ, CASHIER, BILLING, RECEPTIONIST, HR, ADMIN, ACCOUNTANT ETC, ಕೆಲಸಕ್ಕೆ, ತಕ್ಷಣ ಯುವಕ, ಯುವತಿಯರು ಬೇಕಾಗಿದ್ದಾರೆ. EDUCATION: SSLC, PUC, ITI, DIPLOMA, DEGREE. SALARY (18k -38k),
Contact: 6366718368
9632659609, 7899627704

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ (ವಾರದ ಸಂಬಳವಿರುತ್ತದೆ),(ವಯಸ್ಸು 25 ರಿಂದ 45) ಗೋಕಲಂ, ಮೇಟಗಳ್ಳಿ, ವಿಜಯನಗರ, ಹೆಬ್ಬಾಳ್, ಮೈಸೂರು ಸಿಟಿ ಹಾಗೂ ಸುತ್ತಮುತ್ತ, ಆಕರ್ಷಕ ಸಂಬಳವಿರುತ್ತದೆ, ಊಟವಿರುತ್ತದೆ.
ಸಂಪರ್ಕಿಸಿ
9036745292
9900749104

SITE FOR SALE
30X40, 30X50 MUDA APPROVED Near Srirampura Ring Road, Bank Loan available
9035444602

ತಕ್ಷಣ ಬೇಕಾಗಿದ್ದಾರೆ
ಫ್ಯಾಕ್ಟರಿ ಕೆಲಸಕ್ಕೆ ಅಕೌಂಟೆಂಟ್, ಬಟ್ಟೆ ಐರನ್ ಹಾಗೂ ಹೆಲ್ಪರ್ ಕೆಲಸಕ್ಕೆ ಪುರುಷರು ಬೇಕಾಗಿದ್ದಾರೆ. ಆಸಕ್ತಿ ಉಳ್ಳವರು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ, ಆಲನಹಳ್ಳಿ(ನಂದಿನಿ ಬಡಾವಣೆ), ಮೈಸೂರು.
9900515650

HERITAGE RESORT
WANTED Manager, Supervisor & Other Staff
7899780255
Email : honeymgm@gmail.com

ಬೇಕಾಗಿದ್ದಾರೆ
ಮೆಕ್ಯಾನಿಕ್ ಆಪರೇಟರ್ ತರಬೇತಿ ಪಡೆದವರು (ಹೆಂಗಸರು ಮತ್ತು ಪುರುಷರು) ಐ.ಟಿ.ಐ/ಪಿಯುಸಿ – ಪಾಸ್/ಫೇಲ್, ಮೂಲಭೂತ ಯಾಂತ್ರಿಕ ಉಪಕರಣ ಮತ್ತು ಯಂತ್ರ ಕಾರ್ಯಾಚರಣೆಗಳ ಅನುಭವವಿರುವ ಆಸಕ್ತ ಅಭ್ಯರ್ಥಿಗಳು. ಸಂಪರ್ಕಿಸಿ
Email : resume4496@gmail.com
Whatsapp No
9353984178

ಬೇಕಾಗಿದ್ದಾರೆ
ಅನುಭವ ಇರುವ ಕಾಫಿ ಮಾಸ್ಟರ್ ಬೇಕಾಗಿದ್ದಾರೆ ಮತ್ತು ಪಾರ್ಸೆಲ್ ಕಟ್ಟುವ ಹುಡುಗರು ಬೇಕಾಗಿದ್ದಾರೆ. ಮೈಸೂರು.
9900661620

ಸೈಟ್ ಮಾರಾಟಕ್ಕಿದೆ
30x40 ಹೊಸ R.T. ನಗರದ ಹತ್ತಿರ, ಬೆಲೆ 45 ಲಕ್ಷ, ಶ್ರೀ ಬನಶಂಕರಿ ಎಂಟರ್‌ಪ್ರೈಸಸ್ ಮಹಾಮನೆ ಸರ್ಕಲ್ ಹತ್ತಿರ, ದಟ್ಟಗಳ್ಳಿ, ಮೈಸೂರು
9945042875

ಬೇಕಾಗಿದ್ದಾರೆ
ಗಾರ್ಡನ್ ರೆಸ್ಟೋರೆಂಟ್ ಅಲ್ಲಿ ಸಪ್ಲೇಯರ್, ಕ್ಯಾಶಿಯರ್, ಕ್ಲೀನರ್, ಮ್ಯಾನೇಜರ್ ಕೆಲಸ ಖಾಲಿ ಇದೆ. ಉತ್ತಮ ಸಂಬಳ, ವಸತಿ, ಊಟ ಕೊಡಲಾಗುವುದು. ಆಸಕ್ತರು ದಯವಿಟ್ಟು ಸಂಪರ್ಕಿಸಿ
7795011124

ಬೇಕಾಗಿದ್ದಾರೆ
ಮೈಸೂರಿನ(ನಂಜುಮಳಿಗೆ) ಹೆಸರಾದಂತ ಜ್ಯೂಸ್ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ವಯಸ್ಸು 18 ರಿಂದ 35, ಸಂಬಳ 13000 ರಿಂದ 15000.
9738117713

ಸೈಟ್ ಬೇಕಾಗಿದೆ
20x30 Near ಬೋಗಾದಿ ಮತ್ತು Shree Nagar, Huthanalli, Direct Owners Only. (Brokers Excuse)
9448680837

ಶುಂಠಿ ಕೃಷೀಕರೆ
ಉತ್ತಮ ದರ್ಜೆಯ ಬೇವಿನ ಹಿಂಡಿ ಹಾಗೂ ಬೇವಿನ ಹುಡಿ ನಿಮ್ಮ ಸಮಕ್ಷಮ ಮಾಡಿಕೊಡಲಾಗುತ್ತದೆ.
ಶ್ರೀ ಕಾಮಾಕ್ಷಿ ಬಯೋ-ನೀಮ್
#203, ಬನ್ನಿಮಂಟಪ, ಮೈಸೂರು–570015
80888-87802

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು/ಕಂಪ್ಯೂಟರ್ ಬಿಲ್ಲಿಂಗ್, ಕ್ಯಾಶಿಯರ್ ಬೇಕಾಗಿದ್ದಾರೆ. ಇಚ್ಛೆಯುಳ್ಳವರು ಸಂಪರ್ಕಿಸಿ:
ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್
ಕರ್ನಾಟಕ ಬ್ಯಾಂಕ್ ಹತ್ತಿರ, ನಜರ್‌ಬಾದ್, ಮೈಸೂರು–10

WANTED
1. OPTOMETRIST, 2. RECEPTIONIST, 3. OT STAFF,
CONTACT NUMBER
7338369364
0821-2543244
#22A, SRI GURU KRUPAM, 1ST FLOOR, ABOVE ANANTHAM CAFE, NIVEDITHA NAGAR, MYSORE-570022,

ತಕ್ಷಣ ಬೇಕಾಗಿದ್ದಾರೆ
ಹೂಟಗಳ್ಳಿ ಹೆಬ್ಬಾಳ್ ಮತ್ತು ಮೇಟಗಳ್ಳಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಸೂಪರ್‌ವೈಸರ್ ಮತ್ತು ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC ಮತ್ತು ಮೇಲ್ಪಟ್ಟು, ಸಂಬಳ : ಸೂಪರ್‌ವೈಸರ್ 21,000+W/o (8 hrs) ಗಾರ್ಡ್‌ಗಳು 20,000+W/o (8 hrs) ವಯೋಮಿತಿ : 45 ವರ್ಷದ ಒಳಗೆ ಊಟ, ತಿಂಡಿ ಸೌಲಭ್ಯವಿರುತ್ತದೆ.
9880727819
9620667819

ತಕ್ಷಣ ಬೇಕಾಗಿದ್ದಾರೆ
TVS ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ ವಿದ್ಯಾರ್ಹತೆ : SSLC ಮೇಲ್ಪಟ್ಟು, ಸಂಬಳ : 18,000/- (26 ದಿನಗಳು) ವಯೋಮಿತಿ : 45 ವರ್ಷದ ಒಳಗೆ ಊಟ, ತಿಂಡಿ, ವಸತಿ ಸೌಲಭ್ಯವಿರುತ್ತದೆ.
9620777819

ಮುಡಾ ಸೈಟ್ ಮಾರಾಟಕ್ಕಿದೆ
40x60 ದಟ್ಟಗಳ್ಳಿ, ಮೈಸೂರು
ಸಂಪರ್ಕಿಸಿ
8904497670

ಜಮೀನು ಬಾಡಿಗೆಗಿದೆ
ಬೋಗಾದಿ ರಿಂಗ್‌ರಸ್ತೆಯಿಂದ 3 ಕಿಮೀ ದೂರದಲ್ಲಿ 1 ¼ ಎಕರೆ ಎಲ್ಲಾ ಸೌಕರ್ಯವಿರುವ ಮನೆ ಸಮೇತ ಚದರಡಿಗೆ 90 ಪೈಸೆಗೆ ಬಾಡಿಗೆಗಿದೆ, ಕೈಗಾರಿಕೆಗೆ, ಕೋಳಿ ಫಾರಂ, ಪಶುಸಂಗೋಪನೆ.
8197609290

ಬೇಕಾಗಿದ್ದಾರೆ
ಕೆಲ್ಲಟ್ಟಿ ಕಿಚನ್ ವೆಜ್ ಕೆಫೆಗೆ 4 ಸಿಬ್ಬಂದಿ, ಕರ್ತವ್ಯಗಳು
* ತರಕಾರಿ ಹೆಚ್ಚುವವರು
* ರೊಟ್ಟಿ ಮಾಡುವವರು
* ಸ್ವಚ್ಛಗೊಳಿಸುವವರು
ಬೆಳಿಗ್ಗೆ 6 ರಿಂದ ಸಂಜೆ 3 ಮಧ್ಯಾಹ್ನ 1 ರಿಂದ ರಾತ್ರಿ 10
9986758555

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ
ನೀವು ಗಿರವಿ ಇಟ್ಟು ಬಿಡಿಸಕೊಳ್ಳಲಾಗದ ಚಿನ್ನವನ್ನು ನಾವೇ ಬಿಡಿಸಿ ಉಳಿದ ಹಣವನ್ನು ಚಿನ್ನದ ಗುಣಮಟ್ಟದ ಆಧಾರದ ಮೇಲೆ ನಿಮ್ಮ ಸ್ಥಳದಲ್ಲೇ ನೀಡುತ್ತೇವೆ. ಒಂದು ಗ್ರಾಂ ಚಿನ್ನದ ದರ: 14,800 (24 CT)
9108146123

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9535361279


LEASE FOR HOUSE
30x50 Duplex 3 bhk, near University layout 26 lakhs
9886281713

ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9108048064

SITE FOR SALE
KHB Kenchalagudu S/W corner 1776 sq ft (Brokers Excuse)
9449990513

JOB OPPOTUNITY
Only for Retired persons and highly educated home makers (THAT TO 45+)
9902508150
9972187247

ಬೇಕಾಗಿದ್ದಾರೆ
ಕಂಪನಿ ಕೆಲಸಕ್ಕೆ ಜನ ಬೇಕಾಗಿದ್ದಾರೆ. ಸ್ಥಳ: ಸುಳ್ಯ, ವೇತನ 21000/–; ಉಚಿತ ಊಟ ವಸತಿ ವ್ಯವಸ್ಥೆಯಿರುತ್ತದೆ.
86187 61480



Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

ಸಂಪು ಮತ್ತು ಟ್ಯಾಂಕ್ ಸೋಲಾರ್ ಸರ್ವೀಸ್
Mob: 8197383645

REQUIRED
GRAPHIC DESIGNER
Experienced in CorelDRAW & Photoshop
IMPACT SIGNS
99011 63200
97435 65907

ಬೇಕಾಗಿದ್ದಾರೆ
ಮೈಸೂರಿನ ಸುತ್ತಮುತ್ತ ಕೆಲಸ ಮಾಡಲು ಫೀಲ್ಡ್ ಆಫೀಸರ್ಸ್ ಹಾಗೂ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ ರೈಟಿಂಗ್ ಬರಬೇಕು.
9632062077, 9632065077

OLD AGE HOME
ನಮ್ಮಲ್ಲಿ ಎಲ್ಲಾ ತರಹದ ಹಿರಿಯ ನಾಗರಿಕರನ್ನು ಅಥವಾ ವೃದ್ಧರನ್ನು ಮನೆಯ ವಾತಾವರಣದಲ್ಲಿ ಊಟ, ವಸತಿ, ನರ್ಸಿಂಗ್‌ಕೇರ್ ಮತ್ತು ವೈದ್ಯರ ಆರೈಕೆಯೊಂದಿಗೆ ನೋಡಿಕೊಳ್ಳುತ್ತೇವೆ. ಡೇ ಕೇರ್ ಸೌಲಭ್ಯ ಕೂಡ ಲಭ್ಯವಿದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ.
9607172737

ಗುಂಡ್ಲುಪೇಟೆ ಹತ್ತಿರ ವಾಣಿಜ್ಯ ಜಮೀನು ಮಾರಾಟಕ್ಕೆ
2 ಎಕರೆ 4 ಗುಂಟೆ – ಗುಂಡ್ಲುಪೇಟೆಯಿಂದ 4 ಕಿಮೀ NH ರಸ್ತೆ ಅಂಟಿಕೊಂಡಿದೆ । ಸಂಪೂರ್ಣ Commercial Conversion, 25KV ಟ್ರಾನ್ಸ್‌ಫಾರ್ಮರ್ । ಬೋರ್‌ವೆಲ್ । 4 ಕೊಠಡಿಗಳು ಚಾಲ್ತಿಯಲ್ಲಿರುವ ಸರ್ವಿಸ್ ಸೆಂಟರ್ & ಎಮಿಷನ್ ಪಾಯಿಂಟ್, 100+ತೇಗದ ಮರ । ಸ್ಪಷ್ಟ ದಾಖಲೆ ತಕ್ಷಣದ ನೋಂದಣಿ– ಗಂಭೀರ ಖರೀದಿದಾರರು ಮಾತ್ರ ಸಂಪರ್ಕಿಸಿ
7892786875

FOR SALE
20x30 Site @ Vijaya Nagar 4th Stage.
30x50, 40x50 Sites @ 50 Ft Road Sites@ Brahmins Lyt, Nr RT Ngr
30x45 Corner Property @ Shardha Public school, Near Dattgalli
20x30, 30x40 Sites @ Bogadi
Commercial Properties @ Ring Road
2 & 3 BHK APARTMENTS @ RK NGR
PRAKRUTHI PROPERTIES
95386 90359, 90359 90359

CONSTRUCTION
SKANDA PROPERTIES
ಮಹಾಶಿವರಾತ್ರಿ ಹಬ್ಬದ ಪ್ರಯುಕ್ತ Civil Construction starts from Rs. 1,875* per sft
Hurry up!! Book your project
Ph: 8310008208

FOR SALE
G+1 House @ Saraswati Puram
40x60 Commercial Property @ Srirampura 80ft Road
20X30 NEW DUPLEX HOUSE @ BALAJI ENCLAVE, UTTANAHALLI
Duplex House Near Vijaya Nagar 4th Stage
Properties @ JP Nagar
PRAKRUTHI PROPERTIES
95386 90359, 90359 90359

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

EARN & GROW WITHOUT LIMIT
Reputed financial services company invites motivated individuals to join as Financial Advisors, Attractive commission and incentives. Flexible working hours. Professional training and growth. Retired officials / home makers / self employed are welcome. Date of seminar 17-12-26 (Tuesday). Time: 11 am. For further details contact:
8861918556
9845458130

WANTED
airtel Sim sales executive Part-time/ Full time Salary upto 25000
Contact
9591501305

ಹೋಟೆಲ್ ಕೆಲಸಕ್ಕೆ ಬೇಕಾಗಿದ್ದಾರೆ
ಹುಡುಗರು / ಹೆಂಗಸರು ಬೇಕಾಗಿದ್ದಾರೆ ಕಾಫಿ ಟೀ ಕೌಂಟರ್, ಪಾರ್ಸಲ್ ಕೌಂಟರ್, ದೋಸೆ ಭಟ್ಟರ್, ದೋಸೆ ಹಿಟ್ಟು ರುಬ್ಬುವವರು, ಚೈನೀಸ್ ಮಾಸ್ಟರ್, ವಾಷಿಂಗ್ ಬೇಕಾಗಿದ್ದಾರೆ.
9606238790
7204464646

SITE FOR SALE
30X40 OPP UNIVERSITY LAYOUT
30X40 SITE FOR SALE NEAR JP NAGAR RING ROAD
40X40 SITE FOR SALE in KBL Grandina
9880344263

ತಕ್ಷಣ ಬೇಕಾಗಿದ್ದಾರೆ
ವರ್ಕ್‌ಫ್ರಮ್ ಹೋಮ್ ಕೆಲಸಕ್ಕೆ ವಿದ್ಯಾರ್ಥಿಗಳಿಗೆ & ಪುರುಷರಿಗೆ ಹಾಗೂ ಮಹಿಳೆಯರಿಗೆ ಮೊದಲ ಆದ್ಯತೆ (ಮನೆಯಿಂದಲೇ ಕೆಲಸ) 7th, 10th, PUC, Any Degree ಪಾಸ್ / ಫೇಲ್ ಆದವರು ಸಂಪರ್ಕಿಸಿ
HR: 9742133993

WALK-IN INTERVIEW
Nursery Teacher and Primary Teacher. Place: Near Yelwala.
Call: 9036844557

FOR RENT
2400 sq.ft. space for rent @ Saraswathipuram, Mysore. Suitable for competitive exam coaching, tuitions.
Call: 98896 98826

HIRING
We are looking for dynamic candidate for space parts Division. Location: Mysore
* Spares Executives: 2 Nos.
* Driver cum Picker & Packer: 1 No.
* Picker & Packer: 1 NO.
Call: 97415 31006

ಬೇಕಾಗಿದ್ದಾರೆ
ಸೆಕ್ಯೂರಿಟಿ ಸೂಪರ್‌ವೈಸರ್ ಹಾಗೂ ಗಾರ್ಡ್ ಬೇಕಾಗಿದ್ದಾರೆ. ವಯಸ್ಸು – 19 ರಿಂದ 45, ಸಂಬಳ– 18000 ರಿಂದ 21000, ಮೈಸೂರು, ನಂಜನಗೂಡು, ಲೇಡಿಗಾರ್ಡ್ ಈ ರೂಟ್‌ನಲ್ಲಿ ಇರುವವರಿಗೆ ಆದ್ಯತೆ. Vijayanagar, Maruthi Tent, Srirampura, K.G.Koppal, Ballal Circle.
ಸಂಪರ್ಕಿಸಿ : 9606079596
9606959660/ 9606959621

ಬೇಕಾಗಿದ್ದಾರೆ
ಇಂಡಸ್ಟ್ರಿಯಲ್ ಕ್ಯಾಂಟೀನ್‌ನಲ್ಲಿ ಕೆಲಸ ಮಾಡಲು ಹೆಂಗಸರು ಮತ್ತು ಗಂಡಸರು ಸಹಾಯಕರ/ಸ್ವಚ್ಛತಾ ಕೆಲಸಕ್ಕೆ ಬೇಕಾಗಿದ್ದಾರೆ. ESI / PF ಸೌಲಭ್ಯ ಲಭ್ಯ, ವಯಸು– 18– 45 ವರ್ಷ ಸ್ಥಳ : ಮೈಸೂರು, ಸಂಪರ್ಕಿಸಿ:
9611829884
7760926164

IMMEDIATE RECRUITMENT
Male Receptionist for Residency (Night Shift). Qualification: PUC / Graduate, Languages: Kannada, Hindi, English manageable. Place: Bogadi, Mysore.
8884133411
9538555459

ಸುವರ್ಣಾವಕಾಶ
ಪ್ರಸಿದ್ಧ MNC ಕಂಪನಿಯಿಂದ ಉದ್ಯೋಗ ಅವಕಾಶ
Retd / VRS / House Wife's / Bussines Person's
Part Time | Full Time
age above - 30 years
9008799156

SITE FOR SALE
30x40 site for sale. East-facing site, Muda approved Located 3 km towards H.D. Kote Road (Vishnu Vardhan Smaraka). Direct owner. Clear title. Interested buyers may contact:
7760909255

ಬೇಕಾಗಿದ್ದಾರೆ
1) ಫೀಲ್ಡ್ ಸೂಪರ್ ವೈಸರ್ (ಸೆಕ್ಯೂರಿಟಿ ಅನುಭವವಿರಬೇಕು)
2) ಸೆಕ್ಯೂರಿಟಿ ಗಾರ್ಡುಗಳು
ಸ್ಥಳ: 1. ಗುಂಡ್ಲುಪೇಟೆ, 2. ಕೊಳ್ಳೇಗಾಲ 3. ಮೈಸೂರು ಸಿಟಿ ಸುತ್ತಮುತ್ತ
ಉಚಿತ ವಸತಿ/ ಊಟ / ESI / P,F
9242406261
9686422400

ಜೆಪ್ಟೋ (Zepto) ಕಂಪನಿಗೆ ಬೇಕಾಗಿದ್ದಾರೆ
ಶಿಫ್ಟ್ ಸಮಯಗಳು: ನೈಟ್ ಶಿಫ್ಟ್: ರಾತ್ರಿ 10 ರಿಂದ ಬೆಳಿಗ್ಗೆ 7 ರವರೆಗೆ. ಸೆಕೆಂಡ್ ಶಿಫ್ಟ್: ಸಂಜೆ 5 ರಿಂದ ರಾತ್ರಿ 2. ಕೆಲಸದ ಸ್ಥಳ: ಬನ್ನಿಮಂಟಪ, ಮೈಸೂರು. ವಯಸ್ಸಿನ ಮಿತಿ 32. ನಿಮಗೆ ಆಸಕ್ತಿ ಇದ್ದಲ್ಲಿ, ದಯವಿಟ್ಟು ಇವರನ್ನು ಸಂಪರ್ಕಿಸಿ: ಹರ್ಷಿತ್
Mob: 9066275200

ನಿವೃತ್ತ ನೌಕರರಿಗೆ, ಉದ್ಯೋಗಾವಕಾಶದ ಸೆಮಿನಾರ್
ಭಾರತದ ಅತ್ಯಂತ ವಿಶ್ವಾಸಾರ್ಹ ಬ್ಯಾಂಕ್ ಸಮೂಹ ಸಂಸ್ಥೆಯಲ್ಲಿ ಉದ್ಯೋಗ ಮತ್ತು Business ಅವಕಾಶದ ಸೆಮಿನಾರ್ ಏರ್ಪಡಿಸಲಾಗಿದೆ. Benefits: Fixed Salary + PF+ESI+ ಇತರೆ ಭತ್ಯೆಗಳು ಲಭ್ಯವಿರುತ್ತದೆ. ಬೇಕಾಗುವ ದಾಖಲಾತಿಗಳು: ಫೋಟೋ, ಪಾನ್ ಕಾರ್ಡ್, ಬ್ಯಾಂಕ್ ಪಾಸ್ ಪುಸ್ತಕ, ಎಸ್.ಎಸ್.ಎಲ್.ಸಿ. ಅಂಕಪಟ್ಟಿ. SHARADA PLATINA, 1st Floor, Opp. Clock Tower. Time: 11 Am and Date: 17-02-26, (Followed by Lunch)
9448376423/ 9886883858

ಫ್ಲಾಟ್ ಫಾರ್ ಲೀಸ್ ಅಂಡ್ ರೆಂಟ್
ಫುಲ್ಲೀ ಫರ್ನಿಷ್ಡ್, ಹೆಬಿಟೆಟ್ ಮಾಲ್ ಹತ್ತಿರ, ಜಯಲಕ್ಷ್ಮೀಪುರಂ. ಮೈಸೂರು.
Mob: 9740820596

ಹೊಸ ಮನೆ ಮಾರಾಟಕ್ಕಿದೆ
30x40- Duplex- 4 BHK ಮೈಸೂರು ಶ್ರೀರಾಂಪುರ ರಿಂಗ್ ರೋಡ್ ಪ್ರೀತಿ ಲೇಔಟ್, ಮಾರಮ್ಮ ದೇವಸ್ಥಾನದ ಹತ್ತಿರ
9945615736

HOUSE FOR SALE
20X30, GF+FF South Face, Behind Hamsa Café Next to Ring Road, Manasi Nagar
9108416410

WANTED
A reputed real estate company is hiring a Manager with experience in Direct Marketing for its branches in Kollegala and Bengaluru. Salary : 18,000 to 30,000+ Incentives, Free Accommodation, Contact
9182732519

SITE FOR SALE
30X40 & 30X50 VRL Layout H D Kote Road
40x60 Pruthvi Layout (Saptamatruka) Both MUDA approved
VG Estates
8197850616

ಸೈಟು/ಮನೆ ಮಾರಾಟಕ್ಕೆ ಬಾಡಿಗೆಗೆ
20x30 3 BHK Duplex Sale Ring Road ಹತ್ತಿರ ಲಲಿತಾದ್ರಿನಗರ, 50x80, 30x50 Site Sale ಪರುಶುರಾಮಪನಗರ, ಭುಗತಗಳ್ಳಿ ಬನ್ನೂರು ರಸ್ತೆ, 30x40 Site MUDA ಸಾತಗಳ್ಳಿ 2ನೇ ಹಂತ, ಬಾಡಿಗೆಗೆ 40x60 2 BHK + ಕಾರ್ ಗ್ಯಾರೇಜ್‌ವುಳ್ಳ Independent ಮನೆ ರಾಮಕೃಷ್ಣನಗರ, H Block ನಲ್ಲಿದೆ
Wanted Muda Site Purchase
9448938989
7892035789

SITE FOR SALE
20X45 EAST FACE JUDICIAL LAYOUT ATTACHED DATTGALLI. CLEAR DOCUMENT.DIRECT REGESRTATION. Rs.53/- LAKH.
8073799013

WE ARE HIRING
the following post for a reputed hotel in mysore for immediate Placement. Salary as per their experience.
Front office Associate / M / F, House keeping Boys / Male, Bell Boys - Male
9845682777
contact for further details

ಬೇಕಾಗಿದ್ದಾರೆ
ಹುದ್ದೆ.. ಹಣಕಾಸು ಸಲಹೆಗಾರ * ಭಾರತದ ಟಾಪ್ ಬ್ಯಾಂಕ್‌ನಿಂದ * ಸಮಯದ ಮಿತಿಯಿಲ್ಲ (PART TIME) * ಅಂತರಾಷ್ಟ್ರೀಯ ಪ್ರವಾಸಗಳು * ವೇರಿಯಬಲ್ ಭತ್ಯೆ (5L TO 8L) P.A. (Based on Business) * ನಿವೃತ್ತ ಅಧಿಕಾರಿ, ಗೃಹಿಣಿಯರು, ವ್ಯಾಪಾರಸ್ಥರಿಗೆ ಆದ್ಯತೆ, * ವಯಸ್ಸು 25y to 55y, ವಿದ್ಯಾರ್ಹತೆ : SSLC * ಕಡಿಮೆ ಅವಕಾಶಗಳು ಮಾತ್ರ, Contact more Info
8095741384
9972031384

ತಕ್ಷಣ ಬೇಕಾಗಿದ್ದಾರೆ
1) ಸೆಕ್ಯೂರಿಟಿ ಗಾರ್ಡ್ಸ್ – ಬೆಳಗ್ಗೆ ಮತ್ತು ರಾತ್ರಿ ಪಾಳಯಕ್ಕೆ (ಹಿನಕಲ್, ಎಲೆ ತೋಟ, ವಿದ್ಯಾರಣ್ಯಪುರಂ, ಹೆಬ್ಬಾಳ್)
2) ಹೌಸ್‌ಕೀಪಿಂಗ್– ಹುಡುಗರು ಸಂಜೆ ಕೆಲಸಕ್ಕೆ, (ಹಿನಕಲ್, ವಿಜಯನಗರ, ಎಲೆ ತೋಟ)
7795162227
9731663856

ಕಾರ್ ಮಾರಾಟಕ್ಕಿದೆ
1. ಬೆಂಜ್ (2009 MODEL, 220 CD) ಸುಸ್ಥಿತಿಯಲ್ಲಿದೆ, ಮೈಸೂರು ನೋಂದಣಿ,
2. ಟಾಟಾ ಇಂಡಿಗೋ ಇ.ಸಿ.ಎಸ್. (2015 MODEL) YELLOW BOARD – SINGLE OWNER
9972837203

ಸೈಟ್ ಮಾರಾಟಕ್ಕಿದೆ
30x40, ಮನೆ 20x30 ಮಾರಾಟಕ್ಕಿದೆ. ಹುಣಸೂರು ರೋಡ್ 50x70 ಸೈಟ್
9008711654

ಸೈಟು ಬೇಕಾಗಿದೆ
ಚಿಕ್ಕಹಳ್ಳಿ / ವಾಜಮಂಗಲ / ವರುಣ ಕ್ಯಾಲಿಬರ್ / ಜೆಎಸ್ಎಸ್ 3ನೇ ಹಂತ / ವರುಣ ಬಸವೇಶ್ವರ / ನಿರ್ಮಾಣ್‌ನಗರ / ಲಲಿತಾದ್ರಿನಗರ / ಪೊಲೀಸ್ ಲೇಔಟ್ ಹಾಗೂ ಅಕ್ಕಪಕ್ಕದ ಬಡಾವಣೆಗಳಲ್ಲಿ, ಟಿ.ನರಸೀಪುರ ರಸ್ತೆ / ಬನ್ನೂರು ರಸ್ತೆ.
9686071750

ಬೇಕಾಗಿದ್ದಾರೆ
ವೈಟ್ ಬೋರ್ಡ್ ಕಾರುಗಳು ಚಾಲನೆ ಮಾಡಲು, ಲೋಕಲ್ ಮತ್ತು ಔಟ್ ಸ್ಟೇಷನ್‌ಗಳಿಗೆ ಪ್ರಯಾಣಿಸಲು ಸ್ಪೇರ್ ಮತ್ತು ಪರ್ಮನೆಂಟ್ ಡ್ರೈವರ್‌ಗಳು ಸಂಪರ್ಕಿಸಿ
9845680215

ಸದ್ಗುರು ಮ್ಯಾರೇಜಸ್
ಎಲ್ಲಾ ಜಾತಿಯ ವಧುವರರು ವಿಧುರರು ವಿಧವೆಯರು ವಿಚ್ಛೇದಿತರು ನೇರ ಸಂಪರ್ಕಿಸಿ, ಒಂದು ಫೋನಿನಕರೆ ನಿಮ್ಮ ಬದುಕನ್ನೇ ಬದಲಾಯಿಸುತ್ತದೆ.
9448229184
7899625268

ಉದ್ಯೋಗವಕಾಶ
ಮಹಿಳಾ ಸಿಬ್ಬಂದಿಗಳು ಬೇಕಾಗಿದ್ದಾರೆ ಹಗಲು, ರಾತ್ರಿ ಪಾಳಿ ಹಾಗೂ ಅಲ್ಲೇ ಉಳಿದುಕೊಂಡು ಕೆಲಸ ಮಾಡುವುದು, ಊಟ, ವಸತಿ, ಇಎಸ್‌ಐ, ಪಿಎಫ್ ಮತ್ತು ಸ್ಪರ್ಧಾತ್ಮಕ ಮಾಸಿಕ ವೇತನ ನೀಡಲಾಗುತ್ತದೆ. ಸಂಪರ್ಕಿಸಿ:
ಸಂಪರ್ಕಿಸಿ : 9606714441
7349278501/ 0821-4242351

ಉದ್ಯೋಗ ಅವಕಾಶ
ಯುವಕ ಯುವತಿಯರು ಬೇಕಾಗಿದ್ದಾರೆ, ವರ್ಕ್ ಫ್ರಮ್ ಹೋಂ ಮತ್ತು ಬ್ಯಾಂಕ್ ವರ್ಕ್ ಷೋರೂಮ್ ವರ್ಕ್ ಆಫೀಸ್ ವರ್ಕ್, ಹೆಚ್ಚಿನ ಮಾಹಿತಿಗಾಗಿ ಕರೆ ಮಾಡಿ
6361167510
9019612987

ಬೇಕಾಗಿದ್ದಾರೆ
ಪೆಟ್ರೋಲ್‌ಬಂಕ್‌ನಲ್ಲಿ ಹೆಲ್ಪರ್ ಮತ್ತು ಕ್ಯಾಷಿಯರ್ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಸ್ಥಳ: ವಿಜಯನಗರ ವಾಟರ್ ಟ್ಯಾಂಕ್ ಹತ್ತಿರ, ಮೈಸೂರು ನಗರ
6364748485

ವಧು–ವರಾನ್ವೇಷಣೆ
ಒಕ್ಕಲಿಗ/ಕುರುಬ/ಲಿಂಗಾಯತ, ನಾಯಕ/ SC & ಎಲ್ಲಾ ಜಾತಿಯ ವಧು–ವರರಿಗಾಗಿ ಕೂಡಲೇ ಸಂಪರ್ಕಿಸಿ (II Marriages Also)
9343175000

ಮೈಸೂರು ಮಿತ್ರ 46 — ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ರೈತರ ಹಿತಾಸಕ್ತಿ ಕಾಪಾಡದಿದ್ದರೆ ದೇಶದ ಅಭಿವೃದ್ಧಿ ಅಸಾಧ್ಯ

ಪ್ರಜಾ ಸ್ನೇಹ ಚರ್ಚೆ ಕಾರ್ಯಕ್ರಮದಲ್ಲಿ ಎಂಎಲ್‌ಸಿ ಡಾ.ಯತೀಂದ್ರ

ನಂಜನಗೂಡು, ಫೆ.13– ರೈತರು ದೇಶದ ಬೆನ್ನೆಲುಬು. ರೈತರ ಹಿತಾಸಕ್ತಿ ಕಾಪಾಡದಿದ್ದರೆ ದೇಶದ ಅಭಿವೃದ್ಧಿ ಸಾಧ್ಯವಿಲ್ಲ ಎಂದು ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು.

ತಾಲೂಕಿನ ತಾಂಡವಪುರದಲ್ಲಿ ಶುಕ್ರವಾರ ಪ್ರೊ.ನಂಜುಂಡಸ್ವಾಮಿಯವರ 90ನೇ ಹುಟ್ಟುಹಬ್ಬದ ಪ್ರಯುಕ್ತ ರೈತ ಸಂಘದಿಂದ ಆಯೋಜಿಸಿದ್ದ ಶಾಸಕಾಂಗ ಹಾಗೂ ರೈತರ ಮುಖಾಮುಖಿ ಪ್ರಜಾ ಸ್ನೇಹ ಚರ್ಚೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ದೇಶ ಆರ್ಥಿಕವಾಗಿ ಮುಂದುವರೆದರೂ ಕೂಡ ಕಾರ್ಖಾನೆಗಳಲ್ಲಿ ಆಹಾರ ಉತ್ಪಾದನೆ ಮಾಡಲು ಸಾಧ್ಯವಿಲ್ಲ. ರೈತ ಸಂಘ ಬಲಗೊಳ್ಳಲು ಪ್ರೊ.ನಂಜುಂಡಸ್ವಾಮಿಯವರ ಹೋರಾಟ ಕಾರಣ. ಅವರ ಸಮಾಜವಾದಿ ಚಿಂತನೆಗಳಿಂದ ಪ್ರೇರಿತರಾಗಿ ಸಿಎಂ ಸಿದ್ದರಾಮಯ್ಯ ರಾಜಕೀಯ ಪ್ರವೇಶ ಮಾಡಿದರು ಎಂದ ಅವರು ಈ ಭಾಗದ ರೈತರ ಎದುರಿಸುತ್ತಿರುವ ಸಮಸ್ಯೆಗಳನ್ನು ಬಗೆಹರಿಸಲಾಗುವುದು. ಅಹಲ್ಯಾ ಗ್ರಾಮದ ಕೆರೆ ಅಭಿವೃದ್ಧಿಗಾಗಿ ಸರ್ಕಾರ 4 ಕೋಟಿ ಅನುದಾನ ನೀಡಿದೆ. ಕೇಂದ್ರ ಸರ್ಕಾರ ಉದ್ಯಮಿಗಳ ಪರವಾಗಿದೆ. ರೈತರ ಹೋರಾಟವನ್ನು ನಿರ್ಲಕ್ಷಿಸುತ್ತಿದೆ.



ಕಾರ್ಯಕ್ರಮವನ್ನು ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಉದ್ಘಾಟಿಸಿದರು.

ಕಾಂಗ್ರೆಸ್ ಪಕ್ಷ ಸಾಮಾಜಿಕ ನ್ಯಾಯದ ಪರವಾಗಿದ್ದು, ರೈತರ ಹಿತಾಸಕ್ತಿ ಕಾಪಾಡುತ್ತೇವೆ ಎಂದು ಹೇಳಿದರು.

ರೈತ ಸಂಘದ ರಾಜ್ಯ ಕಾರ್ಯಾಧ್ಯಕ್ಷ ವಿದ್ಯಾಸಾಗರ್ ಮಾತನಾಡಿ, ತಾಲೂಕಿನ ಸೂರಳ್ಳಿ ಗ್ರಾಮದಲ್ಲಿ ಸರ್ಕಾರಿ ಖರಾಬು ಜಮೀನಿನಲ್ಲಿ ಸಾಗುವಳಿ ಮಾಡುತ್ತಿರುವ 300 ರೈತರಿಗೆ ಸಾಗುವಳಿ ಚೀಟಿ ನೀಡುವಂತೆ ಪ್ರತಿಭಟನೆ ನಡೆಸಿದ ರೈತರ ಮೇಲೆ ಇಲ್ಲಿನ ತಹಸೀಲ್ದಾರ್ ಮೊಕದ್ದಮೆ ಹೂಡಿ ರೈತರನ್ನು ಬೆದರಿಸುವ ಕೆಲಸ ಮಾಡಿದ್ದರು. ಇದೀಗ ಅವರು ಎತ್ತಂಗಡಿಯಾಗಿದ್ದಾರೆ. ರಾಂಪುರ ಗ್ರಾಮದಲ್ಲಿ ಉಪವಿಭಾಗಾಧಿಕಾರಿಗಳ ಆದೇಶವಿದ್ದರೂ ರೈತರಿಗೆ ಹಕ್ಕುಪತ್ರ ನೀಡಿಲ್ಲ. ಮೈಕ್ರೋ ಫೈನಾನ್ಸ್‌ಗಳ ಕಿರುಕುಳದಿಂದಾಗಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಸರ್ಕಾರ ರೈತರ ಸಮಸ್ಯೆಗಳನ್ನು ಪರಿಹರಿಸಬೇಕು ಎಂದು ಹೇಳಿದರು.

> “ರೈತ ಮುಖಂಡರು ರೈತರ ಸಮಸ್ಯೆಗಳನ್ನು ನನ್ನ ಗಮನಕ್ಕೆ ತಂದಿದ್ದಾರೆ. ಕೆರೆಗಳ ಒತ್ತುವರಿ ತೆರವು, ಜಮೀನುಗಳಿಗೆ ಹೋಗುವ ರಸ್ತೆಗಳನ್ನು ತೆರವುಗೊಳಿಸಲು ತಹಸೀಲ್ದಾರ್ ಅವರಿಗೆ ಸೂಚನೆ ನೀಡಿದ್ದೇನೆ. ಬಸ್ ಸಂಚಾರ ವ್ಯವಸ್ಥೆ, ಸ್ಮಶಾನಗಳ, ಗ್ರಾಮಗಳ ರಸ್ತೆ ಅಭಿವೃದ್ಧಿಗೆ ಆದ್ಯತೆ ನೀಡಲಾಗುವುದು. ಹುರ ಕೆರೆ ಏತ ನೀರಾವರಿ ಯೋಜನೆಗೆ ಸರ್ಕಾರ 42 ಕೋಟಿ ಅನುದಾನ ನೀಡಿದ್ದು, ಕಾಮಗಾರಿ ಪ್ರಗತಿಯಲ್ಲಿದೆ. ಮಾರ್ಚ್ ಅಂತ್ಯದ ವೇಳೆಗೆ ರೈತರ ಜಮೀನುಗಳಿಗೆ ನೀರು ಹರಿಸಲಾಗುವುದು. ಹೆಡಿಯಾಲ ಭಾಗದ ಕಾಡಂಚಿನ ಗ್ರಾಮಗಳಲ್ಲಿ ಕಾಡು ಪ್ರಾಣಿಗಳ ಹಾವಳಿ ತಪ್ಪಿಸಲು 2 ಕಿಮೀ ಮೆಸ್ ಅಳವಡಿಸಲಾಗಿದೆ. ಉಳಿದ 2 ಕಿಮೀ ವ್ಯಾಪ್ತಿಯಲ್ಲಿ ರೈಲ್ವೆ ಬ್ಯಾರಿಕೇಡ್ ಅಳವಡಿಸಲಾಗುವುದು.
>
> – ದರ್ಶನ್ ಧ್ರುವನಾರಾಯಣ, ಶಾಸಕ.

ಕಾರ್ಯಕ್ರಮದಲ್ಲಿ ಶಾಸಕ ಅನಿಲ್ ಚಿಕ್ಕಮಾದು, ಮಾಜಿ ಶಾಸಕ ಕೇಶವಮೂರ್ತಿ, ರಾಜ್ಯಾಧ್ಯಕ್ಷ ಚನ್ನಪ್ಪ ಪೂಜಾರಿ, ರೈತ ಮುಖಂಡರಾದ ಬಂಗಾರ ಸ್ವಾಮಿ, ಇಮ್ಮಾವು ರಘು, ತಾಲೂಕು ಅಧ್ಯಕ್ಷ ಸತೀಶ್ ರಾವ್, ದೇವರಾಜು, ಶಿವಣ್ಣ, ರೈತ ಸಂಘದ ಮಲ್ಲವಾಡಿ ಶಿವಣ್ಣ, ಮಹೇಶ್, ಪ್ರಕಾಶ್, ಚಂದ್ರಶೇಖರ್, ಶಿವಾನಂದ, ಯೋಗೇಶ್ ಉಪಸ್ಥಿತರಿದ್ದರು.

ಫಿಜಿಯೋಥೆರಪಿಯಿಂದ ಹಳೇ ನೋವು ಗುಣಮುಖ



ಹುಣಸೂರಲ್ಲಿ ಬೃಹತ್ ಆರೋಗ್ಯ ತಪಾಸಣಾ ಶಿಬಿರ ನಡೆಯಿತು.

ಹುಣಸೂರು, ಫೆ.13– ಫಿಜಿಯೋಥೆರಪಿಯಿಂದ ಬಹುಕಾಲದ ಹಳೇ ನೋವುಗಳನ್ನು ಹೋಗಲಾಡಿಸಬಹುದು ಎಂದು ಡಾ.ರೂಪೇಶ್ ಚೌಧರಿ ತಿಳಿಸಿದರು.

ನಗರದ ರೋಟರಿ ಭವನದಲ್ಲಿ ರೋಟರಿ ಕ್ಲಬ್ ಹಾಗೂ ರಾಮ ಮನೋಹರ ಲೋಹಿಯಾ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ 6 ದಿನಗಳ ಬೃಹತ್ ಆರೋಗ್ಯ ತಪಾಸಣೆ ಶಿಬಿರದಲ್ಲಿ ಅವರು ಮಾತನಾಡಿದರು.

ರೋಗಿಗಳಿಗೆ ಯಾವುದೇ ವಯಸ್ಸಿರಲಿ ಅವರ ಹಳೇ ಬೆನ್ನು ನೋವು, ಮಂಡಿ ನೋವಿಗೆ ಜರ್ಮನ್ ಟೆಕ್ನಿಕ್ ನಿರ್ಮಿತ ಬ್ರೆಸ್ಸ್ ಚಿಕಿತ್ಸೆ ಮಾಡಲಾಗುವುದು. ಅಲ್ಲದೇ ಮೊಣಕಾಲಿನ ನೋವನ್ನು ಅಪರೇಷನ್ ಇಲ್ಲದೆ ಗುಣಪಡಿಸಲಾಗುವುದು. ಜನತೆ ಇದರ ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ರೋಟರಿ ಕ್ಲಬ್ ಅಧ್ಯಕ್ಷ ಹೆಚ್.ಆರ್.ಕೃಷ್ಣಕುಮಾರ್ ಮಾತನಾಡಿ, ಪ್ರತಿಯೊಬ್ಬ ಮನುಷ್ಯನಿಗೂ ಆರೋಗ್ಯ ಅನಿವಾರ್ಯವಾಗಿದ್ದು, ಯಾಂತ್ರಿಕ ಬದುಕಿನಲ್ಲಿ ಹಣಕ್ಕೆ ಒತ್ತು ನೀಡದೇ ಆರೋಗ್ಯದ ಕಡೆ ಗಮನಹರಿಸಬೇಕಿದೆ. ಅಂತಹ ಧ್ಯೇಯ ಕಾರ್ಯದಲ್ಲಿ ರೋಟರಿ ಸಂಸ್ಥೆ ಭಾಗಿಯಾಗುವ ಮೂಲಕ ಸಮಾಜಮುಖಿ ಕೆಲಸದಲ್ಲಿ ತೊಡಗಿದೆ ಎಂದರು.

ಶಿಬಿರದಲ್ಲಿ ರೊ.ಆನಂದ್, ರೊ.ಲೂಯಿಸ್ ಪೆರೇರಾ, ರೊ.ರವೀಶ್, ರೊ.ಮಹೇಶ್, ಕಾರ್ಯದರ್ಶಿ ಧರ್ಮಾಪುರ ಶ್ಯಾಮ್, ಮನೋಹರ್ ಸಿಂಗ್ ಗೌರವ್ ಇನ್ನಿತರರಿದ್ದರು.

ಡಾ.ಯತೀಂದ್ರರ ಟೀಕಿಸಿದರೆ ಪ್ರತಾಪ್ ಸಿಂಹ ವಿರುದ್ಧ ಪ್ರತಿಭಟನೆ

ರಾಜ್ಯ ಆದಿಜಾಂಬವ ಅಭಿವೃದ್ಧಿ ನಿಗಮದ ನಿರ್ದೇಶಕ ಕುಮಾರ ರಾಮು ಎಚ್ಚರಿಕೆ

ತಿ.ನರಸೀಪುರ, ಫೆ.13– ವರುಣ ಕ್ಷೇತ್ರದ ಅಭಿವೃದ್ಧಿ ಹಾಗೂ ಜನರ ಕಷ್ಟ ಸುಖಗಳಿಗೆ ಸ್ಪಂದಿಸುತ್ತಿರುವ ಎಂಎಲ್‌ಸಿ ಡಾ.ಯತೀಂದ್ರ ಸಿದ್ದರಾಮಯ್ಯನವರ ಕಾರ್ಯ ವೈಖರಿ ಸಹಿಸಲಾಗದೇ ಮಾಜಿ ಸಂಸದ ಪ್ರತಾಪ್ ಸಿಂಹ ಬಾಯಿಗೆ ಬಂದಂತೆ ಮಾತನಾಡುವುದನ್ನು ಸಹಿಸಲಾಗುವುದಿಲ್ಲ. ಇದು ಮುಂದುವರೆದರೆ ಅವರು ಹೋದ ಕಡೆಯಲ್ಲೆಲ್ಲಾ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಕರ್ನಾಟಕ ರಾಜ್ಯ ಆದಿಜಾಂಬವ ಅಭಿವೃದ್ಧಿ ನಿಗಮದ ನಿರ್ದೇಶಕ ಕುಮಾರ ರಾಮು ಎಚ್ಚರಿಕೆ ನೀಡಿದರು.



ಸುದ್ದಿಗೋಷ್ಠಿಯಲ್ಲಿ ಕುಮಾರ ರಾಮು ಮಾತನಾಡಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಾ.ಯತೀಂದ್ರ ಅವರು ಯಾವುದೇ ವರ್ಗಾವಣೆ ದಂಧೆಯಲ್ಲಿ ತೊಡಗಿಲ್ಲ. ಅವರ ಬಳಿ ಯಾವುದಾದರೂ ಆಧಾರ ಇದ್ದರೇ ಸಾಬೀತುಪಡಿಸಲಿ. ಇಲ್ಲದಿದ್ದರೆ ಅವರ ಹೇಳಿಕೆ ಹಿಂಪಡೆಯುವ ಮೂಲಕ ಮೌನ ವಹಿಸಿದರೆ ಒಳಿತು ಎಂದರು.

ವರುಣ ಕ್ಷೇತ್ರದಲ್ಲಿ ಬಿಡುವಿಲ್ಲದೆ ಸಂಚರಿಸಿ ಕ್ಷೇತ್ರದ ಜನತೆಯ ವಿಶ್ವಾಸ ಗಳಿಸುವ ಮೂಲಕ ಜನರ ಸಮಸ್ಯೆಗಳನ್ನು ಬಗೆಹರಿಸುವ ಕೆಲಸ ಮಾಡುತ್ತಿದ್ದಾರೆ. ಅಲ್ಲದೇ ಕ್ಷೇತ್ರವನ್ನು ಮಾದರಿ ಕ್ಷೇತ್ರವನ್ನಾಗಿಸಿ ಎಲ್ಲರ ಕಷ್ಟಗಳಿಗೆ ಸ್ಪಂದಿಸುತ್ತಿದ್ದಾರೆ ಎಂದು ನುಡಿದರು.

ಡಾ.ಯತೀಂದ್ರ ಅವರಿಗೆ ವರ್ಗಾವಣೆಯಿಂದ ಹಣ ಮಾಡುವ ಅಗತ್ಯ ಇಲ್ಲ. ಇಂತಹ ಮನೋಭಾವ ಅವರಿಗೆ ಇಲ್ಲ. ವೈದ್ಯ ವೃತ್ತಿಯಿಂದ ಬಂದಿದ್ದು, ಸರಳ ಸಜ್ಜನಿಕೆಯ ವ್ಯಕ್ತಿಯಾಗಿದ್ದಾರೆ. ಆದ್ದರಿಂದಲೇ ಅವರು ಹೋದ ಕಡೆಯಲ್ಲೆಲ್ಲಾ ಜನರು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಾರೆ. ಇದನ್ನು ಸಹಿಸದೆ ಇಲ್ಲಸಲ್ಲದ ಆರೋಪ ಮಾಡುತ್ತಿರುವುದು ಸರಿಯಲ್ಲ ಎಂದರು.

ಬಿಜೆಪಿಯಲ್ಲಿ ಮನ್ನಣೆ ಇಲ್ಲದೆ ಹತಾಶರಾಗಿರುವ ಪ್ರತಾಪ್ ಸಿಂಹರವರು ಮೂಲೆಗುಂಪಾಗಿ ಪ್ರತಿನಿತ್ಯ ಪ್ರಚಾರದಲ್ಲಿ ಇರಬೇಕೆಂಬ ಉದ್ದೇಶದಿಂದ ಡಾ.ಯತೀಂದ್ರರನ್ನು ಟೀಕಿಸುತ್ತಿದ್ದು, ಇದನ್ನು ಬಿಟ್ಟು ಅವರ ಕೆಲಸ ನಿರ್ವಹಿಸಲಿ ಎಂದರು.

ಈ ವೇಳೆ ರಂಗಚಾರಿಹುಂಡಿ ಸುನೀಲ್ ಕುಮಾರ್, ಉತ್ತನಹಳ್ಳಿ ಶಿವಣ್ಣ ಹೊಸ ಹಳ್ಳಿ ಶಿವಕುಮಾರ್, ಶಿವನಾಗು, ವೆಂಕಟೇಶ್, ಮಹದೇವ, ಗೋವಿಂದಣ್ಣ ಕನಕ ಮೂರ್ತಿ, ಕುಂಬ್ರಹಳ್ಳಿ ಮಠಕುಮಾರ, ಎಂ.ಸಿ.ಹುಂಡಿ ವಿಜಯ್‌ಕುಮಾರ ಇತರರಿದ್ದರು.

ರೈತರ ಬದುಕು ಉನ್ನತೀಕರಿಸುವ ಮಾರ್ಗ ಅಗತ್ಯ

ಯಾಚೇನಹಳ್ಳಿ ಪಿಎಸಿಎಸ್ ಅಧ್ಯಕ್ಷ ವೈ.ಎನ್.ಶಂಕರೇಗೌಡ

ಬನ್ನೂರು, ಫೆ.13– ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷ ಕಳೆದರೂ ಎಲ್ಲಾ ಕ್ಷೇತ್ರಗಳಿಗಿಂತ ಕೃಷಿ ಕ್ಷೇತ್ರ ಹಿಂದುಳಿದಿದೆ. ಶೇ.90ರಷ್ಟು ಉದ್ಯೋಗವಕಾಶ ಪಡೆದಿರುವ ರೈತರ ಬದುಕು ಈ ಹಿಂದೆ ಹೇಗಿತ್ತೋ ಪ್ರಸ್ತುತ ಅದಕ್ಕಿಂತಲೂ ತೀರ ಹದಗೆಡುವ ಸ್ಥಿತಿಯಲ್ಲಿದೆ. ಹೀಗಾಗಿ ರೈತರ ಬದುಕು ಉನ್ನತೀಕರಿಸುವ ಮಾರ್ಗ ಅಗತ್ಯವಾಗಿದೆ ಎಂದು ಯಾಚೇನಹಳ್ಳಿ ಪಿಎಸಿಎಸ್ ಅಧ್ಯಕ್ಷ ವೈ.ಎನ್.ಶಂಕರೇಗೌಡ ತಿಳಿಸಿದರು.

ದೊಡ್ಡಹೊಸೂರು ಗ್ರಾಮದ ಗಾಂಧಿ ಸಹಜ ಬೇಸಾಯ ಆಶ್ರಮ, ಅಂಕನಹಳ್ಳಿ ಹಾಗೂ ಯಾಚೇನಹಳ್ಳಿ ಗ್ರಾಪಂ ಮತ್ತು ಯಾಚೇನಹಳ್ಳಿ ಪಿಎಸಿಎಸ್ ಸಹಯೋಗದಲ್ಲಿ ನಡೆದ ತೆಂಗು, ಅಡಿಕೆ ಬೆಳೆಗಳಲ್ಲಿ ಕೀಟ ಮತ್ತು ರೋಗಬಾಧೆಗಳ ನಿವಾರಣೆ ಹಾಗೂ ಪೋಷಣೆ, ತೋಟಗಳಲ್ಲಿ ಬಹುಬೆಳೆ ಪದ್ಧತಿ ನಿರ್ವಹಣೆ ಕುರಿತ ಕಾರ್ಯಾಗಾರ ಹಾಗೂ ಪ್ರಾತ್ಯಕ್ಷಿಕೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.



ಕಾರ್ಯಾಗಾರವನ್ನು ವೈ.ಎನ್. ಶಂಕರೇಗೌಡ ಉದ್ಘಾಟಿಸಿದರು.

ಬೇರೆಲ್ಲಾ ಕ್ಷೇತ್ರಗಳಿಗಿಂತ ಕೃಷಿ ಕ್ಷೇತ್ರ ಅಭಿವೃದ್ಧಿಯಾಗಬೇಕಿದ್ದು, ಇಂದು ಶೇ.1 ರಷ್ಟು ಮಾತ್ರ ಅಭಿವೃದ್ಧಿಯಾಗಿದೆ. ಜೀವನ ನಿರ್ವಹಣೆಗಾಗಿ ವಿವಿಧ ಆಯಾಮ ಕಂಡುಕೊಂಡ ರೈತ ಅದರ ಮೂಲಕ ತನ್ನ ಆರ್ಥಿಕ ಪರಿಸ್ಥಿತಿ ಸುಧಾರಣೆ ಕಂಡುಕೊಂಡಿದ್ದಾನೆ ಎಂದರು.

ಕೃಷಿ ವಿಜ್ಞಾನಿ ಡಾ.ಹೆಚ್.ಮಂಜುನಾಥ್ ಮಾತನಾಡಿ, ಹಳೇ ತಂತ್ರಜ್ಞಾನ, ವಿಜ್ಞಾನದ ನೀತಿ ಅನುಸರಿಸಿಕೊಂಡು ಕೃಷಿ ಮಾಡಿದರೆ ರೈತರ ಬದುಕು ಬದಲಾಗುತ್ತದೆ. ಮಣ್ಣಿನ ಪರೀಕ್ಷೆ ಮಾಡಿಸಿದರೆ ಎಲ್ಲಿ ಲೋಪವಾಗಿದೆ ಎಂಬುದು ತಿಳಿಯುತ್ತದೆ ಎಂದರು.

ಇದೇ ವೇಳೆ ಅಡಿಕೆ ಹಾಗೂ ತೆಂಗಿನ ಮರಗಳಲ್ಲಿ ಕಂಡು ಬರುವ ರೋಗವನ್ನು ಆಯುರ್ವೇದ ಪದ್ಧತಿ ಅನುಸರಿಸುವ ಮೂಲಕ ಹೇಗೆ ನಿವಾರಿಸಬಹುದು ಎಂಬುದನ್ನು ರೈತರಿಗೆ ಪ್ರಾತ್ಯಕ್ಷಿಕೆ ಮೂಲಕ ತಿಳಿಸಿಕೊಟ್ಟರು.

ಕಾರ್ಯಕ್ರಮದಲ್ಲಿ ಯಾಚೇನಹಳ್ಳಿ ಪಿಎಸಿಎಸ್ ಉಪಾಧ್ಯಕ್ಷ ವೈ.ಎಂ.ಚಂದ್ರು, ಪಾಂಡುರಂಗ, ವೈ.ಜಿ.ಮಹೇಂದ್ರ, ವೈ.ಕೆ.ಬೋರೇಗೌಡ, ಡಾ.ಬಾಲಕೃಷ್ಣ, ಕೆ.ಟಿ.ವೆಂಕಟೇಶ್, ಸಿಇಓ ವೈ.ಕೆ.ಕ್ಯಾತೇಗೌಡ ಸೇರಿದಂತೆ ಇತರರಿದ್ದರು.


ನಾಳೆ ವಿಶೇಷ ಪೂಜೆ

ಕಂಪಲಾಪುರ, ಫೆ.13– ಇಲ್ಲಿಗೆ ಸಮೀಪದ ಹುನುಗನಹಳ್ಳಿ (ಹೊನ್ನೇಕೊಪ್ಪಲು) ಶ್ರೀಶನೇಶ್ವರ ದೇವಸ್ಥಾನದಲ್ಲಿ ಫೆ.15 ರಂದು 18ನೇ ವರ್ಷದ ವಾರ್ಷಿಕೋತ್ಸವ ಹಾಗೂ ಮಹಾಶಿವರಾತ್ರಿ ಹಬ್ಬದ ಪ್ರಯುಕ್ತ ವಿಶೇಷ ಪೂಜೆ ನಡೆಯಲಿದೆ.

ಬೆಳಗ್ಗೆಯಿಂದಲೇ ಪೂಜಾ ವಿಧಿ ವಿಧಾನಗಳು ನೆರವೇರಲಿದ್ದು, 12 ಗಂಟೆಗೆ ಮಹಾಮಂಗಳಾರತಿ, ಮಧ್ಯಾಹ್ನ 1 ಗಂಟೆಯಿಂದ ಅನ್ನಸಂತರ್ಪಣೆ, ರಾತ್ರಿ 9 ಗಂಟೆಗೆ 'ಶನಿಮಹಾತ್ಮೆ' ಕಥಾ ಕಾಲಕ್ಷೇಪ ಏರ್ಪಡಿಸಲಾಗಿದ್ದು, ಭಕ್ತರು ಸಕಾಲಕ್ಕೆ ಆಗಮಿಸಿ ಭಗವಂತನ ಕೃಪೆಗೆ ಪಾತ್ರರಾಗಬೇಕೆಂದು ಗುಡ್ಡಪ್ಪ ಮಂಜು ತಿಳಿಸಿದ್ದಾರೆ.

ಮುಸ್ಲಿಂ ಬ್ಲಾಕ್‌ನಲ್ಲಿ ನಮ್ಮ ಕ್ಲಿನಿಕ್

ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ದೊಡ್ಡಸ್ವಾಮೇಗೌಡ ಭರವಸೆ



ಸಮಾರಂಭದಲ್ಲಿ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ದೊಡ್ಡಸ್ವಾಮೇಗೌಡರನ್ನು ಸನ್ಮಾನಿಸಲಾಯಿತು.

ಕೆ.ಆರ್.ನಗರ, ಫೆ.13– ನಗರದ ಮುಸ್ಲಿಂ ಬ್ಲಾಕ್ ಜನರ ಅಪೇಕ್ಷೆಯಂತೆ ಈ ಬಡಾವಣೆಯಲ್ಲಿ ನಮ್ಮ ಕ್ಲಿನಿಕ್ ಅನ್ನು ಶಾಸಕರೊಂದಿಗೆ ಚರ್ಚಿಸಿ ತೆರೆಯಲಾಗುವುದು ಎಂದು ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ದೊಡ್ಡಸ್ವಾಮೇಗೌಡ ಭರವಸೆ ನೀಡಿದರು.

ಪಟ್ಟಣದ ಜಾಮೀಯ ಮಸೀದಿಯಲ್ಲಿ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ಮುಸ್ಲಿಂ ಬಡಾವಣೆಯಲ್ಲಿ ನಮ್ಮ ಕ್ಲಿನಿಕ್ ತೆರೆಯುವುದರಿಂದ ಈ ಭಾಗದ 4 ವಾರ್ಡ್‌ಗಳ ಜನತೆಗೆ ಅನುಕೂಲವಾಗಲಿದೆ ಎಂದರು.

ನಾನು ಮತ್ತು ಶಾಸಕ ಡಿ.ರವಿಶಂಕರ್ ಸೇರಿದಂತೆ ನಮ್ಮ ಕುಟುಂಬ ಮುಸ್ಲಿಂ ಸಮುದಾಯದ ಕಷ್ಟ–ಸುಖಗಳಿಗೆ ಭಾಗಿಯಾಗುತ್ತಿದ್ದು, ನಿಮ್ಮ ಕುಟುಂಬದ ಸದಸ್ಯರಾಗಿದ್ದೇವೆ. ಮುಸ್ಲಿಂ ಸಮುದಾಯದವರು ಕೂಡ ಕಾಂಗ್ರೆಸ್ ಪರವಾಗಿದ್ದಾರೆ. ಅದಕ್ಕಾಗಿ ಸಮುದಾಯದ ಜನತೆಗೆ ಕೃತಜ್ಞತೆ ಸಲ್ಲಿಸುವುದಾಗಿ ತಿಳಿಸಿದರು.

ಶಾದಿ ಮಹಲ್‌ಗೆ ಅನುದಾನ ಸೇರಿದಂತೆ ಬಹುತೇಕ ಕೆಲಸ ಪೂರ್ಣಗೊಳಿಸಲಾಗಿದೆ. ಮುಂದಿನ ದಿನಗಳಲ್ಲೂ ಎಲ್ಲಾ ರೀತಿಯ ಸಹಕಾರ ನೀಡಲಾಗು ವುದು. ಹೀಗಾಗಿ ತಾವು ಪಕ್ಷ ಹಾಗೂ ನಮ್ಮ ನಿರೀಕ್ಷೆಯಂತೆ ಎಲ್ಲಾ ಚುನಾವಣೆಯಲ್ಲಿ ನಮ್ಮ ಜೊತೆಗಿರಬೇಕು ಎಂದು ಮನವಿ ಮಾಡಿದರು.

ಇದೇ ವೇಳೆ ದೊಡ್ಡಸ್ವಾಮೇಗೌಡರನ್ನು ಸನ್ಮಾನಿಸಲಾಯಿತು. ಜಾಮೀಯ ಮಸೀದಿ ಕಮಿಟಿ ಅಧ್ಯಕ್ಷ ಅಪ್ಸರ್ ಬಾಬು, ಕಾರ್ಯದರ್ಶಿ ತಸ್ಲಿಮ್ ಪಾಷ, ಖಜಾಂಚಿ ನೇಮಿತ್, ಪದಾಧಿಕಾರಿಗಳಾದ ಇಕ್ಬಾಲ್ ಪಾಷ, ನವೀದ್, ಕೆ.ಆರ್.ನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಎಸ್.ಮಹದೇವ್, ಕಾಂಗ್ರೆಸ್ ವಕ್ತಾರ್ ಸೈಯದ್ ಜಾಬೀರ್, ನಗರ ಕಾಂಗ್ರೆಸ್ ಅಧ್ಯಕ್ಷ ಎಂ.ಜೆ.ರಮೇಶ್, ಕುರುಬರ ಸಂಘದ ನಿರ್ದೇಶಕ ಅಪ್ಪಾಜಿಗೌಡ, ನಗರ ಯೋಜನಾ ಪ್ರಾಧಿಕಾರದ ನಿರ್ದೇಶಕ ಕೆ.ಎನ್.ಪ್ರಸನ್ನ, ಮುಖಂಡರು ಮತ್ತು ಧರ್ಮಗುರುಗಳು ಹಾಜರಿದ್ದರು.

ಆಸ್ಪತ್ರೆಗೆ ಕುಡಿಯುವ ನೀರಿನ ಘಟಕ ಕೊಡುಗೆ

ಹೆಚ್.ಡಿ.ಕೋಟೆ, ಫೆ.13– ರೋಗಿಗಳ ಅನುಕೂಲಕ್ಕಾಗಿ ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ಗಣೇಶ್ ಬ್ಯಾಂಕರ್ಸ್ ಜುವೆಲರ್ಸ್ ಮಾಲೀಕ ಗಣಪತ್ ಜೈನ್ ಅವರು ಶುದ್ಧ ಕುಡಿಯುವ ನೀರಿನ ಘಟಕ ಕೊಡುಗೆ ನೀಡಿದ್ದಾರೆ ಎಂದು ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಹಿರಿಯ ವೈದ್ಯ ಡಾ.ಸೋಮಣ್ಣ ತಿಳಿಸಿದರು.



ಸಾರ್ವಜನಿಕ ಆಸ್ಪತ್ರೆ ಹಿರಿಯ ವೈದ್ಯ ಡಾ.ಸೋಮಣ್ಣ ಮಾತನಾಡಿದರು.

ಪಟ್ಟಣದ ಸಾರ್ವಜನಿಕ ತಾಯಿ ಮಕ್ಕಳ ಆಸ್ಪತ್ರೆಗೆ ನಿತ್ಯ ಗರ್ಭಿಣಿಯರು ಸೇರಿದಂತೆ ನೂರಾರು ರೋಗಿಗಳು ಆಗಮಿಸುತ್ತಾರೆ. ಆಸ್ಪತ್ರೆಗೆ ದಾಖಲಾಗುವ ರೋಗಿಗಳು ಹಾಗೂ ಸಾರ್ವಜನಿಕರಿಗೆ ಕುಡಿಯುವ ನೀರಿನ ಸಮಸ್ಯೆಯನ್ನು ಸಮಾಜ ಸೇವಕ ಗಣೇಶ್ ಬ್ಯಾಂಕರ್ಸ್ ಜುವೆಲರ್ಸ್ ಮಾಲೀಕ ಗಣಪತ್ ಜೈನ್ ಅವರ ಗಮನಕ್ಕೆ ತರಲಾಗಿತ್ತು. ಇದನ್ನರಿತ ಅವರು ರೋಗಿಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಶುದ್ಧ ಕುಡಿಯುವ ನೀರಿನ ಘಟಕವನ್ನು ಕೊಡುಗೆ ನೀಡಿದ್ದಾರೆ. ಇದನ್ನು ರೋಗಿಗಳು ಹಾಗೂ ಸಾರ್ವಜನಿಕರು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ತಿಳಿಸಿದರು.

ದೇವಾಲಯಗಳಿಗೆ ಚೇರ್‌ಗಳ ವಿತರಣೆ: ಪಟ್ಟಣದ ಶ್ರೀವರದರಾಜಸ್ವಾಮಿ ದೇವಾಲಯ, ಮಾರಮ್ಮ ದೇವಾಲಯ, ಆಂಜನೇಯಸ್ವಾಮಿ ದೇವಾಲಯ, ಹೊಳೆ ದಾರಿ ಈಶ್ವರ ದೇವಸ್ಥಾನ, ಗಣಪತಿ ದೇವಸ್ಥಾನ, ಈಶ್ವರ ದೇವಸ್ಥಾನ, ಚಾಮುಂಡೇಶ್ವರಿ, ಹೌಸಿಂಗ್ ಬೋರ್ಡ್ ಗಣಪತಿ ದೇವಸ್ಥಾನ, ಹ್ಯಾಂಡ್ ಪೋಸ್ಟ್ ಗಣಪತಿ ದೇವಸ್ಥಾನಗಳಿಗೆ ಗಣೇಶ್ ಬ್ಯಾಂಕರ್ಸ್ ಜುವೆಲರ್ಸ್ ಮಾಲೀಕ ಗಣಪತ್ ಜೈನ್ ಉಚಿತವಾಗಿ ಚೇರ್‌ಗಳನ್ನು ವಿತರಿಸಿದ್ದಾರೆ.

ಸಾರ್ವಜನಿಕ ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ ಪೂರ್ಣಿಮಾ, ಆರೋಗ್ಯಾಧಿಕಾರಿ ಡಾ.ರವಿಕುಮಾರ್, ಮಕ್ಕಳ ತಜ್ಞರಾದ ಶಾಂತಕುಮಾರ್, ಮುಖಂಡರಾದ ರಾಕೇಶ್ ಶರ್ಮಾ, ಯಶ್ವಂತ್, ನವೀನ್, ರತನ್ ಲಾಲ್, ರವಿ, ಸಮರ್ಥ್ ಲಾಲ್, ಗೋಪಾಲ್, ಸುನೀಲ್, ಬಿಯಾರಾಮ್, ಹರ್ಷಿತ್, ಶಿವಪ್ಪ ಶೆಟ್ಟಿ, ಕನ್ನಡ ಪ್ರಮೋದ್, ಡೈರಿ ಶ್ರೀಕಾಂತ್, ರತನ್, ನಾಗೇಗೌಡ, ನಟರಾಜ್ ಇತರರಿದ್ದರು.

ವಿಜೃಂಭಣೆಯ ಜಾತ್ರಾ ಮಹೋತ್ಸವ




ಕಂಪಲಾಪುರದಲ್ಲಿ ಶ್ರೀಆದಿಶಕ್ತಿ ಗೋಣಹಳ್ಳಿ ಮಾರಮ್ಮ ದೇವಿ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು.

ವರ್ಧಂತೋತ್ಸವ



ಹುಣಸೂರು ತಾಲೂಕಿನ ಗಾವಡಗೆರೆ ಗುರುಲಿಂಗ ಜಂಗಮ ಮಠದಲ್ಲಿ ಮಠದ ಪೀಠಾಧ್ಯಕ್ಷ ನಟರಾಜ ಸ್ವಾಮೀಜಿಯವರ ವರ್ಧಂತೋತ್ಸವ ನಡೆಯಿತು. ಶಾಸಕ ಜಿ.ಡಿ.ಹರೀಶ್‌ಗೌಡರ ಪತ್ನಿ ವರ್ಷ, ಜೆಡಿಎಸ್ ಮುಖಂಡ ಶ್ರೀಧರ್, ಟಿಎಪಿಸಿಎಂಎಸ್ ಉಪಾಧ್ಯಕ್ಷ ಹೊನ್ನಪ್ಪರಾವ್ ಕಾಳಿಂಗೆ ಇತರರಿದ್ದರು.

ನೂತನ ಯಜಮಾನರಿಗೆ ಅಭಿನಂದನೆ



ತಿ.ನರಸೀಪುರದ ಕನಕ ಭವನದಲ್ಲಿ ನಡೆದ ಕುರುಬರ ಸಂಘದ ಸಭೆಯಲ್ಲಿ ಸಂಘದ ದೊಡ್ಡ ಯಜಮಾನರಾಗಿ ಆಯ್ಕೆಯಾದ ರಂಗನಾಥ ಬಾರ್ ಮಾಲೀಕ ಎಂ.ರಾಜು ಅವರನ್ನು ಪುರಸಭೆ ಮಾಜಿ ಸದಸ್ಯ ಬಾದಾಮಿ ಮಂಜು, ಪತ್ರಬರಹಗಾರ ಸಿದ್ದು, ತೇಜಸ್, ನಾಗರಾಜು, ರಾಚೇಗೌಡ, ಪಾರ್ವತಿ ಲಾರಿ ರವಿ, ಮೂಗಟ್ಟಿ, ಸಮಾಜದ ಬಾಂಧವರು ಅಭಿನಂದಿಸಿದರು.

ಹುಣಸೂರನ್ನು ಜಿಲ್ಲೆಯಾಗಿ ಘೋಷಿಸಿ ಅರಸು ಹೆಸರಿಡಿ

• ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಆಗ್ರಹ • ಸಿಎಂ ವಿರುದ್ಧ ಆಕ್ರೋಶ

ಹುಣಸೂರು, ಫೆ.13– ಹುಣಸೂರು ತಾಲೂಕನ್ನು ಜಿಲ್ಲೆಯಾಗಿ ಘೋಷಿಸಿ ಮಾಜಿ ಸಿಎಂ ಡಿ.ದೇವರಾಜ ಅರಸು ಅವರ ಹೆಸರಿಡಬೇಕು ಎಂದು ಆಗ್ರಹಿಸಿದ ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಅವರು, ಸಿಎಂ ಸಿದ್ದರಾಮಯ್ಯ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಸದಾ ಕಾಲ ಮಾಜಿ ಸಿಎಂ ಡಿ.ದೇವರಾಜ ಅರಸು ಅವರ ಬಗ್ಗೆ ಮಾತನಾಡುತ್ತಾರೆ. ಆದರೆ ಅವರ ಹೆಸರಿನಲ್ಲಿ ಯಾವುದೇ ಕಾರ್ಯಕ್ರಮಗಳನ್ನು ಜಾರಿಗೊಳಿಸುತ್ತಿಲ್ಲ. ರಾಜ್ಯಕ್ಕೆ ಅರಸು ಅವರು ನೀಡಿದ ಕೊಡುಗೆ ಇನ್ನೂ ಜೀವಂತವಾಗಿದೆ. ಇಡೀ ದೇಶದಲ್ಲಿ ಅರಸು ಅವರು ಮಾಡಿದ ಅಭಿವೃದ್ಧಿಯನ್ನು ಯಾವೊಬ್ಬ ಮುಖ್ಯಮಂತ್ರಿ ಮಾಡಲು ಸಾಧ್ಯವಿಲ್ಲ. ಅವರು ಇಡೀ ದೇಶವೇ ತಿರುಗಿ ನೋಡುವಂತೆ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದ್ದಾರೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಾನು 10 ಕೆಜಿ ಅಕ್ಕಿ ಕೊಟ್ಟೆ ಎಂದು ಸುಳ್ಳು ಹೇಳುತ್ತಾರೆ. ಆದರೆ ಅವರು ಕೊಟ್ಟಿದ್ದು 5 ಕೆಜಿ, ಕೇಂದ್ರ ಸರ್ಕಾರ ನೀಡಿದ್ದು 5ಕೆಜಿ ಎಂದ ಅವರು ಇದೆಲ್ಲಾ ಸಾಧನೆಯಲ್ಲ. ಬಡವರಿಗೆ 21 ಲಕ್ಷ ಎಕರೆ ಭೂಮಿ ಕೊಟ್ಟಿದ್ದು ಡಿ.ದೇವರಾಜ ಅರಸು. ಅವರು ನೀಡಿದ್ದ ಭೂಮಿಯನ್ನು ರೈತರು ವಂಶ ಪಾರಂಪರ್ಯವಾಗಿ ಉಳಿಸಿಕೊಂಡು ಉಳುಮೆ ಮಾಡಿ ಅವರನ್ನು ನೆನೆಯುತ್ತಿದ್ದಾರೆ ಎಂದರು.



ಸುದ್ದಿಗೋಷ್ಠಿಯಲ್ಲಿ ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಮಾತನಾಡಿದರು.

ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ನನ್ನ ವಿರುದ್ಧ ಮಾಡಿರುವ ಆರೋಪ ಶುದ್ಧ ಸುಳ್ಳು. ನಾನೆಂದು ಅಭಿವೃದ್ಧಿ ಕೆಲಸ ತಡೆದವನಲ್ಲ. ಅಲ್ಲದೇ ಯಾವ 40 ಕೋಟಿ ಅನುದಾನವನ್ನು ತಡೆ ಹಿಡಿದಿಲ್ಲ. ತಡೆದಿದ್ದರೆ ದಾಖಲೆ ಇದ್ದರೆ ನೀಡಲಿ. 15 ವರ್ಷ ಶಾಸಕರಾಗಿದ್ದ ಅವರು ಕ್ಷೇತ್ರಕ್ಕೆ ತಮ್ಮ ಸಾಧನೆ ಏನೆಂದು ತಿಳಿಸಲಿ ಎಂದರು.

ನಾನು ಹುಣಸೂರಿನಲ್ಲಿ ಶಾಸಕನಾಗಿದ್ದು ಕೇವಲ 14 ತಿಂಗಳ ಮಾತ್ರ. ಈ ಅವಧಿಯಲ್ಲಿ ಸಾಕಷ್ಟು ಸಾರ್ವಜನಿಕ ಕೆಲಸ ಮಾಡಿದ್ದೇನೆ. ಹಬ್ಬನಕುಪ್ಪೆ, ಚಿಲ್ಕುಂದ, ಬಲ್ಲೇನಹಳ್ಳಿ ಸೇರಿದಂತೆ 84 ಹಳ್ಳಿಗಳಲ್ಲಿ ಉತ್ತಮ ರಸ್ತೆ ಅಭಿವೃದ್ಧಿ ಪಡಿಸಿದ್ದೇನೆ ಎಂದರು.

ಈ ರಾಜ್ಯದಲ್ಲಿ ಅಕ್ಷರ– ಆರೋಗ್ಯದ ಕೊರತೆ ಹೆಚ್ಚಾಗಿ ಕಾಣುತ್ತಿದೆ. ಅಕ್ಷರ, ಆರೋಗ್ಯವಿಲ್ಲದಿದ್ದರೆ ರಾಜ್ಯದ ಅಭಿವೃದ್ಧಿ ಅಸಾಧ್ಯ. ಸಿದ್ದರಾಮಯ್ಯ ಸರ್ಕಾರದಲ್ಲಿ ಅಕ್ಷರವಿಲ್ಲ, ಆರೋಗ್ಯವೂ ಇಲ್ಲ, ಜೊತೆಗೆ ಉತ್ತಮವಾದ ರಸ್ತೆಗಳು ಇಲ್ಲ, ಆದ್ದರಿಂದ ಅವರನ್ನು ಗುಂಡು ಬಿದ್ದ ರಾಜ್ಯದ ಬಂಡ ನಾಯಕ ಎನ್ನಬಹುದು ಎಂದು ವ್ಯಂಗ್ಯವಾಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಧ್ಯೆ 30 ತಿಂಗಳ ಅಧಿಕಾರ ಹಂಚಿಕೆಯಾಗಿರುವುದು ಸತ್ಯ. ಕರುನಾಡಿನಲ್ಲಿ ಹುಟ್ಟಿ ವಚನಭ್ರಷ್ಟನಾಗಬಾರದು ಸಿದ್ದರಾಮಯ್ಯ ಎಂದ ಅವರು ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುವಲ್ಲಿ, ಪಕ್ಷ ಕಟ್ಟುವಲ್ಲಿ ಡಿ.ಕೆ.ಶಿವಕುಮಾರ್ ಪಾತ್ರ ಹೆಚ್ಚಿದೆ. 17 ಬಜೆಟ್ ಮಂಡಿಸಿರುವ ಸಿದ್ದರಾಮಯ್ಯ ರಾಜ್ಯದ ಅಭಿವೃದ್ಧಿಗೆ ಹೊಸ ಯೋಜನೆಗಳನ್ನು ಬಜೆಟ್‌ನಲ್ಲಿ ತಿಳಿಸಲಿ. ಈ ಸರ್ಕಾರ ಕಳ್ಳ ಹಾಗೂ ಬೋಗಸ್ ಸರ್ಕಾರ ಎಂದರು.

ಈಗಿನ ರಾಜಕಾರಣಿಗಳು, ಅಧಿಕಾರಿಗಳು ಎಲ್ಲರೂ ಅಭಿವೃದ್ಧಿ ಹಿಂದೆ ನಿಲ್ಲದೆ, ಎಲ್ಲರೂ ಹಣದ ಹಿಂದೆ ಓಡುತ್ತಿದ್ದಾರೆ. ಯಾರ ಬಾಯಲ್ಲೂ ನಾನು ಏನು ಕೆಲಸ ಮಾಡಿದೆ ಎನ್ನುವುದಕ್ಕಿಂತ ನಾನು ಎಷ್ಟು ಲಂಚ ಪಡೆದೆ, ಎಷ್ಟು ಭೂಮಿ ಖರೀದಿ ಮಾಡಿದೆ ಎನ್ನುವ ಚರ್ಚೆ ಜಾಸ್ತಿಯಾಗಿದೆ ಎಂದು ವಾಗ್ದಾಳಿ ನಡೆಸಿದರು.

ಸುದ್ದಿಗೋಷ್ಠಿಯಲ್ಲಿ ಮಾಜಿ ನಗರಸಭೆ ಅಧ್ಯಕ್ಷ ಗಣೇಶ್ ಕುಮಾರಸ್ವಾಮಿ ಹಾಜರಿದ್ದರು.

1.17 ಕೋಟಿಯ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ

ನಂಜನಗೂಡು, ಫೆ.13– ತಾಲೂಕಿನ ದೇವರಸನಹಳ್ಳಿ ಗ್ರಾಪಂ ವ್ಯಾಪ್ತಿಯಲ್ಲಿ ಕಳೆದ 25 ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ರಸ್ತೆಗಳನ್ನು ಅಭಿವೃದ್ಧಿಪಡಿಸುವ ಸಲುವಾಗಿ ಕಾಡಾ ಇಲಾಖೆಯಿಂದ 1 ಕೋಟಿ 17 ಲಕ್ಷ ರೂ. ವೆಚ್ಚದಲ್ಲಿ ಗುದ್ದಲಿ ಪೂಜೆ ನೆರವೇರಿಸಲಾಗಿದೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ ತಿಳಿಸಿದರು.

ತಾಲೂಕಿನ ದೇವರಸನಹಳ್ಳಿ, ಹೊಸೂರು ಗ್ರಾಮಗಳಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ಕಳೆದ 25 ವರ್ಷಗಳಿಂದ ದೇವರಸನಹಳ್ಳಿ ಭಾಗದಲ್ಲಿ ರಸ್ತೆಗಳು ಅಭಿವೃದ್ಧಿಯಾಗಿರಲಿಲ್ಲ. ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗಿತ್ತು. ನಾನು ಶಾಸಕನಾಗಿ ಆಯ್ಕೆಯಾದ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕ್ಷೇತ್ರಕ್ಕೆ ಅತೀ ಹೆಚ್ಚು ಅನುದಾನ ನೀಡಿದ್ದರಿಂದಾಗಿ ದೇವರಸನಹಳ್ಳಿ ಗ್ರಾಮವೊಂದರಲ್ಲಿ 50 ಲಕ್ಷ ವೆಚ್ಚದಲ್ಲಿ ಸಿಸಿ ರಸ್ತೆ ನಿರ್ಮಾಣ, 10 ಕೋಟಿ ವೆಚ್ಚದಲ್ಲಿ ನಂಜನಗೂಡಿನಿಂದ ದೇವರಸನಹಳ್ಳಿ–ಉಪ್ಪಿನಹಳ್ಳಿವರೆಗೆ ಮುಖ್ಯ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲಾಗಿತ್ತು. ಈಗ ಕಾಮಗಾರಿ ಮುಕ್ತಾಯದ ಹಂತಕ್ಕೆ ತಲುಪಿದೆ. ಈಗ ತೀವ್ರ ನೆನೆಗುದಿಗೆ ಬಿದ್ದಿದ್ದ ರಸ್ತೆಗಳನ್ನು ಅಭಿವೃದ್ಧಿಪಡಿಸುವ ಸಲುವಾಗಿ ಕಾಡಾ ಇಲಾಖೆಯಿಂದ ಅನುದಾನ ಮಂಜೂರು ಮಾಡಿಸಿ ರಸ್ತೆ ಅಭಿವೃದ್ಧಿಗೆ ಚಾಲನೆ ನೀಡಲಾಗಿದೆ ಎಂದರು.



ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ದರ್ಶನ್ ಧ್ರುವನಾರಾಯಣ್ ಚಾಲನೆ ನೀಡಿದರು.

19 ಲಕ್ಷ ರೂ. ವೆಚ್ಚದಲ್ಲಿ ದೇವರಸನಹಳ್ಳಿಯಿಂದ ಮಾಡ್ರಹಳ್ಳಿ ಗ್ರಾಮಕ್ಕೆ ತೆರಳುವ ಅಣೆಕಟ್ಟೆ ರಸ್ತೆ ಅಭಿವೃದ್ಧಿಗೆ ಚಾಲನೆ ನೀಡಲಾಗಿದೆ. ಅಲ್ಲದೇ 36 ಲಕ್ಷ ರೂ. ವೆಚ್ಚದಲ್ಲಿ ದೇವರಸನಹಳ್ಳಿ ಗ್ರಾಮದ ಪಟ್ಟಲದಮ್ಮ ದೇವಸ್ಥಾನದಿಂದ ಹೊಸಳ್ಳಿ ಗುಂಡ್ಲಾ ಹಾಗೂ ಗೆಜ್ಜೆಗಾರ ಸೇತುವೆಯಿಂದ ಸ್ಮಶಾನಕ್ಕೆ ಹೋಗುವ ಅಣೆಕಟ್ಟೆ ರಸ್ತೆಯನ್ನು ಅಭಿವೃದ್ಧಿಪಡಿಸಲು ಚಾಲನೆ ನೀಡಲಾಗಿದೆ. ತಾಲೂಕಿನ ಹೊಸೂರು ಗ್ರಾಮದಿಂದ ಹಳೇ ಕೆಬ್ಬೇಪುರ ಮಾರ್ಗದ ರಸ್ತೆ ಅಭಿವೃದ್ಧಿಗೆ 12 ಲಕ್ಷ ವೆಚ್ಚದಲ್ಲಿ ಚಾಲನೆ ನೀಡಲಾಗಿದೆ. 50 ಲಕ್ಷ ರೂ. ವೆಚ್ಚದಲ್ಲಿ ಹೊಸೂರು ಗ್ರಾಮದಿಂದ ಕೋಡಿನರಸೀಪುರ ರಸ್ತೆ ಮಾರ್ಗವಾಗಿ ನಂಜನಗೂಡು–ಚಾಮರಾಜನಗರ ಮುಖ್ಯ ರಸ್ತೆವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಈ ರಸ್ತೆ ಅಭಿವೃದ್ಧಿಯಾಗುವುದರಿಂದ ದೇವರಸನಹಳ್ಳಿಯಿಂದ ಸುತ್ತಮುತ್ತಲ ಹಳ್ಳಿಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳು ಅಭಿವೃದ್ಧಿಗೊಂಡು ಸಾರ್ವಜನಿಕರಿಗೆ ಅನುಕೂಲವಾಗಲಿದೆ ಎಂದು ಮಾಹಿತಿ ನೀಡಿದರು.

ಈ ವೇಳೆ ಮಾಜಿ ಶಾಸಕ ಕೇಶವಮೂರ್ತಿ, ಕಾಡಾ ಅಧ್ಯಕ್ಷ ಮರಿಸ್ವಾಮಿ, ಎಸ್‌ಸಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿವಣ್ಣ, ಕಾಂಗ್ರೆಸ್ ಮುಖಂಡರಾದ ರಾಜೇಶ್, ಸಿದ್ದಲಿಂಗಸ್ವಾಮಿ, ಮಂಜುನಾಥ್, ರಘು, ಉಮೇಶ್, ಸುರೇಶ್, ನಂಜುಂಡಸ್ವಾಮಿ, ಚಂದನ್‌ಗೌಡ, ವಿಜಯ ಕುಮಾರ್, ಎಇಇ ಗಣೇಶ್ ಸೇರಿದಂತೆ ಇತರರಿದ್ದರು.

ಕೌಶಲ್ಯವಿಲ್ಲದ ಶಿಕ್ಷಣದಿಂದ ಉದ್ಯೋಗ ಪಡೆಯಲು ಸಾಧ್ಯವಿಲ್ಲ

ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಅಭಿಪ್ರಾಯ

- ವಿಭಿನ್ನ ಆಲೋಚನೆಗಳಿದ್ದರೆ ಮಾತ್ರ ಅವಕಾಶ ಕೈಗೆಟಕುತ್ತದೆ
- ಕೌಶಲ್ಯವಿದ್ದರೆ ಮಾತ್ರವೇ ಹೊಸ ಆಲೋಚನೆ ಹುಟ್ಟುತ್ತದೆ
- ಉನ್ನತ ಶಿಕ್ಷಣದಲ್ಲಿ ಶೇಕಡ 40 ರಷ್ಟು ಮಂದಿ ಎಂಬಿಎ ವಿದ್ಯಾರ್ಥಿಗಳು
- ಜಾಗತಿಕ ಪೈಪೋಟಿ ಎದುರಿಸಲು ಸನ್ನದ್ಧರಾಗಿ



ಮೈಸೂರಿನ ಮಾನಸ ಗಂಗೋತ್ರಿಯ ಯೂನಿವರ್ಸಿಟಿ ಕೆರಿಯರ್ ಹಬ್‌ನಲ್ಲಿ ಶುಕ್ರವಾರ ವ್ಯವಹಾರ ನಿರ್ವಹಣಾ ಅಧ್ಯಯನ ವಿಭಾಗ ಆಯೋಜಿಸಿದ್ದ ಕಾರ್ಪೊರೇಟ್ ಕಾಂಪಿಟೆನ್ಸಿ ಬಿಲ್ಡಿಂಗ್ ಕುರಿತ ಎರಡು ದಿನಗಳ ಕಾರ್ಯಾಗಾರವನ್ನು ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಉದ್ಘಾಟಿಸಿದರು.

ಮೈಸೂರು, ಫೆ.13(ಬಿಎಲ್ ಯು)– ಯಾವುದೇ ಕೌಶಲ್ಯವಿಲ್ಲದೆ ಕೇವಲ ಶಿಕ್ಷಣದಿಂದ ಮಾತ್ರ ಉದ್ಯೋಗ ಪಡೆಯಲು ಸಾಧ್ಯವಿಲ್ಲ. ಇಂದಿನ ಜಾಗತಿಕ ಪೈಪೋಟಿಯಲ್ಲಿ ಬೇರೊಬ್ಬರಿಗಿಂತ ವಿಭಿನ್ನವಾಗಿದ್ದರೆ ಮಾತ್ರವೇ ಅವಕಾಶಗಳು ಕೈಗೆಟಕುತ್ತವೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಅಭಿಪ್ರಾಯಪಟ್ಟರು.

ಮೈಸೂರಿನ ಮಾನಸ ಗಂಗೋತ್ರಿಯ ಯೂನಿವರ್ಸಿಟಿ ಕೆರಿಯರ್ ಹಬ್‌ನಲ್ಲಿ ವ್ಯವಹಾರ ನಿರ್ವಹಣಾ ಅಧ್ಯಯನ ವಿಭಾಗದ ವತಿಯಿಂದ ಆಯೋಜಿಸಿದ್ದ ಕಾರ್ಪೊರೇಟ್ ಕಾಂಪಿಟೆನ್ಸಿ ಬಿಲ್ಡಿಂಗ್ ಕುರಿತ ಎರಡು ದಿನಗಳ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಬೇರೊಬ್ಬರಿಗಿಂತ ನಮ್ಮಲ್ಲಿ ವಿಭಿನ್ನ ಆಲೋಚನೆ ಇದ್ದರೆ ಮಾತ್ರ ಅವಕಾಶಗಳು ದೊರೆಯುತ್ತದೆ. ಇಲ್ಲದಿದ್ದರೆ ಉದ್ಯೋಗ ಪಡೆಯಲು ಸಾಧ್ಯವಿಲ್ಲ ಎಂದು ಎಚ್ಚರಿಸಿದರು.

ಉನ್ನತ ಶಿಕ್ಷಣದಿಂದ ಕ್ರಿಯಾಶೀಲ ಮತ್ತು ಸೃಜನಶೀಲತೆಯ ಸಾಮರ್ಥ್ಯ ಕಂಡುಕೊಳ್ಳಲು ಸಾಧ್ಯವಾಗುತ್ತದೆ. ಇದರಿಂದ ಹಲವು ರೀತಿಯ ಉದ್ಯೋಗಾವಕಾಶಗಳು ತೆರೆದುಕೊಳ್ಳುತ್ತವೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಗಂಭೀರ ಚಿಂತನೆ ಮಾಡಬೇಕು, ನಿಗದಿತ ಗುರಿ ಸಾಧಿಸಲು ಬೇಕಾದ ತಯಾರಿ ಮಾಡಿಕೊಳ್ಳಬೇಕು ಎಂದು ಪ್ರೊ.ಲೋಕನಾಥ್ ಸಲಹೆ ನೀಡಿದರು.

ಬಹಳಷ್ಟು ವಿದ್ಯಾರ್ಥಿಗಳು ಭಾರತದಲ್ಲೇ ಉನ್ನತ ಶಿಕ್ಷಣ ಪಡೆಯುತ್ತಿದ್ದಾರೆ. ಇವರಲ್ಲಿ ಶೇಕಡ 40 ರಷ್ಟು ವಿದ್ಯಾರ್ಥಿಗಳು ಎಂಬಿಎ (ವ್ಯವಹಾರ ನಿರ್ವಹಣಾ ಅಧ್ಯಯನ) ವಿಷಯ ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ. ಭಾರತ ಮಾತ್ರವಲ್ಲದೆ ವಿದೇಶದಲ್ಲೂ ಕೂಡ ಎಂಬಿಎ ವಿದ್ಯಾರ್ಥಿಗಳಿಗೆ ಬಹಳಷ್ಟು ಬೇಡಿಕೆ ಇದ್ದು, ಇದನ್ನು ಸಮರ್ಥವಾಗಿ ಬಳಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಸಾಮರ್ಥ್ಯ ಇದ್ದವರಿಗೆ ಮಾತ್ರ ಅವಕಾಶ ದೊರೆಯುತ್ತದೆ. ಈ ಹಿನ್ನೆಲೆಯಲ್ಲಿ ಪೈಪೋಟಿ ಎದುರಿಸುವ ಶಕ್ತಿಯನ್ನು ರೂಢಿಸಿಕೊಳ್ಳಬೇಕು. ಪೈಪೋಟಿ ಎದುರಿಸಿ ಅಗ್ರ ಸ್ಥಾನ ಪಡೆಯಲು ಸಾಮರ್ಥ್ಯ ರೂಢಿಸಿಕೊಳ್ಳಬೇಕು ಎಂದು ತಿಳಿಸಿದರು.

ಭಾರತಕ್ಕಿಂತಲೂ ಜಪಾನ್‌ನಲ್ಲಿ ಉನ್ನತ ಶಿಕ್ಷಣ ಪಡೆದವರು ಸ್ವಾವಲಂಭಿಗಳಾಗುತ್ತಾರೆ. ಈ ಹಿನ್ನೆಲೆಯಲ್ಲಿ ಭಾರತೀಯರು ಕೂಡ ಶಿಕ್ಷಣ ಮತ್ತು ಕೌಶಲ್ಯ ಪಡೆದು ಸ್ವಾವಲಂಭಿಗಳಾಗಬೇಕು. ಈ ಗುರಿಯನ್ನು ತಲುಪಿದವರು ಯಾರನ್ನೂ ಅವಲಂಬಿಸದೆ ಹೊಸ ಆಲೋಚನೆಗಳ ಮೂಲಕ ಹೊಸ ಕಂಪನಿಗಳನ್ನು ಆರಂಭಿಸುತ್ತಾರೆ. ಇಂತಹ ವಾತಾವರಣ ಭಾರತದಲ್ಲೂ ನಿರ್ಮಾಣವಾಗಬೇಕು ಎಂದು ಪ್ರೊ. ಲೋಕನಾಥ್ ಸಲಹೆ ನೀಡಿದರು.

ಈ ವೇಳೆ ಮಾತನಾಡಿದ ಮೈಸೂರು ವಿಶ್ವವಿದ್ಯಾನಿಲಯದ ಪರೀಕ್ಷಾಂಗ ಕುಲಸಚಿವ ಪ್ರೊ.ಎನ್.ನಾಗರಾಜ್, ನಾಲ್ಕು ಗೋಡೆ ಮಧ್ಯೆ ಕಲಿಯುವ ಶಿಕ್ಷಣದಿಂದ ವಿಭಿನ್ನ ಸಾಮರ್ಥ್ಯ, ಕೌಶಲ್ಯಗಳಿರುವ ಶಿಕ್ಷಣದ ಅಗತ್ಯವಿದೆ. ಇದರಿಂದ ಮಾತ್ರ ಕಾರ್ಪೊರೇಟ್ ಕ್ಷೇತ್ರದಲ್ಲಿ ಅವಕಾಶ ಪಡೆಯಲು ಸಾಧ್ಯ. ಇದಕ್ಕೆ ತಯಾರಾಗಲು ಇಂತಹ ಕಾರ್ಯಾಗಾರಗಳು ವಿದ್ಯಾರ್ಥಿಗಳಿಗೆ ಸಹಕಾರಿಯಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಹಿರಿಯ ಪ್ರಾಧ್ಯಾಪಕ ಪ್ರೊ.ಡಿ.ಆನಂದ್, ಪ್ರೊ.ಎಸ್.ಜೆ.ಮಂಜುನಾಥ್, ಪ್ರೊ.ಆರ್.ಮಹೇಶ್ ಹಾಗೂ ಪ್ರೊ.ಅಮೂಲ್ಯ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಕಾ ದಿ ಫಾರೆಸ್ಟ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರಕ್ಕಸಪುರದೋಳ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಓ ರೋಮಿಯೋ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
45 ಫೇಸ್ ದಿ ಇಯರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲ್ಯಾಂಡ್ ಲಾರ್ಡ್ (ಕ)	4 ಪ್ರದರ್ಶನಗಳು
ರಾಜಕಮಲ್	
ಪೂಕಿ (ತ)	4 ಪ್ರದರ್ಶನಗಳು
ಸಂಗಂ	
ಮೈ ಲಾರ್ಡ್(ತ)	4 ಪ್ರದರ್ಶನಗಳು
ಲಿಡೋ	
ಕರಗ (ಕ) + ಶಿವಲೀಲಾ (ಕ)	3+1 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಓ ಸುಂದರ ರಾಕ್ಷಸಿ (ಕ) + ದೈವ (ಕ)	2+2 ಪ್ರದರ್ಶನಗಳು

ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಇಬ್ಬರೂ ನನಗೆ ಹೈಕಮಾಂಡ್ !



ಮೈಸೂರು,ಫೆ.13(ಜಿಎ)–ಸಿದ್ದರಾಮಯ್ಯನವರು 5 ವರ್ಷ ಮಾತ್ರವಲ್ಲ. ಮುಂದಿನ ಹತ್ತು ಹದಿನೈದು ವರ್ಷಗಳ ಕಾಲವೂ ಮುಖ್ಯಮಂತ್ರಿಯಾಗಿ ಇರಬೇಕು ಎಂಬುದು ನನ್ನಾಸೆ ಎಂದು ಶಾಸಕ ಕೆ.ಹರೀಶ್‌ಗೌಡ ತಿಳಿಸಿದ್ದಾರೆ.

ಮೈಸೂರಿನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಇಬ್ಬರು ಕೂಡ ನನಗೆ ಹೈಕಮಾಂಡ್ ಇದ್ದಂತೆ. ನಾನು ಇಬ್ಬರ ಪರವಾಗಿಯೂ ಇದ್ದೇನೆ ಎಂದರು.

ನಾಯಕತ್ವ ವಿಚಾರದಲ್ಲಿ ಪಕ್ಷದ ಹೈಕಮಾಂಡ್ ನಿರ್ಧಾರವೇ ಅಂತಿಮ ಎಂದು ಸ್ವತಃ ಸಿಎಂ ಸಿದ್ದರಾಮಯ್ಯ ಅವರು ಹೇಳಿದ್ದಾರೆ. ಹೈಕಮಾಂಡ್ ತೆಗೆದುಕೊಳ್ಳುವ ನಿರ್ಧಾರಕ್ಕೆ ನಾವೆಲ್ಲರೂ ಬದ್ಧರಾಗಿರುತ್ತೇವೆ. ನಮ್ಮ ಪಕ್ಷದಲ್ಲಿ ಯಾವುದೇ ಗೊಂದಲವಿಲ್ಲ. ಎಲ್ಲರೂ ಒಗ್ಗಟ್ಟಾಗಿದ್ದೇವೆ ಎಂದು ಸ್ಪಷ್ಟಪಡಿಸಿದರು.

ಶಾಸಕರ ಪ್ರವಾಸಕ್ಕೆ ಪ್ರತಿಕ್ರಿಯಿಸಿ, ಶಾಸಕರು ವಿದೇಶ ಪ್ರವಾಸಕ್ಕೆ ಹೋಗುವುದು ಹೊಸದಲ್ಲ. ನಾನು ಕೂಡ ಆರು ತಿಂಗಳ ಹಿಂದೆ ಫಾರಿನ್ ಟೂರ್‌ಗೆ ಹೋಗಿ ಬಂದಿದ್ದೇನೆ. ಶಾಸಕರ ವಿದೇಶ ಪ್ರವಾಸಕ್ಕೆ ವಿಶೇಷ ಅರ್ಥ ಕಲ್ಪಿಸುವ ಅಗತ್ಯವಿಲ್ಲ ಎಂದರು.

ಶ್ರೀ ಅಮೃತೇಶ್ವರಸ್ವಾಮಿ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಪೂಜೆ

ಮೈಸೂರು, ಫೆ.13(ಎಂಕೆ)– ಮೈಸೂರಿನ ದಿವಾನ್ಸ್ ರಸ್ತೆಯಲ್ಲಿರುವ ಶ್ರೀ ಅಮೃತೇಶ್ವರಸ್ವಾಮಿ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಹಬ್ಬದ ಅಂಗವಾಗಿ ಫೆ.14ರಿಂದ 17ರವರೆಗೆ 54ನೇ ವರ್ಷದ ಮಹಾಶಿವರಾತ್ರಿ ಪೂಜೆ ಏರ್ಪಡಿಸಲಾಗಿದೆ.

ಪಂಚಾಮೃತ ಪುರಸ್ಸರ ರುದ್ರಾಭಿಷೇಕ, 108 ಪಾರ್ಥಿವ ಲಿಂಗ ಪೂಜೆ ಸೇರಿದಂತೆ ವಿವಿಧ ಪೂಜಾ ಕೈಂಕರ್ಯಗಳು ನೆರವೇರಲಿದ್ದು, ಫೆ.17ರ ಮಂಗಳವಾರ ಶಿವರಾತ್ರಿ ಅಮಾವಾಸ್ಯೆ ದಿನದಂದು ಕಾಳಸರ್ಪ ಶಾಂತಿ, ಮೃತ್ಯುಂಜಯ ಹೋಮ, ಮಾಂಗಲ್ಯ ಮಂಗಳ ಚಂಡಿಕಾ ಹೋಮ, ಸ್ವಯಂವರ ಪಾರ್ವತಿ ಹೋಮ, ದಕ್ಷಿಣಾಮೂರ್ತಿ ಹಾಗೂ ಧನ್ವಂತರಿ ಹೋಮ, ಸುಬ್ರಹ್ಮಣ್ಯ ಹೋಮ, ಕುಜಶಾಂತಿ ಹೋಮ, ನವಗ್ರಹ ಹೋಮ ಹಾಗೂ ಶನಿಶಾಂತಿ ಹೋಮ ನಡೆಯಲಿದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಪೌರಕಾರ್ಮಿಕರಿಗೆ ಶೌಚಾಲಯ ಬಳಕೆಗೆ ನಿರಾಕರಣೆ ಬೇಡ

ಮೈಸೂರು, ಫೆ.13– ಮೈಸೂರು ನಗರ ಪಾಲಿಕೆ ವ್ಯಾಪ್ತಿಯಲ್ಲಿ ಸ್ವಚ್ಛತಾ ಕಾರ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ 'ನಗರ ವ್ಯಾಪ್ತಿಯಲ್ಲಿರುವ ಎಲ್ಲಾ ಹೋಟೆಲ್‌ಗಳು, ಪೆಟ್ರೋಲ್ ಬಂಕ್‌ಗಳು, ವಾಣಿಜ್ಯ ಪ್ರತಿಷ್ಠಾನಗಳು ಹಾಗೂ ಸಾರ್ವಜನಿಕ ಸಂಸ್ಥೆಗಳಲ್ಲಿ ಶೌಚಾಲಯ ಬಳಕೆಗೆ ತಕ್ಷಣ ಅವಕಾಶ ನೀಡಬೇಕು ಎಂದು ಪಾಲಿಕೆಯು ಮನವಿ ಮಾಡಿದೆ.

ಪೌರಕಾರ್ಮಿಕರು ದಿನದ ಬಹುಪಾಲು ಸಮಯವನ್ನು ನಗರ ಸ್ವಚ್ಛತೆ ಮತ್ತು ಸಾರ್ವಜನಿಕ ಆರೋಗ್ಯ ಕಾಪಾಡುವ ಕಾರ್ಯದಲ್ಲಿ ದುಡಿಯುತ್ತಿದ್ದು, ಶೌಚಾಲಯ ಬಳಕೆಯಂತಹ ಮೂಲ ಸೌಲಭ್ಯವನ್ನು ನಿರಾಕರಿಸುವುದು ಮಾನವೀಯತೆಗೂ ಹಾಗೂ ಗೌರವಕ್ಕೂ ವಿರುದ್ಧ ಎಂದು ಪಾಲಿಕೆ ತಿಳಿಸಿದೆ

ಪೌರಕಾರ್ಮಿಕರಿಗೆ ಶೌಚಾಲಯ ಬಳಕೆಯನ್ನು ನಿರಾಕರಿಸುವುದು 2013ರ ಮ್ಯಾನುಯಲ್ ಸ್ಕ್ಯಾವೆಂಜಿಂಗ್ ನಿಷೇಧ ಮತ್ತು ಪುನರ್ವಸತಿ ಕಾಯ್ದೆಯ ಉದ್ದೇಶ ಹಾಗೂ ಕೇಂದ್ರ ಸರ್ಕಾರದ ಸ್ವಚ್ಛ ಭಾರತ ಮಿಷನ್–ನಗರ ಮಾರ್ಗಸೂಚಿಗಳು ಹಾಗೂ 1976ರ ಕರ್ನಾಟಕ ಮಹಾನಗರ ಪಾಲಿಕೆಗಳ ಕಾಯ್ದೆಯಡಿ ನಗರ ಸ್ಥಳೀಯ ಸಂಸ್ಥೆಗಳಿಗೆ ನೀಡಿರುವ ಅಧಿಕಾರಗಳಿಗೂ ವಿರುದ್ಧವಾಗಿರುತ್ತದೆ ಎಂದು ತಿಳಿಸುತ್ತಾ ಇಂತಹ ನಿರಾಕರಣೆ ಭಾರತ ಸಂವಿಧಾನದ 21ನೇ ವಿಧಿ ಅಡಿಯಲ್ಲಿ ನೀಡಲಾಗಿರುವ ಜೀವ ಮತ್ತು ಮಾನವ ಗೌರವದ ಹಕ್ಕಿನ ಉಲ್ಲಂಘನೆಯಾಗುತ್ತದೆ ಎಂದು ಪಾಲಿಕೆ ಸ್ಪಷ್ಟಪಡಿಸಿದೆ.

ಆದ್ದರಿಂದ ಎಲ್ಲಾ ಪ್ರತಿಷ್ಠಾನಗಳು ಯಾವುದೇ ಭೇದ ಭಾವವಿಲ್ಲದೆ ಪೌರಕಾರ್ಮಿಕರಿಗೆ ಶೌಚಾಲಯ ಬಳಕೆಗೆ ಸಹಕಾರ ನೀಡಬೇಕು ಎಂದು ಮೈಸೂರು ನಗರ ಪಾಲಿಕೆಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರಲ್ಲಿ ಸವಿತಾ ಮಹರ್ಷಿ ಜಯಂತಿ ಆಚರಣೆ



ಮೈಸೂರಿನ ಕಲಾಮಂದಿರದ ಕಿರುರಂಗ ಮಂದಿರದಲ್ಲಿ ಜಿಲ್ಲಾಡಳಿತದ ವತಿಯಿಂದ ಆಯೋಜಿಸಿದ್ದ ಸವಿತಾ ಮಹರ್ಷಿ ಜಯಂತಿ ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಸವಿತಾ ಮಹರ್ಷಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.

ಮೈಸೂರು,ಫೆ.13(ಎಂಟಿವೈ)– ಸವಿತಾ ಸಮಾಜ ಜನ ಸೂರ್ಯವಂಶದ ಮೂಲ ಪುರುಷ ಎನಿಸಿರುವ ಸವಿತಾ ಮಹರ್ಷಿಗಳ ಆದರ್ಶವನ್ನು ಮೈಗೂಡಿಸಿಕೊಳ್ಳುವುದರೊಂದಿಗೆ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಿ ಸಮಾಜದ ಎಲ್ಲಾ ಕ್ಷೇತ್ರಗಳಲ್ಲೂ ಏಳಿಗೆ ಸಾಧಿಸುವತ್ತ ಗಮನಹರಿಸಬೇಕು ಎಂದು ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಸಲಹೆ ನೀಡಿದ್ದಾರೆ.

ಮೈಸೂರಿನ ಕಲಾಮಂದಿರದ ಕಿರುರಂಗ ಮಂದಿರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಹಾಗೂ ಮಹಾನಗರ ಪಾಲಿಕೆ, ಸವಿತಾ ಮಹರ್ಷಿ ಜಯಂತ್ಯೋತ್ಸವ ಸಮಿತಿ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಸವಿತಾ ಮಹರ್ಷಿ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕಾಯಕ ಸಮುದಾಯಗಳಲ್ಲಿ ಒಂದಾಗಿರುವ ಸವಿತಾ ಸಮಾಜ ಎಲ್ಲಾ ಕ್ಷೇತ್ರಗಳಲ್ಲೂ ಹಿಂದುಳಿದೆ. ಯಾವುದೇ ಸಾಧನೆ ಮಾಡಬೇಕಾದರೂ ಶಿಕ್ಷಣ ಮುಖ್ಯ. ಈ ಹಿನ್ನೆಲೆಯಲ್ಲಿ ಸವಿತಾ ಸಮಾಜ ತಮ್ಮ ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸುವುದರೊಂದಿಗೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಲು ಪ್ರೇರೇಪಿಸಬೇಕು. ಶಿಕ್ಷಣವೊಂದು ಇದ್ದರೆ ಏನು ಬೇಕಾದರೂ ಸಾಧಿಸಬಹುದು. ಇದನ್ನು ಮನಗಂಡು ಮಕ್ಕಳಿಗೆ ಗುಣಮಟ್ಟದ ಉನ್ನತ ಶಿಕ್ಷಣ ಕೊಡಿಸಲು ಕ್ರಮ ಕೈಗೊಳ್ಳಬೇಕು. ಸವಿತಾ ಮಹರ್ಷಿ ಅವರ ಇತಿಹಾಸವನ್ನು ತಿಳಿದುಕೊಂಡು ಸಮಾಜದಲ್ಲಿ ಸಾಮಾಜಿಕ, ಆರ್ಥಿಕ, ಶೈಕ್ಷಣಿಕವಾಗಿ ಮುಂದೆ ಬರಬೇಕು ಎಂದರು.

ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮ ಅಧ್ಯಕ್ಷ ಎಂ.ಎಸ್.ಮುತ್ತುರಾಜ್ ಮಾತನಾಡಿ, ಅಂದು ಡಿ.ದೇವರಾಜ ಅರಸು ಹಾಕಿ ಕೊಟ್ಟಂತಹ ದಾರಿಯಲ್ಲಿ ಇಂದು ನಾವು ನಡೆಯುತ್ತಿದ್ದೇವೆ. ಸಮಾಜದಲ್ಲಿ ನಾವು ಸ್ವಾಭಿಮಾನ ದಿಂದ ಬದುಕಬೇಕು. ಹೋರಾಟಗಳಿಂದ ನಮ್ಮ ಹಕ್ಕುಗಳನ್ನು ಪಡೆಯಬೇಕು. ಸವಿತಾ ಸಮುದಾಯದ ಮೇಲೆ ನಂಬಿಕೆ ಮತ್ತು ಪ್ರೀತಿ ಇರಬೇಕು. ನಮ್ಮ ವೃತ್ತಿಯ ಮೇಲೆ ನಮಗೆ ಅಪಾರವಾದ ಪ್ರೀತಿ, ಗೌರವ ಇರಬೇಕು. ಮಕ್ಕಳಿಗೆ ಹೆಚ್ಚಿನ ಶಿಕ್ಷಣವನ್ನು ನೀಡಿ, ಮಕ್ಕಳ ಬದುಕಿಗೆ ಶಿಕ್ಷಣ ಬಹಳ ಮುಖ್ಯ. ಸಂವಿಧಾನ ಕಲ್ಪಿಸಿರುವ ದಾರಿಯಲ್ಲಿ ನಾವು ಸಾಗಬೇಕು ಎಂದು ತಿಳಿಸಿದರು.

ಸಾಹಿತಿ ಮೈನಾ.ಲೋಕೇಶ್ ಮಾತನಾಡಿ, ಸವಿತಾ ಮಹರ್ಷಿಯ ಬಗ್ಗೆ ಪ್ರತಿಯೊಬ್ಬರು ತಿಳಿದುಕೊಳ್ಳಬೇಕು. ಹಡಪ ಅಂದರೆ ಕ್ಷೌರದ ವಸ್ತುಗಳು ಎಂದರ್ಥ. ಸವಿತಾ ಮಹರ್ಷಿಯವರು ಅಂದಿನ ಯುಗದಲ್ಲಿ ಪ್ರಾವೀಣ್ಯತೆ ಹೊಂದಿದವರಾಗಿದ್ದರು. ಭಕ್ತಿ ಭಂಡಾರಿ ಬಸವಣ್ಣನವರ ಅನುಭವ ಮಂಟಪದಲ್ಲಿ ಒಬ್ಬರಾಗಿದ್ದವರು. ಈ ಹಡಪದ ಅಣ್ಣಪ್ಪನವರು ಅಂದು ಅನುಭವ ಮಂಟಪದ ಉಸ್ತುವಾರಿ ವಹಿಸಿಕೊಂಡಿದ್ದರು. ಇವರು 250ಕ್ಕೂ ಹೆಚ್ಚು ವಚನ ರಚಿಸಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಸಮಾಜದ ಮುಖಂಡರಾದ ಎನ್.ಆರ್.ನಾಗೇಶ್, ಎಂ.ಡಿ.ರಾಜೇಶ್, ಹರೀಶ್ ರೆಡ್ಡಿ, ಆನಂದ್, ನಾಗೇಂದ್ರ ಮುರುಳಿದರ್, ರಾಮಣ್ಣ ಇನ್ನಿತರರು ಉಪಸ್ಥಿತರಿದ್ದರು.

ಭಾರತ್ ಇಂಟರ್‌ನ್ಯಾಷನಲ್ ಟ್ರಾವೆಲ್ಸ್‌ನ ಹಾಲಿ ಡೇ ಮೇಳಕ್ಕೆ ಚಾಲನೆ



ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಬಿಐಟಿ ಹಾಲಿ ಡೇ ಮೇಳ ನಡೆಯಿತು.

ಮೈಸೂರು, ಫೆ.13(ಎಂಕೆ)– ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಭಾರತ್ ಇಂಟರ್ನ್ಯಾಷನಲ್ ಟ್ರಾವೆಲ್ಸ್(ಬಿಐಟಿ) ಗ್ರೇಟ್ ಇಂಡಿಯನ್ ಸಮ್ಮರ್ ಟ್ರಾವೆಲ್ ಸೇಲ್ ಅಂಗವಾಗಿ ಆಯೋಜಿಸಿದ್ದ ಎರಡು ದಿನಗಳ ಹಾಲಿ ಡೇ ಮೇಳಕ್ಕೆ ಶುಕ್ರವಾರ ಚಾಲನೆ ದೊರೆಯಿತು.

ಮೇಳದಲ್ಲಿ ದೇಶೀಯ ಹಾಗೂ ಅಂತರ ರಾಷ್ಟ್ರೀಯ ಎರಡೂ ಆಕರ್ಷಕ ಪ್ರವಾಸ ಪ್ಯಾಕೇಜ್‌ಗಳನ್ನು ಪ್ರಕಟಿಸಲಾಗಿದ್ದು, ಮೇಳದಲ್ಲಿ ಬುಕಿಂಗ್ ಮಾಡುವವರಿಗೆ ವಿಶೇಷ ರಿಯಾಯ್ತಿಗಳನ್ನು ನೀಡಲಾಗುತ್ತಿದೆ. ಮೇಳದಲ್ಲಿ ರಾಯಲ್ ಕೆರಿಬಿಯನ್ ಮತ್ತು ಗ್ಲೋಬಸ್‌ನಂತಹ ಪ್ರಯಾಣ ಪಾಲುದಾರ ಮಳಿಗೆಗಳಿದ್ದು, ಬಿಐಟಿ ಕೈಗೆಟಕುವ ದರದಲ್ಲಿ ಮೌಲ್ಯ ಆಧಾರಿತ ಪ್ಯಾಕೇಜ್‌ಗಳನ್ನು ನೀಡಲಾಗುತ್ತಿದೆ.

ಪ್ರಯಾಣ ಕ್ಷೇತ್ರದಲ್ಲಿ ಭಾರತ್ ಇಂಟರ್‌ನ್ಯಾಷನಲ್ ಟ್ರಾವೆಲ್ಸ್ 3 ದಶಕಗಳಿಗೂ ಹೆಚ್ಚು ಅನುಭವವನ್ನು ಹೊಂದಿದ್ದು, ಬೆಂಗಳೂರು, ಮಂಗಳೂರು ಮತ್ತು ಪುಣೆಯಲ್ಲಿ ಶಾಖೆಗಳನ್ನು ಹೊಂದಿದ್ದು, ಎಲ್ಲಾ ರೀತಿಯ ವಾಹನಗಳ ದೊಡ್ಡ ಫ್ಲೀಟ್‌ನೊಂದಿಗೆ ಕಾರ್ಪೊರೇಟ್ ಪ್ರಯಾಣದಲ್ಲಿ ಪರಿಣತಿ ಹೊಂದಿದೆ.

ತಾಜ್ ರೆಸಾರ್ಟ್ ವಿರುದ್ಧದ ಹೋರಾಟದ ಮಾದರಿಯಲ್ಲಿ ಚಳವಳಿ ರೂಪಿಸಿ

ವಿಧಾನ ಪರಿಷತ್ ಸದಸ್ಯ ಡಾ.ಕೆ.ಶಿವಕುಮಾರ್ ಸಲಹೆ



ಮೈಸೂರು ಜಿಲ್ಲೆ ಹುಣಸೂರಿನ ಡೀಡ್ ಸಂಸ್ಥೆಯ ಆವರಣದಲ್ಲಿ ಶುಕ್ರವಾರ ಆಯೋಜಿಸಿದ್ದ 6 ನೇ ಆದಿವಾಸಿ ಜನತಾ ಪಾರ್ಲಿಮೆಂಟ್ ಅಧಿವೇಶನವನ್ನು ವಿಧಾನ ಪರಿಷತ್ ಸದಸ್ಯ ಡಾ.ಕೆ.ಶಿವಕುಮಾರ್ ಉದ್ಘಾಟಿಸಿದರು.

ಮೈಸೂರು, ಫೆ.13(ಬಿಎಲ್‌ಯು)– ನಾಗರಹೊಳೆ ಅಭಯಾರಣ್ಯದಲ್ಲಿ ಈ ಹಿಂದೆ ನಡೆದ ತಾಜ್ ರೆಸಾರ್ಟ್ ವಿರುದ್ಧದ ಹೋರಾಟದ ಮಾದರಿಯಲ್ಲೆ ಆದಿವಾಸಿಗಳು ಈಗ ಸಮರ್ಥ ಹೋರಾಟ ಮಾಡಬೇಕು ಎಂದು ವಿಧಾನ ಪರಿಷತ್ ಸದಸ್ಯ ಡಾ.ಕೆ. ಶಿವಕುಮಾರ್ ಸಲಹೆ ನೀಡಿದರು.

ಹುಣಸೂರಿನ ಡೀಡ್ ಸಂಸ್ಥೆಯ ಆವರಣದಲ್ಲಿ ಆಯೋಜಿಸಿದ್ದ 6 ನೇ ಆದಿವಾಸಿ ಜನತಾ ಪಾರ್ಲಿಮೆಂಟ್ ಅಧಿವೇಶನ ಉದ್ಘಾಟಿಸಿ ಮಾತನಾಡಿದ ಅವರು, ಗಟ್ಟಿಯಾದ ಚಳವಳಿ ರೂಪಿಸುವ ಮೂಲಕ ಆದಿವಾಸಿಗಳು ತಮ್ಮ ಹಕ್ಕನ್ನು ಪ್ರತಿಪಾದಿಸಬೇಕು ಎಂದು ಕಿವಿಮಾತು ಹೇಳಿದರು.

ಸರ್ಕಾರದಿಂದ ದೊರೆಯಬೇಕಾದ ಸವಲತ್ತು ಪಡೆಯಲು ಎಲ್ಲರೂ ಒಟ್ಟಾಗಿ ಹೋರಾಟ ಮಾಡಬೇಕು. ಏಕ ವ್ಯಕ್ತಿಯ ಹೋರಾಟದಿಂದ ಫಲ ಸಿಗುವುದಿಲ್ಲ, ಬದಲಿಗೆ ಎಲ್ಲರೂ ಒಗ್ಗೂಡಿ ಹೋರಾಟ ಮಾಡಿದರೆ ನಮಗೆ ದಕ್ಕಬೇಕಾದ ಸೌಲಭ್ಯವನ್ನು ಪಡೆದುಕೊಳ್ಳಲು ಸಾಧ್ಯ ಎಂದು ಡಾ.ಶಿವಕುಮಾರ್ ಅಭಿಪ್ರಾಯಪಟ್ಟರು.

ವಲಸೆ ಹೋಗುವ ಸಂದರ್ಭದಲ್ಲಿ ನಿಮ್ಮ ಮಕ್ಕಳನ್ನು ಕರೆದೊಯ್ಯುವುದು ತಪ್ಪು. ಇದರಿಂದ ಮಕ್ಕಳಿಗೆ ಶಿಕ್ಷಣ ದೊರೆಯುವುದಿಲ್ಲ, ಅವು ದುರಭ್ಯಾಸಕ್ಕೆ ಒಳಗಾಗುತ್ತವೆ. ಜೊತೆಗೆ ಆರೋಗ್ಯ ಕೂಡ ಕ್ಷೀಣಿಸುತ್ತದೆ. ಇದನ್ನು ಅರ್ಥ ಮಾಡಿಕೊಂಡು ಮಕ್ಕಳಿಗೆ ಒಂದೆಡೆ ಶಿಕ್ಷಣ ನೀಡಬೇಕು ಎಂದು ಸಲಹೆಯಿತ್ತರು.

ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಮಾಸ್ತಮ್ಮ ಅವರಿಗೆ ಸೂರು ಇಲ್ಲದೆ ಗುಡಿಸಲಿನಲ್ಲಿ ಬದುಕುತ್ತಿದ್ದಾರೆ. ಶೀಘ್ರದಲ್ಲೇ ಅವರಿಗೆ ನಿವೇಶನ ನೀಡಿ, ಮನೆ ನಿರ್ಮಾಣ ಮಾಡಿಕೊಡುವುದಾಗಿ ಡಾ.ಶಿವಕುಮಾರ್ ಭರವಸೆ ನೀಡಿದರು.

ಸಾಹಿತ್ಯ–ಸಿನಿಮಾಕ್ಕೆ ನಿರಂತರ ಸಂಬಂಧವಿದೆ

- ವಿದ್ವಾಂಸ ಪ್ರೊ.ರಾಜಪ್ಪ ದಳವಾಯಿ ಅಭಿಮತ
- ಸಾಹಿತ್ಯ–ಸಿನಿಮಾ ಕುರಿತ ಪ್ರಚಾರೋಪನ್ಯಾಸ



ಮೈಸೂರಿನ ಕುವೆಂಪುನಗರದಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಭಾಂಗಣದಲ್ಲಿ ನಡೆದ 'ಸಾಹಿತ್ಯ ಮತ್ತು ಸಿನಿಮಾ' ಕುರಿತು ಪ್ರಚಾರೋಪನ್ಯಾಸ ಕಾರ್ಯಕ್ರಮವನ್ನು ವಿದ್ವಾಂಸ ಪ್ರೊ.ರಾಜಪ್ಪ ದಳವಾಯಿ ಉದ್ಘಾಟಿಸಿದರು.

ಮೈಸೂರು, ಫೆ.13(ಎಂಕೆ)– ಸಾಹಿತ್ಯ ಮತ್ತು ಸಿನಿಮಾ ತೀವ್ರ ಮತ್ತು ನಿರಂತರ ಸಂಬಂಧವಿದ್ದು, ಸಾಹಿತ್ಯವು ಶಬ್ದಗಳ ಮೂಲಕ ಓದುಗರ ಕಲ್ಪನಾ ಲೋಕ ವಿಸ್ತರಿಸಿದರೆ, ಸಿನಿಮಾ ಸಂಗೀತ, ಧ್ವನಿ ಮತ್ತು ದೃಶ್ಯಗಳ ಮೂಲಕ ಕಥೆಯನ್ನು ಜೀವಂತಗೊಳಿಸುತ್ತದೆ ಎಂದು ವಿದ್ವಾಂಸ ಪ್ರೊ.ರಾಜಪ್ಪ ದಳವಾಯಿ ತಿಳಿಸಿದರು.

ಮೈಸೂರಿನ ಕುವೆಂಪುನಗರದಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಭಾಂಗಣದಲ್ಲಿ ಮೈಸೂರು ವಿವಿ ಪ್ರಸಾರಾಂಗದ ವತಿಯಿಂದ ಶುಕ್ರವಾರ ಆಯೋಜಿಸಿದ್ದ ಪ್ರಚಾರೋಪನ್ಯಾಸ ದಲ್ಲಿ 'ಸಾಹಿತ್ಯ ಮತ್ತು ಸಿನಿಮಾ' ಕುರಿತು ಮಾತನಾಡಿದ ಅವರು, ಸಾಹಿತ್ಯವು ಸಿನಿಮಾಗಳಿಗೆ ಮೂಲ ಕಥಾವಸ್ತು ಒದಗಿಸುತ್ತದೆ ಎಂದರು.

ಸಾಹಿತ್ಯ ಕೃತಿಯೊಂದನ್ನು ಆಧರಿಸಿ ಸಿನಿಮಾ ಮಾಡುವಾಗ, ಮೂಲ ಕೃತಿಯ ಸಾರ ಉಳಿಸಿಕೊಳ್ಳುವುದು ಒಂದು ಸವಾಲಿನ ಪ್ರಕ್ರಿಯೆಯಾಗಿದೆ. ಅದರಂತೆ ಕನ್ನಡ ಚಿತ್ರರಂಗದಲ್ಲಿ ಕೃತಿಗಳು ಮತ್ತು ಕಾದಂಬರಿ ಆಧರಿಸಿದ ಚಲನಚಿತ್ರಗಳು ವಿಶೇಷ ಸ್ಥಾನ ಪಡೆದಿವೆ ಎಂದು ಹೇಳಿದರು.

ಪ್ರಸ್ತುತ ರೀಲ್ಸ್ ಹಿಂದೆ ಬಿದ್ದಿರುವ ಜನರಿಗೆ ಸಿನಿಮಾವನ್ನು ಪೂರ್ತಿಯಾಗಿ ನೋಡುವ ವ್ಯವದಾನ ಇಲ್ಲ. ಸಿನಿಮಾದ ಒಂದೆರಡು ದೃಶ್ಯ ನೋಡಿ ಸಿನಿಮಾ ಚೆನ್ನಾಗಿಲ್ಲ ಎಂಬ ನಿರ್ಧಾರಕ್ಕೆ ಬರುತ್ತಾರೆ. ಕೆಲವರು ಸಿನಿಮಾದ ಪೋಸ್ಟರ್ ನೋಡಿಯೇ ಚೆನ್ನಾಗಿಲ್ಲ ಎಂಬ ಅಭಿಪ್ರಾಯಕ್ಕೆ ಬಂದುಬಿಡುತ್ತಾರೆ. ಹಾಗಾಗಿ ಸಿನಿಮಾ ನೋಡುವ ದೃಷ್ಟಿಕೋನ ಬದಲಾಗಬೇಕು ಎಂದು ತಿಳಿಸಿದರು.

ಎಐ ಮೂಲಕ ಸಿನಿಮಾ: ತಂತ್ರಜ್ಞಾನ ಬೆಳೆದಂತೆ ಸಿನಿಮಾ ಕ್ಷೇತ್ರದಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಮೊಬೈಲ್ ಬಳಸಿಕೊಂಡು ಎಐ ಮೂಲಕ ಸಿನಿಮಾ ನಿರ್ಮಾಣ ಮಾಡುವ ಮಟ್ಟಕ್ಕೆ ತಂತ್ರಜ್ಞಾನ ಬೆಳೆದಿದೆ. ಇದಕ್ಕಾಗಿ ವಿದ್ಯಾರ್ಥಿಗಳಲ್ಲಿ ಕೌಶಲ ಮುಖ್ಯ. ವಿದ್ಯಾರ್ಥಿಗಳು ಮೊಬೈಲ್ ಅನ್ನು ಉತ್ತಮ ಕಾರ್ಯಗಳಿಗೆ ಬಳಕೆ ಮಾಡಿಕೊಳ್ಳಲು ಕಲಿಯಬೇಕು ಎಂದು ಸಲಹೆ ನೀಡಿದರು.

ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಡಾ.ಪಿ.ಬೆಟ್ಟೇಗೌಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮೈಸೂರು ವಿಶ್ವವಿದ್ಯಾಲಯದ ಪ್ರಸಾರಾಂಗದ ನಿರ್ದೇಶಕ ಪ್ರೊ.ಎಂ.ನಂಜಯ್ಯ ಹೊಂಗನೂರು, ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಆರ್.ಗುರುಸ್ವಾಮಿ, ಪ್ರಾಧ್ಯಾಪಕಿ ರುಕ್ಮಿಣಿ ಮತ್ತಿತರರು ಉಪಸ್ಥಿತರಿದ್ದರು.

ಜನರ ಕೆಲಸ ಮಾಡಲು ಬಂದವರ ಬಳಿ ಎಲ್ಲಿಂದ ಬಂತು ಕೋಟಿ ಕೋಟಿ ಹಣ...!

- ಹಿರಿಯ ನಟ ಮುಖ್ಯಮಂತ್ರಿ ಚಂದ್ರು ಪ್ರಶ್ನೆ
- ಸರ್ಕಾರಿ ಮಹಿಳಾ ಕಾಲೇಜಲ್ಲಿ ಪ್ರಜಾಪ್ರಭುತ್ವ ಕುರಿತ ಸಂವಾದ



'ಭವಿಷ್ಯದಲ್ಲಿ ಪ್ರಜಾಪ್ರಭುತ್ವದ ರಕ್ಷಣೆ ಜವಾಬ್ದಾರಿ ಯುವಶಕ್ತಿ ಕೈಯಲ್ಲಿ' ಸಂವಾದದಲ್ಲಿ ಹಿರಿಯ ನಟ ಮುಖ್ಯಮಂತ್ರಿ ಚಂದ್ರು ಮಾತನಾಡುತ್ತಿರುವುದು.

ಮೈಸೂರು, ಫೆ.13(ಎಂಕೆ)– ಸಂವಿಧಾನದ ಅಡಿಯಲ್ಲಿ ಕೆಲಸ ಮಾಡುವ ಶಾಸಕಾಂಗ ಮತ್ತು ಕಾರ್ಯಾಂಗ ರಿಪೇರಿಯಾಗಬೇಕಾದರೆ, ನ್ಯಾಯಾಂಗ ವ್ಯವಸ್ಥೆ ಎಲ್ಲರಿಗೂ ಸಮಾನವಾಗಿರಬೇಕಾದರೆ ಪ್ರಜಾಪ್ರಭುತ್ವದಲ್ಲಿ ನೀಡಿರುವ ಮತದಾನವನ್ನು ಕಡ್ಡಾಯವಾಗಿ ಮತ್ತು ಯೋಗ್ಯರಿಗೆ ಮಾಡಬೇಕು ಎಂದು ಮಾಜಿ ಶಾಸಕ ಹಾಗೂ ಹಿರಿಯ ನಟ ಮುಖ್ಯಮಂತ್ರಿ ಚಂದ್ರು ಕರೆ ನೀಡಿದರು.

ಮೈಸೂರಿನ ವಿಜಯನಗರ 4ನೇ ಹಂತದಲ್ಲಿರುವ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನಲ್ಲಿ ದಾರಿ ಫೌಂಡೇಷನ್ ಸಹಯೋಗದೊಂದಿಗೆ ಆಯೋಜಿಸಿದ್ದ 'ಭವಿಷ್ಯದಲ್ಲಿ ಪ್ರಜಾಪ್ರಭುತ್ವದ ರಕ್ಷಣೆ ಜವಾಬ್ದಾರಿ ಯುವಶಕ್ತಿ ಕೈಯಲ್ಲಿ' ಕುರಿತ ಸಂವಾದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಪ್ರಜಾಪ್ರಭುತ್ವ ಉಳಿಯಬೇಕಾದರೆ ಅನ್ನದಾನ, ಗೋದಾನ, ರಕ್ತದಾನದಂತೆ ಶ್ರೇಷ್ಠವಾದ ಮತದಾನವನ್ನು ಕಡ್ಡಾಯವಾಗಿ ಮತ್ತು ನಮ್ಮೆಲ್ಲರ ರಕ್ಷಣೆ ಹಾಗೂ ಅಭಿವೃದ್ಧಿ ಪರವಾಗಿರುವ ಯೋಗ್ಯರಿಗೆ ಮಾಡಬೇಕು ಎಂದು ತಿಳಿಸಿದರು.

ಮಹಾತ್ಮ ಗಾಂಧಿಯವರು ಭಾರತಕ್ಕೆ ಸ್ವಾತಂತ್ರ್ಯ ತಂದುಕೊಟ್ಟರೆ, ಡಾ.ಬಿ.ಆರ್.ಅಂಬೇಡ್ಕರ್ ಸಂವಿಧಾನ ನೀಡಿದರು. ಬಸವಣ್ಣನವರು ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ, ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ. ಇದೇ ಅಂತರಂಗಶುದ್ಧಿ, ಇದೇ ಬಹಿರಂಗಶುದ್ಧಿ ಎಂದೇಳುವ ಮೂಲಕ ಏಳು ವಾಕ್ಯದಲ್ಲೇ ಜೀವನ ಸಂವಿಧಾನ ಕೊಟ್ಟರು. ಆದರೆ, ಇಂದು ಅದೆಲ್ಲಾ ಉಲ್ಟಾ ಆಗುತ್ತಿದೆ. ಕಳ್ಳರ, ಕೊಲೆಗಡುಕರ ಸಂಖ್ಯೆ ಹೆಚ್ಚಾಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಮನೆ ಮಂದಿಯೆಲ್ಲಾ ಎಂಎಲ್‌ಎ, ಎಂಎಲ್‌ಸಿಗಳಾದರೆ ನಾವೇನು ಅವರ ಮನೆ ಜೀತ ಮಾಡಬೇಕಾ... ಜನರ ಕೆಲಸ ಮಾಡಲು ಬಂದವರ ಬಳಿ ಎಲ್ಲಿಂದ ಬಂತು ಕೋಟಿ ಕೋಟಿ... ನಮ್ಮ ಹಣವನ್ನೇ ತಿಂದು ನಮ್ಮನ್ನೇ ಗುಲಾಮರನ್ನಾಗಿ ಮಾಡಿಕೊಳ್ಳುತ್ತಿದ್ದಾರೆ. ಆ ಅಧಿಕಾರಿ ಮನೆಯಲ್ಲಿ ಅಷ್ಟು ಕೋಟಿ... ಈ ಅಧಿಕಾರಿ ಮನೆಯಲ್ಲಿ ಇಷ್ಟು ಕೋಟಿ ಸಿಕ್ತು ಎನ್ನುವಾಗ, ಅಧಿಕಾರದಲ್ಲಿರುವವರು ತಮ್ಮಿಷ್ಟದಂತೆ ತೀರ್ಪು ಬರೆಸಿಕೊಳ್ಳುವಾಗ ಸಂವಿಧಾನ ಯಾಕೆ ಬೇಕು. ಆದ್ದರಿಂದ ಕೆಟ್ಟಿರುವ ಶಾಸಕಾಂಗ ಸರಿಯಾಗಬೇಕಾದರೆ ಇರುವುದು ಒಂದೇ ದಾರಿ ಅದು ಮತದಾನ ಎಂದರು.

ಒಂದು ಸಣ್ಣ ವಸ್ತು ಖರೀದಿ ಮಾಡಲು ಹತ್ತಾರು ಬಾರೀ ಯೋಚಿಸುವಾಗ ಐದು ವರ್ಷ ಆಡಳಿತ ನಡೆಸಿ, ನಮಗೆ ರಕ್ಷಣೆ ನೀಡುವ, ಅಭಿವೃದ್ಧಿ ಕೆಲಸ ಮಾಡುವ ವ್ಯಕ್ತಿಯ ಆಯ್ಕೆ ಮಾಡಬೇಕು. ಲೂಟಿ ಹೊಡೆದಿದ್ದರೂ ಆತ ನಮ್ಮ ಚಿಕ್ಕಪ್ಪ.. ದೊಡ್ಡಪ್ಪ.. ಎಂದು ವೋಟ್ ಹಾಕುವುದಲ್ಲ. ಕುಟುಂಬದಷ್ಟೇ ರಾಷ್ಟ್ರದ ಅಭಿವೃದ್ಧಿ ಮುಖ್ಯ ಎಂಬ ಮನಸ್ಥಿತಿ ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಶಾಸಕಾಂಗ ಕೆಟ್ಟಿದೆ. ಕಾರ್ಯಾಂಗ ಕೆಟ್ಟಿದೆ. ನ್ಯಾಯಾಂಗವೂ ಕೂಡ ಅಧಿಕಾರದಲ್ಲಿರುವವರ ಹಿಡಿತಕ್ಕೆ ಸಿಕ್ಕಾಕೊಂಡು ಅವರ ಕೈ ಕೆಳಗೆ ಕೆಲಸ ಮಾಡುವ ಮಟ್ಟಕ್ಕೆ ಹೋಗ್ತಾ ಇದೆ ಎಂದರೆ ನಾವುಗಳು ನ್ಯಾಯವನ್ನು ಎಲ್ಲಿ ಕೇಳಬೇಕು ಯೋಚನೆ ಮಾಡಿ. ಎಲ್ಲಿ ತಪ್ಪಾಗಿದೆ ಎಂಬುದನ್ನು ತಿಳಿದುಕೊಳ್ಳಿ. ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗದಲ್ಲಿ ಸುಧಾರಣೆ ಆಗಬೇಕಾದರೆ, ಪ್ರಜಾಪ್ರಭುತ್ವ ಉಳಿಯಬೇಕಾದರೆ ಶಿಕ್ಷಣ ಮತ್ತು ಆರೋಗ್ಯ ಪ್ರತಿಯೊಬ್ಬರಿಗೂ ಉಚಿತವಾಗಿ ಸಿಗಬೇಕು. ದುಡ್ಡಿಲ್ಲದೆ ಚುನಾವಣೆಗಳು ನಡೆಯಬೇಕು. ಅರ್ಹತೆ ಇರುವ ಎಲ್ಲರೂ ಚುನಾವಣೆಗೆ ಸ್ಪರ್ಧಿಸುವಂತಾಗಬೇಕು ಎಂದು ತಿಳಿಸಿದರು.

ಕೀಳರಿಮೆ ಬಿಡಿ: ಎಲ್ಲಾ ಕಾಲಕ್ಕೂ ಮೋದಿಯೇ ಇರುವುದಿಲ್ಲ. ನಂತರ ಈಗಿನ ವಿದ್ಯಾರ್ಥಿಗಳ ಸರದಿ. ಹಾಗಾಗಿ ಕೀಳರಿಮೆ ಬಿಡಿ. ಸಂವಿಧಾನ ನೀಡಿರುವ ಮತದಾನದ ಹಕ್ಕನ್ನು ಕಡ್ಡಾಯವಾಗಿ ಮಾಡಿ. ಅರ್ಹತೆ ಇರುವ ವ್ಯಕ್ತಿಯನ್ನು ಆಯ್ಕೆ ಮಾಡಿ. ತಪ್ಪುಗಳು ಕಂಡು ಬಂದರೆ ಪ್ರಶ್ನಿಸಿ. ಪ್ರಜಾಪ್ರಭುತ್ವ ರಕ್ಷಣೆ ಮಾಡಿ ಎಂದು ಕರೆ ನೀಡಿದರು.

ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಪ್ರೊ.ಭದ್ರಗಿರಿಯಯ್ಯ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಪತ್ರಕರ್ತ ಕೆ.ನರಸಿಂಹಮೂರ್ತಿ, ರೈತರ ಶಾಲೆ ಸಂಸ್ಥಾಪಕ ಸತ್ಯಮೂರ್ತಿ, ದಾರಿ ಫೌಂಡೇಷನ್ ಅಧ್ಯಕ್ಷ ಎಲ್.ರಂಗಯ್ಯ, ಕಾರ್ಯದರ್ಶಿ ತಗಡೂರು ವೀರೇಶ್ ಕುಮಾರ್ ಮಹಾಮನೆ, ಖಜಾಂಚಿ ವಿಶ್ವನಾಥ್ ಕುಲಕರ್ಣಿ, ಸಂಚಾಲಕರಾದ ಪ್ರಭಾಕರ್, ಎಂ.ಕೆ.ಅಪ್ಪಯ್ಯ, ಆರಿಫಾ ಸುಲ್ತಾನಾ ಮತ್ತಿತರರಿದ್ದರು.

ಮೈಸೂರಲ್ಲಿ ಡ್ರಗ್ಸ್...!

ಮೈಸೂರಲ್ಲಿ ಡ್ರಗ್ಸ್ ವಿಚಾರ ಕೇಳುತ್ತಿದ್ದರೆ ಸಂವಿಧಾನ ಇದೆಯಾ... ಪ್ರಜಾಪ್ರಭುತ್ವ ಇದೆಯಾ ಅನ್ನಿಸುತ್ತಿದೆ. ಸಾವಿರಾರು ಕೋಟಿ ರೂ. ಡ್ರಗ್ಸ್ ಇಲ್ಲಿ ತಯಾರಾಗ್ತಾ ಇದೆ ಎಂದರೆ ಯುವ ಸಮೂಹದ ಮೇಲೆ ಎಂತಹ ಪರಿಣಾಮ ಬೀರುತ್ತೆ ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆ. ಎಷ್ಟರ ಮಟ್ಟಿಗೆ ಕಳ್ಳದಂಧೆ ನಡೆಯುತ್ತಿರಬಹುದು.

– ಮುಖ್ಯಮಂತ್ರಿ ಚಂದ್ರು, ಹಿರಿಯ ನಟ